सत्यमेव जयते

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

# ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

भारत के नियंत्रक एवं महालेखापरीक्षक ✦ COMPTROLLER & AUDITOR GENERAL OF INDIA

सत्यमेव जयते

SUPREME AUDIT INSTITUTION OF INDIA

लोकहितार्थ सत्यनिष्ठा

Dedicated to Truth in Public Interest

सत्यमेव जयते

ಕರ್ನಾಟಕ ಸರ್ಕಾರ

2024ನೇ ವರದಿ ಸಂಖ್ಯೆ – 5

# ಭಾರತದ ಲೆಕ್ಕನಿಯಂತ್ರಕರು ಮತ್ತು
# ಮಹಾಲೆಕ್ಕಪರಿಶೋಧಕರ ವರದಿ

## ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪೂರೈಕೆ ಸರಪಳಿ ನಿರ್ವಹಣೆಯ ಮೇಲಿನ
## ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

**ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷ**

**ಕರ್ನಾಟಕ ಸರ್ಕಾರ**

**2024ನೇ ವರ್ಷದ ವರದಿ ಸಂಖ್ಯೆ 5**

| ವಿಷಯಸೂಚಿ | | |
|---|---|---|
| ಕಂಡಿಕೆ | ವಿವರಗಳು | ಪುಟ ಸಂಖ್ಯೆ |


| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಮುನ್ನುಡಿ | v |
| | ಕಾರ್ಯನಿರ್ವಹಣಾ ಸಾರಾಂಶ | vii |
| ಅಧ್ಯಾಯ–I | **ಪರಿಚಯ** | |
| 1.1 | ಸಾಂಸ್ಥಿಕ ರಚನೆ | 1 |
| 1.2 | ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲಿನ ವೆಚ್ಚ | 2 |
| 1.3 | ಲೆಕ್ಕಪರಿಶೋಧನಾ ಉದ್ದೇಶಗಳು | 2 |
| 1.4 | ಲೆಕ್ಕಪರಿಶೋಧನಾ ಮಾನದಂಡ | 3 |
| 1.5 | ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ | 3 |
| 1.6 | ಲೆಕ್ಕಪರಿಶೋಧನಾ ವಿಧಾನ | 4 |
| 1.7 | ಕೃತಜ್ಞತೆ | 5 |
| ಅಧ್ಯಾಯ–II | ಸಾಗಾಣಿಕೆ | |
| 2.1 | ಸಾಗಾಣಿಕೆ ವೆಚ್ಚವನ್ನು ಲೆಕ್ಕಹಾಕುವ ವಿಧಾನ | 8 |
| 2.2 | ಗುತ್ತಿಗೆ ಬಾಧ್ಯತೆಗಳ ಕಳಪೆ ಜಾರಿಗೊಳಿಸುವಿಕೆ | 12 |
| 2.3 | ಅಸ್ತಿತ್ವದಲ್ಲಿರುವ ಸರಬರಾಜು ವ್ಯವಸ್ಥೆಯ ನಿರ್ವಹಣೆ | 16 |
| ಅಧ್ಯಾಯ–III | **ಸಗಟು ಮಳಿಗೆಗಳ ಕಾರ್ಯಾಚರಣೆ** | |
| 3.1 | ಸಗಟು ಮಳಿಗೆಗಳ ಕಾರ್ಯನಿರ್ವಹಣೆ | 21 |
| ಅಧ್ಯಾಯ–IV | **ನ್ಯಾಯಬೆಲೆ ಅಂಗಡಿಗಳ ಕಾರ್ಯಾಚರಣೆ** | |
| 4.1 | ನ್ಯಾಯಬೆಲೆ ಅಂಗಡಿಗಳ ಮೂಲಸೌಕರ್ಯ ಮತ್ತು ಶೇಖರಣಾ ಅಭ್ಯಾಸಗಳು | 31 |
| ಅಧ್ಯಾಯ–V | **ಆಂತರಿಕ ನಿಯಂತ್ರಣ ವ್ಯವಸ್ಥೆಗಳು** | |
| 5.1 | ಸರಬರಾಜು ವ್ಯವಸ್ಥೆಯ ಮೇಲ್ವಿಚಾರಣೆಯಲ್ಲಿ ಪರಿಣಾಮಕಾರಿಯಲ್ಲದ ಮಾಹಿತಿ ತಂತ್ರಜ್ಞಾನದ ಬೆಂಬಲ (FIST ಮಾಡ್ಯೂಲ್) | 44 |

| | | |
|---|---|---|
| **5.2** | WSD ಗಳನ್ನು FIST ಮಾಡ್ಯೂಲ್ ಗೆ ಮ್ಯಾಪ್ ಮಾಡದಿರುವುದು | 44 |
| **5.3** | ಸಂಗ್ರಹಣಾ ಮತ್ತು ನಿರ್ವಹಣಾ ನಷ್ಟಗಳನ್ನು ಲೆಕ್ಕವಿಡದಿರುವುದು | 45 |
| **5.4** | WSD ಸ್ಥಳದಲ್ಲಿ ಅಧಿಕ ಹೊರೆ ಹೊತ್ತ ವಾಹನಗಳು | 47 |
| **5.5** | ಸಗಟು ಸಾಗಾಣಿಕೆಯಲ್ಲಿ ಆಹಾರಧಾನ್ಯಗಳ ವಿಳಂಬಿತ ವಿತರಣೆ | 48 |
| **5.6** | ಇತರೆ ಲೆಕ್ಕಪರಿಶೋಧನಾ ಅಂಶಗಳು | 48 |
| **5.7** | WSD ಗಳ ತಪಾಸಣೆಯಲ್ಲಿ ಕೊರತೆ | 49 |
| **5.8** | ಭೌತಿಕ ದಾಸ್ತಾನಿನ ಸಮನ್ವಯತೆ ಮತ್ತು ವಿವರವಾದ ಪ್ರಮಾಣಿತ ಕಾರ್ಯಾಚರಣಾ ವಿಧಾನದ (SOP) ಕೊರತೆ | 50 |
| **5.9** | ಭಾರತ ಸರ್ಕಾರದ TPDS ನಿಯಂತ್ರಣ ಆದೇಶದ ಅನುಸರಣೆ ಮಾಡದಿರುವುದು | 51 |
| **5.10** | ಅನುಮತಿಯಿಲ್ಲದೆ/ಮಾನ್ಯತೆ ಮುಗಿದ ಪರವಾನಗಿಯೊಂದಿಗೆ WSD ಗಳ ಕಾರ್ಯಾಚರಣೆ | 51 |
| **5.11** | WSD ಗಳಲ್ಲಿ ಗುಣಮಟ್ಟ ನಿಯಂತ್ರಣಗಳು | 51 |
| **5.12** | ನ್ಯಾಯಬೆಲೆ ಅಂಗಡಿಗಳಲ್ಲಿ ಆಂತರಿಕ ನಿಯಂತ್ರಣಗಳು – ನ್ಯಾಯಬೆಲೆ ಅಂಗಡಿಗಳ ತಪಾಸಣೆಯಲ್ಲಿ ಕೊರತೆ | 52 |
| **5.13** | ಸಾಮಾಜಿಕ ಲೆಕ್ಕಪರಿಶೋಧನೆ ನಡೆಸದಿರುವುದು ಮತ್ತು ಪಂಚಾಯತ್‌ರಾಜ್ ಸಂಸ್ಥೆ ಅಥವಾ ಬೇರೆ ಯಾವುದೇ ಸಂಸ್ಥೆಯ ಭಾಗವಹಿಸುವಿಕೆ ಇಲ್ಲದಿರುವುದು | 54 |
| **5.14** | ಜಾಗೃತಿ ಸಮಿತಿಗಳನ್ನು ರಚಿಸದಿರುವುದು ಮತ್ತು ಸಭೆಗಳನ್ನು ನಡೆಸುವಲ್ಲಿನ ಕೊರತೆಗಳು | 54 |
| **5.15** | ಕುಂದುಕೊರತೆ ಪರಿಹಾರ ವ್ಯವಸ್ಥೆ | 56 |
| | ಅನುಬಂಧಗಳು | 59 |
| | ಪದಕೋಶ | 79 |

## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| I. | 8 ಜಿಲ್ಲೆಗಳು / ವಲಯಗಳಲ್ಲಿ ಪರೀಕ್ಷಾರ್ಥ–ತನಿಖೆ ನಡೆಸಿದ 18 ಗೋದಾಮುಗಳು ಮತ್ತು 96 ನ್ಯಾಯಬೆಲೆ ಅಂಗಡಿಗಳ ಜಂಟಿ ಭೌತಿಕ ಪರಿಶೀಲನೆಯ ವಿವರಗಳು | 59 |
| II | 18 WSD ಗಳಲ್ಲಿ ಮೂಲಸೌಕರ್ಯ ಮತ್ತು ಗೋದಾಮಿನ ಸೌಲಭ್ಯಗಳ ಮೇಲೆ ಲೆಕ್ಕಪರಿಶೋಧನಾ ಅಂಶಗಳು | 62 |
| III | 18 WSD ಗಳಲ್ಲಿ ಮೂಲಸೌಕರ್ಯ ಮತ್ತು ಭದ್ರತಾ ಸೌಲಭ್ಯಗಳ ಕೊರತೆ | 64 |
| IV | ಪರೀಕ್ಷಾರ್ಥ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ 19 KFCSC ಗೋಡೌನ್ ಮ್ಯಾನೇಜರ್‌ಗಳು ಒಂದಕ್ಕಿಂತ ಹೆಚ್ಚು WSD ಗಾಗಿ ಕೆಲಸ ಮಾಡುತ್ತಿರುವುದು | 68 |
| V | ನ್ಯಾಯಬೆಲೆ ಅಂಗಡಿಗಳ ಸಾಕಷ್ಟಿಲ್ಲದ ಸಂಗ್ರಹಣಾ ಸಾಮರ್ಥ್ಯ | 69 |
| VI | ನ್ಯಾಯಬೆಲೆ ಅಂಗಡಿಗಳಲ್ಲಿ FIST ಮಾಡ್ಯೂಲ್ ಪ್ರಕಾರ ದಾಸ್ತಾನು ಮತ್ತು ಭೌತಿಕ ದಾಸ್ತಾನಿನ ನಡುವೆ ವ್ಯತ್ಯಾಸಗಳು | 73 |
| VII | ಒಂದಕ್ಕಿಂತ ಹೆಚ್ಚಿನ ವಿತರಣಾ ಕೇಂದ್ರಗಳನ್ನು ಹೊಂದಿರುವ ನ್ಯಾಯಬೆಲೆ ಅಂಗಡಿಗಳ ವಿವರಗಳ ತಃಖ್ತೆ | 76 |
| VIII (ಎ) | ತಪ್ಪಾಗಿ ಜಿಯೋಟ್ಯಾಗ್ ಮಾಡಿರುವ ನ್ಯಾಯಬೆಲೆ ಅಂಗಡಿಗಳ ಪಟ್ಟಿ | 77 |
| VIII (ಬಿ) | ಒಂದೇ ಅಕ್ಷಾಂಶ/ರೇಖಾಂಶದೊಂದಿಗೆ ಜಿಯೋಟ್ಯಾಗ್ ಮಾಡಿರುವ ನ್ಯಾಯಬೆಲೆ ಅಂಗಡಿಗಳ ಪಟ್ಟಿ | 78 |

# ಮುನ್ನುಡಿ

31 ಮಾರ್ಚ್ 2022 ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಭಾರತ ಸಂವಿಧಾನದ 151(2) ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲು ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸಲು ತಯಾರಿಸಲಾಗಿದೆ.

2017–22ರ ಅವಧಿಯನ್ನು ವ್ಯಾಪಿಸುವ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

ಈ ವರದಿಯಲ್ಲಿ 2017–22ರ ಅವಧಿಯ ಪರೀಕ್ಷಾ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗಮನಿಸಿದ ಮತ್ತು ಹಿಂದಿನ ವರ್ಷಗಳಲ್ಲಿ ಗಮನಿಸಿದ ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದಿದ್ದ ನಿದರ್ಶನಗಳನ್ನು ಉಲ್ಲೇಖಿಸಲಾಗಿದೆ; 2017–22ರ ನಂತರದ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಸಹ ಅಗತ್ಯವಿದ್ದಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಈ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಲೆಕ್ಕಪರಿಶೋಧನೆಯ ಪ್ರತಿ ಘಟ್ಟದಲ್ಲಿಯೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಕಾರ್ಯನಿರ್ವಹಣಾ ಸಾರಾಂಶ

## ಕಾರ್ಯನಿರ್ವಹಣಾ ಸಾರಾಂಶ

**ಸಿಎಜಿರವರು ಈ ಲೆಕ್ಕಪರಿಶೋಧನೆಯನ್ನು ಏಕೆ ಮಾಡಿದರು?**

ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯು (TPDS) ಫಲಾನುಭವಿಗಳಿಗೆ ಉಚಿತವಾಗಿ ಅಗತ್ಯ ವಸ್ತುಗಳ ಪೂರೈಕೆಯನ್ನು ಖಚಿತಪಡಿಸುವ ಗುರಿಯನ್ನು ಹೊಂದಿತ್ತು. ನ್ಯಾಯಬೆಲೆ ಅಂಗಡಿಗಳ (FPS) ಜಾಲದ ಮೂಲಕ ಶೇಕಡಾ 66ರಷ್ಟು ರಾಜ್ಯದ ಜನಸಂಖ್ಯೆಯನ್ನು ವ್ಯಾಪಿಸಿರುವ ಗ್ರಾಮೀಣ/ನಗರದ ಜನತೆಗೆ ಅಕ್ಕಿ, ಗೋಧಿ, ರಾಗಿ ಮತ್ತು ಜೋಳ ಮುಂತಾದ ಆಹಾರ ಧಾನ್ಯಗಳನ್ನು TPDS ವಿತರಿಸುತ್ತದೆ. ರಾಜ್ಯದಲ್ಲಿನ ಈ ಆಹಾರಧಾನ್ಯ ವಿತರಣಾ ಜಾಲದ ಸರಬರಾಜು ವ್ಯವಸ್ಥೆಯಲ್ಲಿ 5.26 ಕೋಟಿ ಫಲಾನುಭವಿಗಳ ಅಗತ್ಯಗಳನ್ನು ಪೂರೈಸುವುದಕ್ಕಾಗಿ 20,324 ನ್ಯಾಯಬೆಲೆ ಅಂಗಡಿಗಳು, 302 ರಾಜ್ಯ ಗೋದಾಮುಗಳು ಮತ್ತು 63 ಭಾರತೀಯ ಆಹಾರ ನಿಗಮದ ಗೋದಾಮುಗಳನ್ನು ಒಳಗೊಂಡಿದ್ದು (ಅಂತ್ಯೋದಯ ಅನ್ನ ಯೋಜನೆ, ಆದ್ಯತಾ ಕುಟುಂಬ ಮತ್ತು ರಾಜ್ಯ ಫಲಾನುಭವಿಗಳು), ಸದರಿ ವ್ಯವಸ್ಥೆಯು ವಾರ್ಷಿಕ 26.04 ಲಕ್ಷ ಮೆಟ್ರಿಕ್ ಟನ್ನುಗಳ ಆಹಾರ ಧಾನ್ಯಗಳನ್ನು ವಿತರಿಸುತ್ತದೆ.

ಎಫ್‌ಪಿಎಸ್ ಮೂಲಕ ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ಎತ್ತುವ, ಸಾಗಿಸುವ, ಸಂಗ್ರಹಿಸುವ ಮತ್ತು ವಿತರಿಸುವ ಪ್ರಮಾಣವನ್ನು ಪರಿಗಣಿಸಿ, ಕರ್ನಾಟಕದಲ್ಲಿ ಟಿಪಿಡಿಎಸ್ ಅನುಷ್ಠಾನದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಸಿಎಜಿರವರು ಕೈಗೆತ್ತಿಕೊಂಡರು. ರಾಜ್ಯದ ಮಧ್ಯವರ್ತಿ ಸಗಟು ಡಿಪೋಗಳ ಮೂಲಕ FCI ನಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಎತ್ತುವುದು ಮತ್ತು ಸಾಗಿಸುವುದು ಸೇರಿದಂತೆ ಸರಬರಾಜು ವ್ಯವಸ್ಥೆ ನಿರ್ವಹಣೆಯ ಆರ್ಥಿಕ ದಕ್ಷತೆಯನ್ನು ನಿರ್ಣಯಿಸುವುದು ಈ ಲೆಕ್ಕಪರಿಶೋಧನೆಯ ಉದ್ದೇಶವಾಗಿದೆ. ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣಾ ಕಾರ್ಯವಿಧಾನದ ಜೊತೆಗೆ ಶೇಖರಣಾ ಪದ್ಧತಿಗಳು ಮತ್ತು ಆಹಾರ ಧಾನ್ಯಗಳ ವಿತರಣೆಯನ್ನು ಸೇರಿದಂತೆ ಸಗಟು ಡಿಪೋಗಳು ಮತ್ತು ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯನ್ನೂ ಸಹ ಮಾಡಲಾಯಿತು.

**ಪ್ರಮುಖ ಲೆಕ್ಕಪರಿಶೋಧನಾ ಆವಿಷ್ಕಾರಗಳು**

ಇಲಾಖೆಯು ಅಳವಡಿಸಿಕೊಂಡಿರುವ ಸಗಟು ಮತ್ತು ಚಿಲ್ಲರೆ ಸಾಗಣೆಗೆ ವಿವಿಧ ವೆಚ್ಚದ ಸೂತ್ರಗಳ ಪ್ರಸ್ತುತ ವ್ಯವಸ್ಥೆಯು ಸಮರ್ಥನೆಯನ್ನು ಹೊಂದಿರಲಿಲ್ಲ. ನಿಗದಿತ ವೆಚ್ಚಗಳ ಸೇರ್ಪಡೆಯ ವಿಷಯದಲ್ಲಿ ಸೂತ್ರಗಳಲ್ಲಿ ದೋಷವಿದ್ದಿತು, ಅಂದರೆ ಚಾಲಕರ ಸಂಬಳ, ಚಾಲಕರ ಬಾಟಾ, ತೊಡಗಿಸಿಕೊಂಡಿರುವ ವಾಹನಗಳ ಸವಕಲು, ಮುಂತಾದವುಗಳು ಸಾಗಣೆ ದೂರದ ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚಾಗುತ್ತವೆ.

ಹತ್ತಿರವಿರುವ WSD ಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಪೂರೈಕೆಯ ನಿರ್ದಿಷ್ಟ ನೀತಿಯ ಅನುಪಸ್ಥಿತಿಯಲ್ಲಿ, ರಾಜ್ಯವು WSD ಗಳಿಂದ ಆಯಾ ತಾಲೂಕು ಗಡಿ ವ್ಯಾಪ್ತಿಯಲ್ಲಿರುವ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಪೂರೈಸುತ್ತದೆ. ಅನೇಕ ಸಂದರ್ಭಗಳಲ್ಲಿ, ನೆರೆಯ/ಪಕ್ಕದ ತಾಲೂಕಿನ ಡಬ್ಲ್ಯುಎಸ್‌ಡಿಗೆ ಹತ್ತಿರವಾಗಿದ್ದರೂ ನ್ಯಾಯಬೆಲೆ ಅಂಗಡಿಗಳು ದೂರದ ಆಡಳಿತಾತ್ಮಕ WSD ಯಿಂದ

ಸೇವೆಯನ್ನು ಪಡೆಯುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಸಾರಿಗೆ/ನಿರ್ವಹಣೆ ಮತ್ತು ಶೇಖರಣೆಗೆ ಹೆಚ್ಚುವರಿ ವೆಚ್ಚಗಳನ್ನು ಭರಿಸಲಾಗುತ್ತಿತ್ತು.

ರಾಜ್ಯವು WSD ಗಳಲ್ಲಿನ ಶೇಖರಣಾ ಕಾರ್ಯಾಚರಣೆಗಾಗಿ ರಾಜ್ಯ ನಿರ್ದಿಷ್ಟ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳನ್ನು (SOP) ತಯಾರಿಸಿರಲಿಲ್ಲ/ಅಧಿಸೂಚಿಸಿರಲಿಲ್ಲ ಮತ್ತು WSD ಗಳು ವೇರ್‌ಹೌಸಿಂಗ್ ಡೆವಲಪ್‌ಮೆಂಟ್ ಅಂಡ್ ರೆಗ್ಯುಲೇಶನ್ ಅಥಾರಿಟಿ (WDRA) ಅಧಿಸೂಚಿಸಿದಂತೆ ಸುರಕ್ಷಿತ ಆಹಾರ ಸಂಗ್ರಹಣಾ ಅಭ್ಯಾಸಗಳನ್ನು ಅನುಸರಿಸುತ್ತಿರಲಿಲ್ಲ. ವಶಪಡಿಸಿಕೊಂಡ ದಾಸ್ತಾನು ವಿತರಣೆಗೆ ಇಲಾಖೆಯು ಸಕಾಲದಲ್ಲಿ ಕ್ರಮ ಕೈಗೊಳ್ಳದ ಕಾರಣ ಆಹಾರ ಧಾನ್ಯಗಳು ಹಾಳಾಗಿ ಮಾನವ ಬಳಕೆಗೆ ಯೋಗ್ಯವಾಗಿರಲಿಲ್ಲ.

ನ್ಯಾಯಬೆಲೆ ಅಂಗಡಿಗಳ ಮೂಲಸೌಕರ್ಯ ಮತ್ತು ಅಭ್ಯಾಸಗಳಲ್ಲಿನ ನ್ಯೂನತೆಗಳು ಆಹಾರ ಧಾನ್ಯಗಳ ಜೊತೆಗೆ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಸಂಗ್ರಹಣೆ, ಕಾಯ್ದಿಟ್ಟ ದಾಸ್ತಾನಿನ ಶೇಖರಣಾ ಸೌಲಭ್ಯದ ಕೊರತೆ, ಅನಧಿಕೃತ/ನವೀಕರಿಸದ ತೂಕದ ಮಾಪಕಗಳ ಬಳಕೆ, ಕೆಲಸದ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಗಳು ಮುಚ್ಚಿರುವುದು, ಇತ್ಯಾದಿಗಳನ್ನು ಒಳಗೊಂಡಿದ್ದು ನ್ಯಾಯಬೆಲೆ ಅಂಗಡಿಗಳ ಕಳಪೆ ಕಾರ್ಯಾಚರಣೆ/ಮೇಲ್ವಿಚಾರಣೆಯನ್ನು ಸೂಚಿಸಿದವು.

WSD ಗಳ ಆಗಮನ ಮತ್ತು ನಿರ್ಗಮನ ಸ್ಥಳಗಳಲ್ಲಿ ದಾಸ್ತಾನಿನ ತೂಕದ ಅನುಪಸ್ಥಿತಿ, ನಿಗದಿತ ಜಾಬ್ ಚಾರ್ಟ್‌ನ ಪ್ರಕಾರ ಆಹಾರ ನಿರೀಕ್ಷಕರು, ಆಹಾರ ಶಿರಸ್ತೇದಾರ್ ಮತ್ತು ಉಪನಿರ್ದೇಶಕರುಗಳ ಕಡ್ಡಾಯ ತಪಾಸಣೆಯಲ್ಲಿನ ಕೊರತೆಗಳು ದುರ್ಬಲ ಆಂತರಿಕ ನಿಯಂತ್ರಣಗಳನ್ನು ಸೂಚಿಸುತ್ತವೆ. ನ್ಯಾಯಬೆಲೆ ಅಂಗಡಿಗಳ ಭೌತಿಕ ದಾಸ್ತಾನನ್ನು ಫೈನಾನ್ಶಿಯಲ್ ಸ್ಟಾಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (FIST) ಮಾಡ್ಯೂಲ್‌ನ ಪ್ರಕಾರ ಸಮನ್ವಯತೆ ಮಾಡಿರಲಿಲ್ಲ. ಕೆಲವು WSD ಗಳು ಮಾನ್ಯತೆ ಇರುವ ಪರವಾನಗಿಗಳಿಲ್ಲದೆ ಕಾರ್ಯನಿರ್ವಹಿಸುವುದನ್ನು ಮುಂದುವರೆಸಿದ್ದವು.

**ಲೆಕ್ಕಪರಿಶೋಧನಾ ಶಿಫಾರಸುಗಳ ಸಾರಾಂಶ**

**ಸಾಗಾಣಿಕೆ ವೆಚ್ಚ ಮತ್ತು ಒಪ್ಪಂದದ ಬಾಧ್ಯತೆಗಳು:** ಜಿಲ್ಲಾ ಪ್ರಾಧಿಕಾರಗಳು ಸಾಗಣೆದಾರರ ಮೇಲಿನ ಒಪ್ಪಂದದ ಬಾಧ್ಯತೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಉಲ್ಲಂಘನೆ/ಮಾರ್ಗಪಲ್ಲಟಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಸಾಗಾಣಿಕೆದಾರರು ಅಧಿಕೃತ ವಾಹನಗಳನ್ನು ಬಳಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಪ್ರಯಾಣಿಕ ವಾಹನಗಳ ಮೇಲೆ ಮಾಡಿದ ಸಾಗಾಣಿಕೆ ಬಿಲ್ಲುಗಳನ್ನು ನಿರಾಕರಿಸಬೇಕು.

ರಾಜ್ಯ ಸರ್ಕಾರವು ತಾಲ್ಲೂಕು ವ್ಯಾಪ್ತಿಯ ಗಡಿಯ ಬದಲಿಗೆ ಹತ್ತಿರದ WSD ಯಿಂದ ನ್ಯಾಯಬೆಲೆ ಅಂಗಡಿಗೆ ಆಹಾರ ಧಾನ್ಯಗಳನ್ನು ಪೂರೈಸಲು ನಿರ್ದಿಷ್ಟ ಸೂಚನೆಯನ್ನು ನೀಡುವುದನ್ನು ಪರಿಗಣಿಸಬಹುದು.

**ಉಗ್ರಾಣ ಡಿಪೋಗಳ ಕಾರ್ಯಾಚರಣೆ:** WSD ಗಳಿಂದ ಗೋದಾಮಿನ ಕಾರ್ಯಾಚರಣೆಗಳಿಗೆ ರಾಜ್ಯ ಸರ್ಕಾರವು ವಿವರವಾದ ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ಅವುಗಳ ಅನುಸರಣೆಯನ್ನು

ಖಚಿತಪಡಿಸಿಕೊಳ್ಳಬೇಕು. ವಶಪಡಿಸಿಕೊಂಡ ದಾಸ್ತಾನು ವಿಲೇವಾರಿ ಮಾಡದಿರುವ ಜಿಲ್ಲಾ ಅಧಿಕಾರಿಗಳ ಮೇಲೆ, ಗೋಣಿಚೀಲಗಳ ತೂಕವನ್ನು ಕಡಿಮೆ ಮಾಡದ ಕಾರಣ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಪೂರೈಕೆಯಲ್ಲಿ ಕೊರತೆ ಮತ್ತು WSD ಗಳ ಅನೈರ್ಮಲ್ಯ/ಕಳಪೆ ನಿರ್ವಹಣೆಗಾಗಿ WSD ಗಳ ವ್ಯವಸ್ಥಾಪಕರ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಬೇಕು. ಪ್ರತಿ ಸಾಗಣೆಯನ್ನು ಪತ್ತೆಹಚ್ಚಲು ಸರಿಯಾದ ಸಾಗಣೆವಾರು ಬಿಲ್ ಮಾಡುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

**ನ್ಯಾಯಬೆಲೆ ಅಂಗಡಿಗಳ ಕಾರ್ಯಾಚರಣೆ:** ಇಲಾಖೆಯು ನಿಯಮಿತವಾಗಿ ತಪಾಸಣೆಗಳನ್ನು ನಡೆಸಬೇಕು ಮತ್ತು FIST ಮಾಡ್ಯೂಲ್‌ನಲ್ಲಿ ಸೂಚಿಸಲಾದ ಆಹಾರ ಧಾನ್ಯಗಳ ಕೊರತೆ/ಹೆಚ್ಚುವರಿಯನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಪರವಾನಗಿ ನೀಡುವಾಗ ನಿಗದಿಪಡಿಸಿದ ಷರತ್ತುಗಳ ಪ್ರಕಾರ ತಪ್ಪಿತಸ್ಥ ನ್ಯಾಯಬೆಲೆ ಅಂಗಡಿ ಮಾಲೀಕರ ಪರವಾನಗಿಗಳನ್ನು ರದ್ದುಗೊಳಿಸಬೇಕು. ರಾಜ್ಯ ಸರ್ಕಾರವು ನಿಯಂತ್ರಣ ಆದೇಶದಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಮತ್ತು ದೃಢವಾದ ದಾಸ್ತಾನು ಲೆಕ್ಕವಿಡುವಿಕೆಗಾಗಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಬಲಪಡಿಸಬೇಕು. ಇದಲ್ಲದೆ, ಕರ್ನಾಟಕ ಕಾನೂನು ಮಾಪನಶಾಸ್ತ್ರ (ಜಾರಿ) ನಿಯಮಗಳು 2011ರ ಅಡಿಯಲ್ಲಿ ಅಗತ್ಯವಿರುವಂತೆ ತೂಕದ ಮಾಪಕಗಳನ್ನು ಮಾಪನಾಂಕ ಮಾಡಲಾಗಿದೆ ಎಂದು ಸರ್ಕಾರ ಖಚಿತಪಡಿಸಿಕೊಳ್ಳಬೇಕು.

**ಆಂತರಿಕ ನಿಯಂತ್ರಣ ವ್ಯವಸ್ಥೆಗಳು:** ವಾಹನಗಳ ಸಾಮರ್ಥ್ಯವನ್ನು ಮೀರಿ ಅಧಿಕ ಹೊರೆ ಹೊತ್ತ ಸಾಗಾಣಿಕೆದಾರರಿಗೆ ದಂಡ ವಿಧಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಲೋಪಗಳಿಗೆ ಸಂಬಂಧಪಟ್ಟ ಸಿಬ್ಬಂದಿಯ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿನ ಸಂಗ್ರಹಣೆ ಮತ್ತು ನಿರ್ವಹಣಾ ನಷ್ಟಗಳನ್ನು ಲೆಕ್ಕವಿಡಬೇಕು ಮತ್ತು ಫಲಾನುಭವಿಗಳಿಗೆ ಆಹಾರಧಾನ್ಯಗಳ ಕಡಿಮೆ ಪೂರೈಕೆಗೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಬೇಕು. ಎಲ್ಲಾ ಹಂತಗಳಲ್ಲಿ ಆಹಾರ ಧಾನ್ಯಗಳನ್ನು ಲೆಕ್ಕವಿಡಲು ರಾಜ್ಯ ಸರ್ಕಾರವು ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (SOP) ರೂಪಿಸಬೇಕು ಮತ್ತು ಪರಿಣಾಮಕಾರಿ ಸರಬರಾಜು ವ್ಯವಸ್ಥೆಯ ನಿರ್ವಹಣೆಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಚಟುವಟಿಕೆಗಳ ಮಾಸಿಕ ಕ್ಯಾಲೆಂಡರ್‌ಗೆ ಬದ್ಧವಾಗಿರಬೇಕು ಹಾಗೂ ಲೋಪಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಇದಲ್ಲದೆ, WSD ಗಳು ಅಧಿಕೃತ/ ಮಾನ್ಯವಾದ ಪರವಾನಗಿಗಳೊಂದಿಗೆ ಕಾರ್ಯನಿರ್ವಹಿಸುತ್ತವೆ ಮತ್ತು FSSAI ಮಾರ್ಗಸೂಚಿಗಳ ಪ್ರಕಾರ ಆಹಾರ ಧಾನ್ಯಗಳ ಗುಣಮಟ್ಟದ ನಿಯಂತ್ರಣಗಳನ್ನು ನಿರ್ವಹಿಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆಹಾರಧಾನ್ಯಗಳ ದುರುಪಯೋಗವನ್ನು ತಡೆಗಟ್ಟಲು TPDS ನಿಯಂತ್ರಣ ಆದೇಶದಲ್ಲಿ ನಿಗದಿಪಡಿಸಿರುವಂತೆ ರಾಜ್ಯ ಸರ್ಕಾರವು ದಾಖಲೆಗಳ ನಿರ್ವಹಣೆ ಮತ್ತು ನಿಯತಕಾಲಿಕ ತಪಾಸಣೆಗಳನ್ನು ಖಚಿತಪಡಿಸಿಕೊಳ್ಳಬೇಕು. ಕಡ್ಡಾಯವಾಗಿ ಜಾಗೃತಿ ಸಮಿತಿಗಳ ರಚನೆ ಮತ್ತು ಕಾರ್ಯನಿರ್ವಹಣೆಯನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಹೊಣೆಗಾರಿಕೆಯನ್ನು ಹೊರತರಲು ಅಗತ್ಯವಿರುವಂತೆ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಬೇಕು.

# ಅಧ್ಯಾಯ-I : ಪರಿಚಯ

# ಅಧ್ಯಾಯ–I : ಪರಿಚಯ

ನ್ಯಾಯಬೆಲೆ ಅಂಗಡಿಗಳ (FPS) ಜಾಲದ ಮೂಲಕ ಸಾರ್ವಜನಿಕರಿಗೆ ಕೈಗೆಟುಕುವ ಬೆಲೆಯಲ್ಲಿ ಅಗತ್ಯ ಸರಕುಗಳ (ಆಹಾರ ಧಾನ್ಯಗಳು) ಪೂರೈಕೆಯನ್ನು ಖಚಿತಪಡಿಸುವ ಗುರಿಯನ್ನು ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯು (TPDS) ಹೊಂದಿತ್ತು.  ಅಕ್ಕಿ, ಗೋಧಿ, ಜೋಳ, ರಾಗಿ ಇತ್ಯಾದಿ ಅಗತ್ಯ ವಸ್ತುಗಳ ವಿತರಣೆಯ ಜವಾಬ್ದಾರಿಯನ್ನು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಗೆ ವಹಿಸಲಾಗಿದೆ. TPDS ಅನ್ನು ಗೃಹ ಆಹಾರ ಭದ್ರತೆಯ ಕಲ್ಯಾಣ ದೃಷ್ಟಿಕೋನದಲ್ಲಿ ಸೂಕ್ತವಾದ ವಿಧಾನಕ್ಕೆ ಬದಲಾಯಿಸಿ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ (NFSA), 2013ರ (ಕಾಯಿದೆ) ಅಡಿಯಲ್ಲಿ ಪರಿಷ್ಕರಿಸಲಾಯಿತು. ಅಂತ್ಯೋದಯ ಅನ್ನ ಯೋಜನೆ, ಆದ್ಯತಾ ಗೃಹಬಳಕೆ ಮತ್ತು ಆದ್ಯತೆಯೇತರ ಗೃಹಬಳಕೆ ವರ್ಗಗಳ ಅಡಿಯಲ್ಲಿ 5.26 ಕೋಟಿ ಫಲಾನುಭವಿಗಳಿಗೆ 1.53 ಕೋಟಿ ಪಡಿತರ ಚೀಟಿಗಳ ಅಡಿಯಲ್ಲಿ (ಮಾರ್ಚ್ 2022) ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲಾಗುತ್ತಿದೆ.

## 1.1 ಸಾಂಸ್ಥಿಕ ರಚನೆ

ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆಯು ಸರ್ಕಾರದ ಮಟ್ಟದಲ್ಲಿ ಕಾರ್ಯದರ್ಶಿಯವರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತದೆ ಮತ್ತು ಅವರಿಗೆ ಆಯುಕ್ತರು ನೆರವು ನೀಡಿ TPDS ನ ಒಟ್ಟಾರೆ ಅನುಷ್ಠಾನ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಹೆಚ್ಚುವರಿ/ಜಂಟಿ/ಉಪ ನಿರ್ದೇಶಕರ ನೆರವಿನೊಂದಿಗೆ ಜಿಲ್ಲಾಧಿಕಾರಿಗಳು TPDS ಅನ್ನು ಅನುಷ್ಠಾನಗೊಳಿಸುತ್ತಾರೆ.

**ನಕ್ಷೆ–1: ಇಲಾಖೆಯ ಸಾಂಸ್ಥಿಕ ರಚನೆ**



'ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ' (KFCSC) ಮತ್ತು ಇತರ ಸಹಕಾರಿ ಸಂಸ್ಥೆಗಳಾದ ಸಗಟು ನಾಮನಿರ್ದೇಶಿತರು[1] 63 ಭಾರತ ಆಹಾರ ನಿಗಮದಿಂದ (FCI) ಆಹಾರಧಾನ್ಯಗಳನ್ನು ಖರೀದಿಸಲು ರಾಜ್ಯ ಸರ್ಕಾರವು ಅಧಿಕಾರ ನೀಡಿದೆ. ಆಹಾರ ಧಾನ್ಯಗಳ ಎತ್ತುವಿಕೆ ಮತ್ತು ಸಾಗಣೆಯನ್ನು ಸಗಟು ಸಾಗಣೆ ಗುತ್ತಿಗೆದಾರರು (ಭಾರತೀಯ ಆಹಾರ ನಿಗಮದ ಗೋದಾಮುಗಳಿಂದ ಸಗಟು ಗೋದಾಮುಗಳಿಗೆ ಆಹಾರ ಧಾನ್ಯಗಳನ್ನು ಸಾಗಿಸುವುದು) ಮತ್ತು ಚಿಲ್ಲರೆ ಸಾಗಣೆ ಗುತ್ತಿಗೆದಾರರು (ಸಗಟು ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಸಾಗಿಸುವುದು) ವಾರ್ಷಿಕ ಆಧಾರದ ಮೇಲೆ ವಹಿಸಿಕೊಂಡಿದ್ದಾರೆ. ನ್ಯಾಯಬೆಲೆ ಅಂಗಡಿಗಳು ಅಗತ್ಯ ವಸ್ತುಗಳ ವಿತರಣಾ ಕೇಂದ್ರಗಳಾಗಿದ್ದು, ಫಲಾನುಭವಿಗಳ ಹಂಚಿಕೆಗೆ ಅನುಗುಣವಾಗಿ ಅವರಿಗೆ ಸೇವೆ ಸಲ್ಲಿಸುತ್ತವೆ.

## 1.2 ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲಿನ ವೆಚ್ಚ

2017–18ರಿಂದ 2021–22ರ ಅವಧಿಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕಾರ್ಯಾಚರಣೆಗಳಿಗೆ ನಿಗದಿಪಡಿಸಲಾದ ಹಣದ ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು **ಕೋಷ್ಟಕ–1**ರಲ್ಲಿ ನೀಡಲಾಗಿದೆ:

**ಕೋಷ್ಟಕ–1: ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕಾರ್ಯಾಚರಣೆಗೆ ಹಂಚಿಕೆ ಮಾಡಿದ ಹಣ ಮತ್ತು ವೆಚ್ಚ**

**(₹ ಕೋಟಿಗಳಲ್ಲಿ)**

| ವರ್ಷ | ಎಎಐ/ಪಿಹೆಚ್‌ಹೆಚ್ | | ಎನ್‌ಪಿಹೆಚ್‌ಹೆಚ್ | |
|---|---|---|---|---|
| | ಹಂಚಿಕೆ ಮಾಡಿದ ಹಣ | ವೆಚ್ಚ | ಹಂಚಿಕೆ ಮಾಡಿದ ಹಣ | ವೆಚ್ಚ |
| 2017–18 | 2,850.00 | 2,529.01 | 3,235.00 | 1,270.77 |
| 2018–19 | 3,565.87 | 3,561.89 | 12.22 | 8.15 |
| 2019–20 | 3,855.17 | 3,798.04 | 5.00 | 4.06 |
| 2020–21 | 3,238.95 | 3,085.65 | 20.00 | 19.32 |
| 2021–22 | 6,628.10 | 6,605.10 | 20.00 | 3.33 |

ಆಧಾರ: ಇಲಾಖೆಯು ಒದಗಿಸಿದ ಅಂಕಿಅಂಶಗಳು

## 1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ಪರೀಕ್ಷಿಸುವುದು ಲೆಕ್ಕಪರಿಶೋಧನೆಯ ಉದ್ದೇಶಗಳಾಗಿದ್ದವು:

(i) TPDS ನಲ್ಲಿ ವಿತರಿಸಲಾದ ಆಹಾರ ಧಾನ್ಯಗಳ ಸಾಗಣೆ, ಸಂಗ್ರಹಣೆ ಮತ್ತು ವಿತರಣೆಗಾಗಿ ಸಗಟು ಮಾರಾಟ ಮಳಿಗೆಗಳು–ನ್ಯಾಯಬೆಲೆ ಅಂಗಡಿ ನೆಟ್‌ವರ್ಕ್ ಮ್ಯಾಪಿಂಗ್‌ಅನ್ನು ಮಿತವ್ಯಯ ಕಾರಿಯಾಗಿ, ಸಮರ್ಥವಾಗಿ ಹಾಗೂ ಪರಿಣಾಮಕಾರಿ ರೀತಿಯಲ್ಲಿ ಮಾಡಲಾಗಿತ್ತೇ;

(ii) TPDS ಗಾಗಿ ಇಲಾಖೆಯು ಅಭಿವೃದ್ಧಿಪಡಿಸಿದ ಮಾಹಿತಿ ತಂತ್ರಜ್ಞಾನ/ತಂತ್ರಾಂಶ ವ್ಯವಸ್ಥೆಗಳು ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆಯಲ್ಲಿ ಪರಿಣಾಮಕಾರಿಯಾಗಿದ್ದವೇ;

[1] ತಾಲ್ಲೂಕು ಕೃಷಿ ಉತ್ಪನ್ನಗಳ ಸಹಕಾರಿ ಮಾರುಕಟ್ಟೆ ನಿಗಮ, ರೈತ ಕೃಷಿ ಉತ್ಪನ್ನಗಳ ಸಹಕಾರಿ ಮಾರುಕಟ್ಟೆ ಸಂಘ.

(iii) ಇಲಾಖೆಯಿಂದ ಕುಂದುಕೊರತೆ ಪರಿಹಾರ, ಆಂತರಿಕ ನಿಯಂತ್ರಣಗಳು ಮತ್ತು ಮೇಲ್ವಿಚಾರಣೆಯು ಸಮರ್ಪಕ ಮತ್ತು ಪರಿಣಾಮಕಾರಿಯಾಗಿತ್ತೇ.

## 1.4 ಲೆಕ್ಕಪರಿಶೋಧನಾ ಮಾನದಂಡ

ಈ ಕೆಳಗಿನವುಗಳು ಲೆಕ್ಕಪರಿಶೋಧನೆಯು ಮುಖ್ಯ ಮಾನದಂಡಗಳಾಗಿದ್ದವು:

(1) ಭಾರತ ಸರ್ಕಾರದ ಟಿಪಿಡಿಎಸ್ (ನಿಯಂತ್ರಣ) ಆದೇಶ 2015 ಮತ್ತು ಕರ್ನಾಟಕ ಅಗತ್ಯ ಸರಕುಗಳ (PDS) ನಿಯಂತ್ರಣ ಆದೇಶ 2016 ಹಾಗೂ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸಲಾದ ಇತರೆ ಸಂಬಂಧಿತ ಆದೇಶಗಳು ಮತ್ತು ಅಧಿಸೂಚನೆಗಳು.

(2) ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013 ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು.

(3) ಅಗತ್ಯ ವಸ್ತುಗಳ (EC) ಕಾಯಿದೆ, 1955.

(4) ಕರ್ನಾಟಕ ಕಾನೂನು ಮಾಪನಶಾಸ್ತ್ರ (ಜಾರಿ) ನಿಯಮಗಳು, 2011.

(5) ಉತ್ತಮ ಸಾರಿಗೆ ಮತ್ತು ಉಗ್ರಾಣ ಅಭ್ಯಾಸಗಳಿಗಾಗಿ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI), ವೇರ್‌ಹೌಸಿಂಗ್ ಪ್ರಾಧಿಕಾರ (ಅಭಿವೃದ್ಧಿ ಮತ್ತು ನಿಯಂತ್ರಣ) (WDRA) ಮತ್ತು ಭಾರತ ಆಹಾರ ನಿಗಮದ ಮಾರ್ಗಸೂಚಿಗಳು/ಕೈಪಿಡಿಗಳು.

(6) TPDS 2013ರ ಮೊದಲಿಂದ–ಕೊನೆಯವರೆಗಿನ ಗಣಕೀಕರಣಕ್ಕಾಗಿ ಭಾರತ ಸರ್ಕಾರದ ಮಾರ್ಗಸೂಚಿಗಳು ಮತ್ತು ನ್ಯಾಯಬೆಲೆ ಅಂಗಡಿಗಳ ಆಟೋಮೇಷನ್ ಮಾರ್ಗಸೂಚಿಗಳು, 2014.

(7) ತಂತ್ರಾಂಶ ಅಭಿವೃದ್ಧಿ ಮತ್ತು ಮರು–ಎಂಜಿನಿಯರಿಂಗ್ ಮಾರ್ಗಸೂಚಿಗಳು –ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ(MeitY), ಭಾರತ ಸರ್ಕಾರ.

(8) KFCSC ಯ ಸಾಮಾನ್ಯ ಕಾರ್ಯಾಚರಣಾ ವಿಧಾನ (SOP)

## 1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

**ವ್ಯಾಪ್ತಿ**

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ವ್ಯಾಪ್ತಿಯು ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮತ್ತು ಸಂಬಂಧಿತ ಆಂತರಿಕ ನಿಯಂತ್ರಣಗಳ ಆರ್ಥಿಕ ದಕ್ಷತೆಯನ್ನು ನಿರ್ಣಯಿಸುವುದಾಗಿದೆ. ಹೀಗೆ, 2017–18ರಿಂದ 2021–22ರ ಅವಧಿಯಲ್ಲಿ ಭಾರತ ಆಹಾರ ನಿಗಮದ ಆವರಣದಿಂದ ಆಹಾರ ಧಾನ್ಯಗಳನ್ನು ಎತ್ತುವುದು, ಸಗಟು ಮಾರಾಟ ಮಳಿಗೆಗಳಿಗೆ ಸಾಗಣೆ ಮತ್ತು ನ್ಯಾಯಬೆಲೆ ಅಂಗಡಿಗಳಿಗೆ ಚಿಲ್ಲರೆ ವಿತರಣೆ ಮಾಡುವುದರ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೇಂದ್ರೀಕರಿಸಲಾಗಿತ್ತು.

**ವಿಧಾನ**

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಜೂನ್ 2022ರಿಂದ ಜನವರಿ 2023ರವರೆಗೆ ನಡೆಸಲಾಯಿತು. 18 ಜುಲೈ 2022ರಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಪ್ರವೇಶ ಸಭೆಯನ್ನು ನಡೆಸಲಾಯಿತು, ಅದರಲ್ಲಿ ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ, ವಿಧಾನ ಮತ್ತು ಮಾನದಂಡಗಳನ್ನು ವಿವರಿಸಲಾಯಿತು. 4 ಜನವರಿ 2023ರಂದು ಕಾರ್ಯದರ್ಶಿಯವರೊಂದಿಗೆ ಮಧ್ಯಾವಧಿ ಸಭೆಯೊಂದನ್ನು ನಡೆಸಿ ಸರ್ಕಾರದ ಪ್ರತಿಕ್ರಿಯೆಯನ್ನು ಪಡೆಯಲಾಯಿತು. 05 ಏಪ್ರಿಲ್ 2023ರಂದು ಕಾರ್ಯದರ್ಶಿಗಳೊಂದಿಗೆ ನಿರ್ಗಮನ ಸಭೆಯನ್ನು ನಡೆಸಲಾಯಿತು ಮತ್ತು ಸರ್ಕಾರದ ಉತ್ತರಗಳು/ಅಭಿಪ್ರಾಯಗಳನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿದೆ.

## 1.6 ಲೆಕ್ಕಪರಿಶೋಧನಾ ವಿಧಾನ

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಆಯುಕ್ತರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ (KFCSC) ಮತ್ತು ಜಿಲ್ಲಾ/ತಾಲ್ಲೂಕು ಮಟ್ಟದ ಕಚೇರಿಗಳ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯ ದಾಖಲೆಗಳ ಪರೀಕ್ಷಾರ್ಥ–ತನಿಖೆ ನಡೆಸುವ ಮೂಲಕ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

ವಿವರವಾದ ಪರಿಶೀಲನೆಗಾಗಿ ಯಾದೃಚ್ಛಿಕ ಮಾದರಿ ವಿಧಾನವನ್ನು ಬಳಸಿಕೊಂಡು ರಾಜ್ಯದ 31 ಜಿಲ್ಲೆಗಳ ಪೈಕಿ 8 ಜಿಲ್ಲೆಗಳನ್ನು (ನಕ್ಷೆ–2) ಆಯ್ಕೆ ಮಾಡಲಾಯಿತು. ಪ್ರತಿ ಜಿಲ್ಲೆಯಲ್ಲಿ, ಆರು ನ್ಯಾಯಬೆಲೆ ಅಂಗಡಿಗಳ ಅನುಗುಣವಾದ ಮಾದರಿಯೊಂದಿಗೆ ಕನಿಷ್ಠ ಎರಡು ಸಗಟು ಮಾರಾಟ ಮಳಿಗೆಗಳನ್ನು, ಅಂದರೆ ಒಟ್ಟು 8 ಜಿಲ್ಲಾ ಮಟ್ಟದ ಘಟಕಗಳು, 18 ಸಗಟು ಮಾರಾಟ ಮಳಿಗೆಗಳು ಮತ್ತು 96 ನ್ಯಾಯಬೆಲೆ ಅಂಗಡಿಗಳನ್ನು (**ಅನುಬಂಧ–I**) ಪರೀಕ್ಷಾರ್ಥ–ತನಿಖೆ ಮಾಡಲಾಯಿತು. ಅಗತ್ಯವಿರುವ ಕಡೆಗಳಲ್ಲಿ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆಯನ್ನು ನಡೆಸಲಾಯಿತು.

**ನಕ್ಷೆ–2: ಆಯ್ಕೆಯಾದ ಜಿಲ್ಲೆಗಳ ವಿವರಗಳ**

ಆಯ್ಕೆ ಮಾಡಲಾದ ಜಿಲ್ಲೆಗಳು




## 1.7 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಸುಗಮವಾಗಿ ನಡೆಸಲು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಮತ್ತು ನ್ಯಾಯಬೆಲೆ ಅಂಗಡಿಗಳು ನೀಡಿದ ಸಹಕಾರ ಮತ್ತು ಸಹಾಯವನ್ನು ಲೆಕ್ಕಪರಿಶೋಧನೆಯು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತದೆ.

# ಅಧ್ಯಾಯ-II :

# ಸಾಗಾಣಿಕೆ

# ಅಧ್ಯಾಯ–II : ಸಾಗಾಣಿಕೆ

*ಆಹಾರ ಧಾನ್ಯಗಳನ್ನು ಸರಬರಾಜು ಸ್ಥಳದಿಂದ (FCI/WSD) ಬಳಕೆಯ ಹಂತಕ್ಕೆ (ನ್ಯಾಯಬೆಲೆ ಅಂಗಡಿ) ಸಾಗಿಸುವುದು ಸಾಗಣೆ ವೆಚ್ಚದಲ್ಲಿ ಸಮರ್ಥನೀಯ ನಿಯತಾಂಕಗಳೊಂದಿಗೆ ಮಿತವ್ಯಯ ಮತ್ತು ಕಾರ್ಯಸಾಧ್ಯವಾದ ಸೂತ್ರಗಳನ್ನು ಅಳವಡಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಅಲ್ಲದೆ, ಸರ್ಕಾರದ ಬೊಕ್ಕಸಕ್ಕೆ ಉಳಿತಾಯವನ್ನು ಸಾಧಿಸಲು ಒಪ್ಪಂದದ ಬಾಧ್ಯತೆಗಳ ಅನುಸರಣೆಯೊಂದಿಗೆ ಇಲಾಖೆಯ ಸಮರ್ಥ ಮತ್ತು ಪರಿಣಾಮಕಾರಿ ಮೇಲ್ವಿಚಾರಣೆಯು ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಕಾರ್ಯಾಚರಣೆಗಳ ಉತ್ತಮ ಅನುಷ್ಠಾನಕ್ಕೆ ಅಗತ್ಯವಾಗಿರುತ್ತದೆ.*

*ಇಲಾಖೆಯು ಅಳವಡಿಸಿಕೊಂಡಿರುವ ಸಗಟು ಮತ್ತು ಚಿಲ್ಲರೆ ಸಾಗಾಣಿಕೆಗೆ ವಿಭಿನ್ನ ವೆಚ್ಚದ ಸೂತ್ರಗಳ ಪ್ರಸ್ತುತ ವ್ಯವಸ್ಥೆಯು ಸಮರ್ಥನೆಯನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ನಿಗದಿತ ವೆಚ್ಚಗಳ ಸೇರ್ಪಡೆಯ ವಿಷಯದಲ್ಲಿ ಸೂತ್ರಗಳಲ್ಲಿ ಕೊರತೆಯಿದ್ದಿತು, ಅಂದರೆ ಚಾಲಕರ ಸಂಬಳ, ಚಾಲಕರ ಬಾಟಾ, ತೊಡಗಿಸಿಕೊಂಡಿರುವ ವಾಹನಗಳ ಸವಕಲು, ಇವುಗಳು ಪ್ರಯಾಣದ ದೂರ ಹೆಚ್ಚುವುದಕ್ಕನುಗುಣವಾಗಿ ಹೆಚ್ಚಾಗುತ್ತಿದ್ದವು. ಇದಲ್ಲದೆ, ಡಬ್ಲ್ಯುಎಸ್‌ಡಿಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಾಗಣೆಯ ಅಸ್ತಿತ್ವದಲ್ಲಿರುವ ಅಭ್ಯಾಸವು ಸಾಮೀಪ್ಯವನ್ನು ಆಧರಿಸಿರಲಿಲ್ಲ, ಆದರೆ ತಾಲೂಕು ಕೇಂದ್ರ ಆಧಾರಿತ ವ್ಯಾಪ್ತಿಯಲ್ಲಿದ್ದಿತು.*

*ಸಾಗಣೆದಾರರು ಗುತ್ತಿಗೆಯ ಬಾಧ್ಯತೆಗಳನ್ನು ಅನುಸರಿಸದಿರುವುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು, ಅಂದರೆ ಅವರು ಅನಧಿಕೃತ ವಾಹನಗಳು/ಪ್ರಯಾಣಿಕರ ವಾಹನಗಳನ್ನು ಬಳಸಿರುವುದು, ಬಣ್ಣದ ಸಂಹಿತೆಗಳನ್ನು ಅನುಸರಿಸದಿರುವುದು, GPS ಸಾಧನಗಳನ್ನು ಅಳವಡಿಸದಿರುವುದು, ಮುಂತಾದವುಗಳು ಇಲಾಖೆಗೆ ನೈಜ ಸಮಯದ ಆಧಾರದ ಮೇಲೆ WSD ಗಳ ಮೂಲಕ ಭಾರತ ಆಹಾರ ನಿಗಮನಿಂದ ನ್ಯಾಯಬೆಲೆ ಅಂಗಡಿಗಳಿಗೆ ರವಾನೆಗಳನ್ನು ಪತ್ತೆಹಚ್ಚಲು ಮತ್ತು ಟ್ರ್ಯಾಕ್ ಮಾಡಲು ಸಾಧ್ಯವಾಗುತ್ತಿರಲಿಲ್ಲ.*

*ಆಹಾರ ಧಾನ್ಯಗಳ ಸಂಗ್ರಹಣಾ ಮತ್ತು ನಿರ್ವಹಣಾ ನಷ್ಟಗಳು ಮತ್ತು ಸೋರಿಕೆಯನ್ನು ಇಲಾಖೆಯು ಲೆಕ್ಕ ಹಾಕಿರಲಿಲ್ಲವಾಗಿ ಅದು PDS ನಲ್ಲಿ ಸಂಪೂರ್ಣ ದಕ್ಷತೆಯನ್ನು ಸೂಚಿಸುತ್ತಿತ್ತು. ಪರೀಕ್ಷಾ–ತನಿಖೆ ನಡೆಸಿದ ಎಂಟು ಜಿಲ್ಲೆಗಳಲ್ಲಿ ಗಮನಿಸಿದಂತೆ ಸಾರಿಗೆ ವಾಹನಗಳಲ್ಲಿ ಶೇಕಡಾ 8 ರಿಂದ 71 ರಷ್ಟರವರೆಗೆ ಓವರ್‌ಲೋಡ್ ಮಾಡಲಾಗಿತ್ತು.*

*ಹತ್ತಿರದ WSD ಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಪೂರೈಕೆಯ ನಿರ್ದಿಷ್ಟ ನೀತಿಯ ಅನುಪಸ್ಥಿತಿಯಲ್ಲಿ, ರಾಜ್ಯವು WSD ಯಿಂದ ಅಧಿಕಾರವ್ಯಾಪ್ತಿಯ ತಾಲೂಕು ಗಡಿಯಲ್ಲಿರುವ ಆಯಾ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಪೂರೈಸುತ್ತದೆ. ಅನೇಕ ಸಂದರ್ಭಗಳಲ್ಲಿ, ನೆರೆಯ/ಪಕ್ಕದ ತಾಲೂಕಿನ WSD ಗೆ ಹತ್ತಿರವಾಗಿದ್ದರೂ ನ್ಯಾಯಬೆಲೆ ಅಂಗಡಿಯು ದೂರದ ಆಡಳಿತಾತ್ಮಕ ವ್ಯಾಪ್ತಿಯ WSD ಯಿಂದ ಸೇವೆಯನ್ನು ಪಡೆಯುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ, ಸಾಗಣೆ/ನಿರ್ವಹಣೆ ಮತ್ತು ಶೇಖರಣಾ ವೆಚ್ಚಗಳ ಕಡೆಗೆ ಹೆಚ್ಚುವರಿ ಸಾರಿಗೆ ವೆಚ್ಚಗಳನ್ನು ಭರಿಸಲಾಗುತ್ತಿತ್ತು.*

TPDS ಅನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳ ಜಂಟಿ ಜವಾಬ್ದಾರಿಯಡಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ, ಇದರಲ್ಲಿ ಭಾರತ ಆಹಾರ ನಿಗಮ (FCI) ಕೇಂದ್ರ ಸಂಸ್ಥೆಯಾಗಿದ್ದು, ಆಹಾರ ಧಾನ್ಯಗಳ ಖರೀದಿ (ರೈತರಿಂದ/ರಾಜ್ಯ ಸರ್ಕಾರಿ ಏಜೆನ್ಸಿಗಳಿಂದ ಮಂಡಿಗಳಲ್ಲಿ/ಖರೀದಿ ಕೇಂದ್ರಗಳಲ್ಲಿ), ಸಾಗಣೆ, ಸಂಗ್ರಹಣೆ/ಹಂಚಿಕೆ ಮತ್ತು ಆಯಾ ಜಿಲ್ಲಾ ಭಾರತ ಆಹಾರ ನಿಗಮದ ಉಗ್ರಾಣಗಳಲ್ಲಿ ಲಭ್ಯವಾಗುವಂತೆ ಮಾಡುವುದು ಅದರ ಕಾರ್ಯವಾಗಿತ್ತು.

ರಾಜ್ಯದ ಕಾರ್ಯಾಚರಣೆಯ ಪಾತ್ರವು ಭಾರತ ಆಹಾರ ಸಂಸ್ಥೆಯ ಆವರಣದಿಂದ ಆಹಾರಧಾನ್ಯಗಳನ್ನು ಎತ್ತುವ ಮೂಲಕ ಪ್ರಾರಂಭವಾಗುತ್ತದೆ ಮತ್ತು ನಂತರ WSD ಗಳಲ್ಲಿ ಸಂಗ್ರಹಿಸುವುದು, ಫಲಾನುಭವಿಗಳ ಅರ್ಹತೆಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ಧಾನ್ಯಗಳನ್ನು ವಿತರಿಸುವುದರಲ್ಲಿ ಕೊನೆಗೊಳ್ಳುತ್ತದೆ. ಅರ್ಹ ಕುಟುಂಬಗಳನ್ನು ಗುರುತಿಸುವುದು, ಪಡಿತರ ಚೀಟಿಗಳನ್ನು ನೀಡುವುದು, ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರಧಾನ್ಯಗಳನ್ನು ವಿತರಿಸುವುದರ ಜೊತೆಗೆ ಪರವಾನಗಿ ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯೂ ಕೂಡ ಇಲಾಖೆಯದ್ದಾಗಿರುತ್ತದೆ.

ರಾಜ್ಯದಲ್ಲಿ PDS ಕಾರ್ಯಾಚರಣೆ ಮತ್ತು ಮಧ್ಯಸ್ಥಗಾರರ ಪಾತ್ರವನ್ನು ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ:

**ನಕ್ಷೆ–3: ರಾಜ್ಯದಲ್ಲಿ PDS ಕಾರ್ಯಾಚರಣೆಗಳು**




ಇಲಾಖೆಯು ಭಾರತ ಆಹಾರ ನಿಗಮದಿಂದ ಪ್ರತಿ ಕ್ವಿಂಟಾಲ್ ಆಹಾರಧಾನ್ಯಗಳನ್ನು ಎತ್ತಲು ಮತ್ತು WSD ಗಳ ಮೂಲಕ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸಲು ಈ ಕೆಳಗೆ ತೋರಿಸಿದಂತೆ ವೆಚ್ಚವನ್ನು ಭರಿಸುತ್ತದೆ:

## 2.1 ಸಾಗಾಣಿಕೆ ವೆಚ್ಚವನ್ನು ಲೆಕ್ಕಹಾಕುವ ವಿಧಾನ

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಹಾರ ಧಾನ್ಯಗಳ ಸಾಗಣೆಗೆ ಸಂಬಂಧಿಸಿದ ಕೇಂದ್ರ ಸಂಸ್ಥೆಯಾಗಿದ್ದು, ಸಗಟು ಮತ್ತು ಚಿಲ್ಲರೆ ಸಾಗಣೆಗಾಗಿ ಪ್ರತಿ ಜಿಲ್ಲೆಯಲ್ಲಿ ಎರಡು ಒಪ್ಪಂದಗಳನ್ನು ನಿರ್ವಹಿಸುತ್ತದೆ. ಸಗಟು ಒಪ್ಪಂದವು ಭಾರತ ಆಹಾರ ನಿಗಮದಿಂದ ಆಹಾರ ಧಾನ್ಯಗಳನ್ನು

ಎತ್ತುವ ಮತ್ತು ರಾಜ್ಯದ ನಿಗದಿತ ಸಗಟು ಮಾರಾಟ ಮಳಿಗೆಗಳಿಗೆ ವಿತರಿಸುವುದಕ್ಕಾಗಿದ್ದರೆ, ಚಿಲ್ಲರೆ ಸಾಗಣೆಯು, **ನಕ್ಷೆ–4**ರಲ್ಲಿ ತೋರಿಸಿರುವಂತೆ ಸಗಟು ಮಾರಾಟ ಮಳಿಗೆಗಳಿಂದ ಆಹಾರ ಧಾನ್ಯಗಳನ್ನು ಎತ್ತುವ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸುವುದಕ್ಕಾಗಿರುತ್ತದೆ.

**ನಕ್ಷೆ–4: ರಾಜ್ಯದಲ್ಲಿ PDS ಕಾರ್ಯಾಚರಣೆಯ ವೆಚ್ಚ**




Q – ಪರಿಮಾಣ ಕ್ವಿಂಟಾಲ್‌ಗಳಲ್ಲಿ. D, X ಮತ್ತು Y ಗಳ ಮೌಲ್ಯವು ಕೆಳಗಿನ ಕೋಷ್ಟಕ–2ರಲ್ಲಿ ತೋರಿಸಿರುವಂತೆ ಸಗಟು ಮತ್ತು ಚಿಲ್ಲರೆ ಸಾಗಣೆಯಲ್ಲಿ ವಿಭಿನ್ನವಾಗಿರುತ್ತದೆ.

ಸಗಟು ಮತ್ತು ಚಿಲ್ಲರೆ ಸಾಗಣೆಯಲ್ಲಿ ಇಲಾಖೆಯು ಅಳವಡಿಸಿಕೊಂಡ ಪ್ರಸ್ತುತ ಸೂತ್ರಗಳು (ಮಾರ್ಚ್ 2022) ಕೆಳಗಿನಂತಿತ್ತು:

**ಕೋಷ್ಟಕ–2: ರಾಜ್ಯವು ಅಳವಡಿಸಿಕೊಂಡ ಸಗಟು ಮತ್ತು ಚಿಲ್ಲರೆ ಸಾಗಣೆ ಸೂತ್ರಗಳ ವಿವರಗಳು**

**ಸಗಟು ಸಾಗಣೆ**

ಇಲಾಖೆಯು ಸಗಟು ಸಾಗಾಣಿಕೆ ವೆಚ್ಚವನ್ನು ಲೆಕ್ಕ ಹಾಕಲು $Z=X+(Y*D)$[2] ಸೂತ್ರವನ್ನು ಅಳವಡಿಸಿಕೊಂಡಿದ್ದು, ಇದರಲ್ಲಿ 'X' ಮತ್ತು 'Y' ದೂರದ ಆಧಾರದ ಮೇಲೆ ಬದಲಾಗುತ್ತವೆ ಮತ್ತು ಮೌಲ್ಯಗಳನ್ನು ಕೆಳಗಿನಂತೆ ನಿರ್ಧರಿಸಲಾಗುತ್ತದೆ:

(₹ ಗಳಲ್ಲಿ)

| ದೂರದ ಸ್ಲ್ಯಾಬ್‌ಗಳು | X ಮೌಲ್ಯ | Y ಮೌಲ್ಯ |
|---|---|---|
| 0ಯಿಂದ 25 ಕಿಮೀ | 28.26 | 0.26 |
| 26ರಿಂದ 150 ಕಿಮೀ | 37.30 | 0.26 |
| 151ರಿಂದ 300 ಕಿಮೀ | 41.31 | 0.26 |
| 301 ಕಿಮೀ ಮೇಲ್ಪಟ್ಟು | 42.98 | 0.26 |

**ಚಿಲ್ಲರೆ ಸಾಗಣೆ**

ಚಿಲ್ಲರೆ ಸಾಗಣೆಯಲ್ಲಿ $Z=(X*D)+Y$[3] ಸೂತ್ರವನ್ನು ಅಳವಡಿಸಿಕೊಳ್ಳಲಾಗಿದೆ, ಇದರಲ್ಲಿ 'X' ಮತ್ತು 'Y' ದೂರವನ್ನು ಆಧರಿಸಿ ಬದಲಾಗುತ್ತದೆ ಮತ್ತು ಗದಗ ಜಿಲ್ಲೆಗೆ ಸಂಬಂಧಿಸಿದಂತೆ ನಿರ್ಧರಿಸಲಾದ ಮೌಲ್ಯಗಳು ಈ ಕೆಳಗಿನಂತಿವೆ:

(₹ ಗಳಲ್ಲಿ)

| ಕ್ರಮ ಸಂಖ್ಯೆ | ತಾಲ್ಲೂಕು | X ಮೌಲ್ಯ | Y ಮೌಲ್ಯ |
|---|---|---|---|
| 1 | ಗದಗ | 0.63 | 16 |
| 2 | ಮುಂಡರಗಿ | 0.78 | 16 |
| 3 | ರೋಣ | 0.77 | 16 |
| 4 | ಶಿರಹಟ್ಟಿ | 0.77 | 16 |
| 5 | ನರಗುಂದ | 0.79 | 16 |

ಉಲ್ಲೇಖಿಸಿದ ದರಗಳು ಒಪ್ಪಂದದ ಅವಧಿಯಲ್ಲಿ ಸ್ಥಿರವಾಗಿರುತ್ತವೆ ಮತ್ತು ಸುಂಕಗಳು/ಶುಲ್ಕಗಳು, ಶಿಷ್ಟಾಚಾರದ ದರಗಳು, ತೆರಿಗೆಗಳು, ಸುಂಕಗಳು ಇತ್ಯಾದಿಗಳು ಮತ್ತು ಶಾಸನಬದ್ಧ/ಸರ್ಕಾರದ ಪರಿಷ್ಕರಣೆ ಸೇರಿದಂತೆ ಯಾವುದೇ ಕಾರಣಕ್ಕೂ ಯಾವುದೇ ಪರಿಷ್ಕರಣೆಯನ್ನು ಅನುಮತಿಸಲಾಗುವುದಿಲ್ಲ ಎಂದು ಸಗಟು ಮತ್ತು ಚಿಲ್ಲರೆ ಸಾಗಣೆದಾರರೊಂದಿಗೆ ಇಲಾಖೆಯು ಮಾಡಿಕೊಂಡಿದ್ದ ಗುತ್ತಿಗೆ ಒಪ್ಪಂದವು ಸೂಚಿಸಿತ್ತು. ಸಗಟು ಸಾಗಣೆ ವೆಚ್ಚವು ಇಂಧನ ದರಗಳಲ್ಲಿ ಹೆಚ್ಚಳವನ್ನು ಪರಿಗಣಿಸಿದರೆ ಚಿಲ್ಲರೆ ಸಾಗಣೆ ವೆಚ್ಚಗಳು ಅದನ್ನು ಪರಿಗಣಿಸುವುದಿಲ್ಲ.

ಭಾರತ ಆಹಾರ ನಿಗಮದಿಂದ ಮುಂಡರಗಿ WSD ಗೆ ಸಗಟು ಸಾರಿಗೆ ವೆಚ್ಚದಲ್ಲಿ ಆಹಾರಧಾನ್ಯಗಳ ವಾಸ್ತವಿಕ ಹಂಚಿಕೆಯ ಸಾಗಣೆಗೆ ಭರಿಸುವ ವೆಚ್ಚವನ್ನು ಮತ್ತು ಮುಂಡರಗಿ WSD ಯಿಂದ ಐದು ನ್ಯಾಯಬೆಲೆ ಅಂಗಡಿಗಳಿಗೆ[4] ಚಿಲ್ಲರೆ ಸಾರಿಗೆ ವೆಚ್ಚದಲ್ಲಿ 22.5 ಮೆಟ್ರಿಕ್ ಟನ್ ಸಾಮರ್ಥ್ಯದ ಅದೇ ವಾಹನವನ್ನು ಬಳಸಿ ಪ್ರತಿ ಕಿ.ಮೀ.ಗೆ ಪ್ರತಿ ಯೂನಿಟ್ ಆಹಾರಧಾನ್ಯದ ಸಾಗಣೆಗೆ ಭರಿಸುವ ವೆಚ್ಚವನ್ನು ಲೆಕ್ಕಪರಿಶೋಧನೆಯು ಲೆಕ್ಕ ಹಾಕಿತು. ಸಗಟು ಮಾರಾಟದಲ್ಲಿ WSD ಗಳಲ್ಲಿ ಸರಕು ಇಳಿಸುವುದಕ್ಕೆ ಮಾತ್ರ ಹಮಾಲಿ ಶುಲ್ಕಗಳು[5]

---

[2] D – ಲೋಕೋಪಯೋಗಿ ಇಲಾಖೆಯ ಪ್ರಕಾರ ಭಾರತ ಆಹಾರ ಸಂಸ್ಥೆ/ಎಸ್‌ಡಬ್ಲ್ಯುಸಿ/ಸಿಡಬ್ಲ್ಯುಸಿ ಗಳ ನಡುವಿನ ಸರಾಸರಿ ದೂರ (ಹೋಗುವ ಮತ್ತು ಬರುವ).
X – ಸ್ಥಿರ ವೆಚ್ಚಗಳು ಅಂದರೆ, ಚಾಲಕರ ಸಂಬಳ, ಬಾಟಾ, ಹಮಾಲಿ ಶುಲ್ಕಗಳು, ಟ್ರಕ್‌ಗಳ ಸವಕಳಿ ಇತ್ಯಾದಿ – ಪ್ರತಿ ಕಿಮೀ/ಕ್ವಿಂಟಾಲ್‌ಗೆ ಡೀಸಲ್‌ನ ವೆಚ್ಚ
Y - ಪ್ರತಿ ಕಿ.ಮೀ.ಗೆ ಪ್ರತಿ ಕ್ವಿಂಟಾಲ್‌ಗೆ ಡೀಸಲ್ ವೆಚ್ಚ
Z – ಭಾರತ ಆಹಾರ ನಿಗಮ ಉಗ್ರಾಣದಿಂದ ಡಬ್ಲ್ಯುಎಸ್‌ಡಿಗೆ ಒಂದು ಕ್ವಿಂಟಾಲ್ ಧಾನ್ಯವನ್ನು ಸಾಗಿಸುವ ವೆಚ್ಚ

[3] D – ಡಬ್ಲ್ಯುಎಸ್‌ಡಿಯಿಂದ ನ್ಯಾಯಬೆಲೆ ಅಂಗಡಿಗಳ ದೂರ (ಹೋಗುವ ಮತ್ತು ಬರುವ)
X – ಡ್ರೈವರ್ ವೇತನ, ಬಾಟ ಮತ್ತು ಇತರೆ ವೆಚ್ಚಗಳು ಹಾಗೂ ಟ್ರಕ್‌ನ ಸವಕಳಿ,
Y – ಹಮಾಲಿ ವೆಚ್ಚಗಳು
Z - ಪ್ರತಿ ಕ್ವಿಂಟಾಲ್‌ಗೆ ಸಾಗಣೆಯ ವೆಚ್ಚ

[4] ನ್ಯಾಯಬೆಲೆ ಅಂಗಡಿಗಳ ಸಂಖ್ಯೆ 8881, 8885, 8909, 8911 ಮತ್ತು 8916.

[5] ಟ್ರಕ್‌ನಲ್ಲಿ ಆಹಾರ ಧಾನ್ಯಗಳನ್ನು ಲೋಡ್ ಮಾಡಲು ಮತ್ತು ಅನ್‌ಲೋಡ್ ಮಾಡಲು ಕಾರ್ಮಿಕ ಶುಲ್ಕಗಳು.

ಅನ್ವಯವಾದರೆ ಚಿಲ್ಲರೆ ವ್ಯಾಪಾರದಲ್ಲಿ WSDಯಲ್ಲಿ ಲೋಡಿಂಗ್ ಮಾಡುವುದು ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಸರಕು ಇಳಿಸುವುದಕ್ಕೆ ಹಮಾಲಿ ಶುಲ್ಕಗಳು ಅನ್ವಯವಾಗುತ್ತವೆ. ಹೀಗೆ, ಚಿಲ್ಲರೆ ಸಾರಿಗೆ ಸೂತ್ರದಲ್ಲಿ ಸಂಬಂಧಿತ ಹಮಾಲಿ ಶುಲ್ಕಗಳನ್ನು ಕಡಿಮೆ ಮಾಡುವ ಮೂಲಕ ಮಾತ್ರ ಚಿಲ್ಲರೆ ಮತ್ತು ಸಗಟು ಸಾರಿಗೆ ನಡುವಿನ ವೆಚ್ಚದ ಹೋಲಿಕೆಯನ್ನು ಮಾಡಬಹುದಾಗಿದೆ.

**ಕೋಷ್ಟಕ–3: ಸಗಟು ಮತ್ತು ಚಿಲ್ಲರೆ ಸಾರಿಗೆಯ ಸಾಂದರ್ಭಿಕ ಲೆಕ್ಕಾಚಾರ**

<table>
<tr><th rowspan="2">ಸಾಗಣೆ</th><th colspan="2">ಸಾಗಣೆ ವೆಚ್ಚ (ಮಾರ್ಚ್ 2022)</th></tr>
<tr><th>ಸಗಟು</th><th>ಚಿಲ್ಲರೆ<br>(5 ನ್ಯಾಯಬೆಲೆ ಅಂಗಡಿಗಳು D1 to D5 ದೂರದೊಂದಿಗೆ)</th></tr>
<tr><td>ಸೂತ್ರದ ಮಾನದಂಡಗಳು</td><td>D: 91.44 ಕಿ.ಮೀ.<br>X: 37.3<br>Y: 0.26<br>X+Y*D = 61.0744</td><td>X: 0.78 ಮುಂಡರಗಿಗೆ<br>Y: 16<br>X*D+Y
<table>
<tr><th>D ಕಿ.ಮೀ.ಗಳಲ್ಲಿ</th><th>Q ಕ್ವಿಂಟಾಲ್‌ಗಳಲ್ಲಿ</th><th>Z ₹ ಗಳಲ್ಲಿ</th></tr>
<tr><td>D1:51.50</td><td>Q1:210</td><td>11,795.70</td></tr>
<tr><td>D2:27.02</td><td>Q2:209</td><td>7,748.80</td></tr>
<tr><td>D3:01.66^</td><td>Q3:207</td><td>6,541.20</td></tr>
<tr><td>D4:54.80</td><td>Q4:202</td><td>11,866.29</td></tr>
<tr><td>D5:46.88</td><td>Q5:194</td><td>10,131.20</td></tr>
<tr><td>ಒಟ್ಟು D:181.42 ಕಿಮೀ</td><td>ಒಟ್ಟು = 1,022 ಕ್ವಿಂಟಾಲ್‌ಗಳು</td><td>48,083.29</td></tr>
</table></td></tr>
<tr><td>ಮಾರ್ಚ್ 2022ರಲ್ಲಿ 5 ನ್ಯಾಯಬೆಲೆ ಅಂಗಡಿಗಳಿಗೆ ವಾಸ್ತವಿಕವಾಗಿ ವಿತರಿಸಿದ ಪ್ರಮಾಣ</td><td>1,022 ಕ್ವಿಂಟಾಲ್‌ಗಳು</td><td>5 ನ್ಯಾಯಬೆಲೆ ಅಂಗಡಿಗಳಿಗೆ 1,022 ಕ್ವಿಂಟಾಲ್‌ಗಳು.</td></tr>
<tr><td>ವೆಚ್ಚ (Z)</td><td>61.0744*1,022= ₹62,418.04</td><td>₹48,083.29–8,176 (ಹಮಾಲಿ ಶುಲ್ಕ) = ₹39,907.29</td></tr>
<tr><td>ಪ್ರತಿ ಕಿ.ಮೀ.ಗೆ ವೆಚ್ಚ</td><td>₹.136.52<br>22.5 ಮೆಟ್ರಿಕ್ ಟನ್ ವಾಹನದ 5 ಪ್ರಯಾಣಗಳನ್ನು ಪರಿಗಣಿಸಿ = 91.44*5= 457.20 ಕಿ.ಮೀ.</td><td>₹219.97</td></tr>
</table>

^ ಟೆಂಡರ್ ಷರತ್ತುಗಳ ಪ್ರಕಾರ, ದೂರವು 10 ಕಿ.ಮೀ.ಗಳಿಗಿಂತ ಕಡಿಮೆಯಿದ್ದರೆ, ಕನಿಷ್ಠ ದೂರವನ್ನು 10 ಕಿ.ಮೀ. ಎಂದು ಪರಿಗಣಿಸಲಾಗುತ್ತದೆ ಮತ್ತು ಎರಡು ಬಾರಿ (ಹೋಗುವ ಮತ್ತು ಬರುವ) ಗುಣಿಸಲಾಗುತ್ತದೆ. D3ಕ್ಕೆ ಸಂಬಂಧಿಸಿದಂತೆ, ದೂರವು 1.66 ಕಿಮೀ ಆಗಿದ್ದರೂ, ಅದನ್ನು 20 ಕಿಮೀ ಎಂದು ಪರಿಗಣಿಸಲಾಗಿದೆ. ಅಂದರೆ, ((0.78*20)+16)*207=6,541.20

ಮೇಲೆ ವಿವರಿಸಿದಂತೆ, ಒಂದೇ ಪ್ರಮಾಣದ ಆಹಾರಧಾನ್ಯಗಳನ್ನು ಸಾಗಿಸಲು WSD ಮತ್ತು ನ್ಯಾಯಬೆಲೆ ಅಂಗಡಿಗಳ ನಡುವಿನ ದೂರವು ಕಡಿಮೆಯಾಗಿದ್ದರಿಂದ ಸಗಟು ಸಾಗಣೆಗೆ ಹೋಲಿಸಿದರೆ ಚಿಲ್ಲರೆ ಸಾಗಣೆಯಲ್ಲಿ ಪ್ರತಿ ಕಿ.ಮೀ.ಗೆ ವೆಚ್ಚವು ಶೇಕಡಾ 61ರಷ್ಟು ಅಧಿಕವಾಗಿತ್ತು. ಇದರ ಪರಿಣಾಮವೆಂದರೆ ಸಗಟು ಮತ್ತು ಚಿಲ್ಲರೆ ಸಾಗಣೆ ಎರಡರಲ್ಲೂ ಒಂದೇ ರೀತಿಯ ಸಾರಿಗೆ ಪರಿಸ್ಥಿತಿಗಳು ಚಾಲ್ತಿಯಲ್ಲಿದ್ದರೂ ಸಹ ಚಿಲ್ಲರೆ ಸಾಗಣೆಗೆ ಇಲಾಖೆಯು ಹೆಚ್ಚುವರಿ ವೆಚ್ಚವನ್ನು ಭರಿಸಬೇಕಾಗಿತ್ತು.

ಇದಲ್ಲದೆ, ಸಗಟು ಸಾರಿಗೆಯಲ್ಲಿ ನಾಲ್ಕು ಸ್ಲಾಬ್ ಗಳ ಅಗತ್ಯತೆಗೆ ಸಮರ್ಥನೆಯಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಏಕೆಂದರೆ ಭಾರತ ಆಹಾರ ನಿಗಮ ಮತ್ತು 5 ರಾಜ್ಯ WSD ಗಳ ನಡುವಿನ ಅಂತರವು ಸ್ಥಿರವಾಗಿತ್ತು ಮತ್ತು ಇಲಾಖೆಗೆ ಅಂತಹ ದೂರಗಳ ಬಗ್ಗೆ ಅರಿವಿತ್ತು ಹಾಗೂ ವಾಸ್ತವಿಕ ದೂರದ ಆಧಾರದ ಮೇಲೆ ಮಿತವ್ಯಯವಾದ ಸೂತ್ರವನ್ನು ಬಳಸಿಕೊಳ್ಳುವಲ್ಲಿ ವಿಫಲವಾಗಿತ್ತು.

ಎರಡೂ ಸಂದರ್ಭಗಳಲ್ಲಿ ವಿಭಿನ್ನ ಕಾರ್ಯವ್ಯಾಪ್ತಿಯಿಂದಾಗಿ ಇಲಾಖೆಯು ವಿಭಿನ್ನ ಸೂತ್ರವನ್ನು ಅಳವಡಿಸಿಕೊಂಡಿತ್ತು ಎಂದು ಸರ್ಕಾರವು ತಿಳಿಸಿತು (ಏಪ್ರಿಲ್ 2023). ಇಲಾಖೆಯು ಅಂತಹ ವೆಚ್ಚದ ಸೂತ್ರವನ್ನು ತೆಗೆದುಹಾಕಿದೆ ಮತ್ತು ಜೂನ್ 2022ರಿಂದ ಹೊಸ ಸೂತ್ರವನ್ನು ಅಳವಡಿಸಿಕೊಂಡಿದೆ, ಇದು ಸಗಟು ಮತ್ತು ಚಿಲ್ಲರೆ ಸಾಗಣೆ ಎರಡಕ್ಕೂ ಸಾಮಾನ್ಯ ನಿಯಮಗಳನ್ನು ಹೊಂದಿದೆ ಎಂದೂ ತಿಳಿಸಲಾಯಿತು.

## 2.2 ಗುತ್ತಿಗೆ ಬಾಧ್ಯತೆಗಳ ಕಳಪೆ ಜಾರಿಗೊಳಿಸುವಿಕೆ

ಸಗಟು ಗುತ್ತಿಗೆ ಸಾಗಣೆದಾರರು ಸಗಟು ಸಾಗಣೆಗೆ ವಾಹನಗಳನ್ನು ಬಳಸಲು ಒಪ್ಪಂದದ ಷರತ್ತುಗಳ[6] ಪ್ರಕಾರ ವಾಹನದ ನಿರ್ವಹಣೆಯೊಂದಿಗೆ ಇಲಾಖೆಯ ಅನುಮತಿಯನ್ನು ಪಡೆಯುವುದು ಅವಶ್ಯಕವಾಗಿತ್ತು.

### *2.2.1 ಅನಧಿಕೃತ ವಾಹನಗಳಲ್ಲಿ ಆಹಾರ ಧಾನ್ಯಗಳ ಸಾಗಣೆ (ಸಗಟು)*

ಸಾಗಣೆದಾರರು ಸಾಗಣೆಯಲ್ಲಿ ಬಳಸುವ ವಾಹನಗಳ ಪಟ್ಟಿಯನ್ನು ಸಲ್ಲಿಸಿದ್ದರೂ ಸಹ ಅವರು ಅಧಿಕೃತವಲ್ಲದ/ಗುತ್ತಿಗೆ ಒಪ್ಪಂದದ ಪ್ರಕಾರ ಪಟ್ಟಿಯಲ್ಲಿಲ್ಲದ ವಾಹನಗಳ ಬಳಕೆ ಮಾಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಗುತ್ತಿಗೆ ಒಪ್ಪಂದದಲ್ಲಿ ಪಟ್ಟಿ ಮಾಡಲಾದ ಅಧಿಕೃತ ಟ್ರಕ್‌ಗಳಿಂದ ಅಗತ್ಯ ಸರಕುಗಳನ್ನು ತಲುಪಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು WSD ಯ ಗೋದಾಮು ವ್ಯವಸ್ಥಾಪಕರು ವಿಫಲರಾಗಿದ್ದರು. ತತ್ಪರಿಣಾಮವಾಗಿ, ಈ ಕೆಳಗಿನಂತೆ, ಅನಧಿಕೃತ ವಾಹನಗಳಲ್ಲಿ ಮಾಡಿದ ರವಾನೆಗಳ ಕ್ಲೈಮ್‌ಗಳನ್ನು ಗುತ್ತಿಗೆದಾರರು ಸಲ್ಲಿಸಿದರು ಮತ್ತು ಇಲಾಖೆಯು ಅವುಗಳನ್ನು ಅನುಮೋದಿಸಿತು.

[6] 'ನ್ಯಾಶನಲ್ ಪರ್ಮಿಟ್ ವಾಹನಗಳನ್ನು ಹೊರತುಪಡಿಸಿ ಬಾಡಿಗೆ ಟ್ರಕ್‌ಗಳಿಗೆ ಹಳದಿ ಬಣ್ಣ ಬಳಿಯಬೇಕು' (ಮುಂಭಾಗ ಮತ್ತು ಹಿಂಭಾಗದಲ್ಲಿ ಬಣ್ಣ ಬಳಿಯಬೇಕು) ಮತ್ತು ಈ ಕೆಳಗಿನ ಮಾಹಿತಿಯನ್ನು ಪ್ರದರ್ಶಿಸಬೇಕು:

(1) 1 ಅಡಿ ಗಾತ್ರದ ಅಕ್ಷರಗಳಲ್ಲಿ ಕನ್ನಡದಲ್ಲಿ 'ಅನ್ನಭಾಗ್ಯ ಯೋಜನೆ',

(2) 6 ಇಂಚಿನ ಗಾತ್ರದ ಅಕ್ಷರದಲ್ಲಿ ಗ್ರಾಹಕ ಸಹಾಯವಾಣಿ ಸಂಖ್ಯೆ '1967'

(3) 6 ಇಂಚಿನ ಗಾತ್ರದ ಅಕ್ಷರದಲ್ಲಿ ಜಿಲ್ಲಾ ಉಪನಿರ್ದೇಶಕರ ಕಚೇರಿ ಸಂಪರ್ಕ ಸಂಖ್ಯೆ

(4) ಸಾರಿಗೆಯನ್ನು ವಹಿಸಿಕೊಡಲಾಗಿರುವ ತಾಲೂಕಿನ ಹೆಸರು.

**ಪ್ರದರ್ಶಿಕೆ–1: ಅನಧಿಕೃತ ವಾಹನಗಳಲ್ಲಿ ಸಾಗಣೆ**




ಲೆಕ್ಕಪರಿಶೋಧನೆಯು ನಾಲ್ಕು ಜಿಲ್ಲೆಗಳಲ್ಲಿ 2,510 ಟ್ರಕ್ ಚಿಟ್‌ಗಳನ್ನು ಪರೀಕ್ಷಾರ್ಥ–ತನಿಖೆ ನಡೆಸಿತು ಮತ್ತು ಕೋಷ್ಟಕ–5ರಲ್ಲಿ ತೋರಿಸಿರುವಂತೆ, 1,725 ಸಂಚರಣೆಗಳಲ್ಲಿ ಆಹಾರ ಧಾನ್ಯಗಳ ಸಾಗಣೆಯನ್ನು ಇಲಾಖೆಯಿಂದ ಅನುಮೋದಿತವಾಗಿರದ ವಾಹನಗಳಲ್ಲಿ ನಡೆಸಲಾಗಿತ್ತು ಎಂಬುದನ್ನು ಗಮನಿಸಲಾಯಿತು.

**ಕೋಷ್ಟಕ–4: ಅನಧಿಕೃತ ವಾಹನಗಳಲ್ಲಿನ ಸಂಚರಣೆಗಳು ವಿವರಗಳು**

| ಜಿಲ್ಲೆ | ಪರೀಕ್ಷಾರ್ಥ–ತನಿಖೆ ನಡೆಸಿದ ಸಂಚರಣೆಗಳು | ಅನಧಿಕೃತ ವಾಹನಗಳಲ್ಲಿನ ಸಂಚರಣೆಗಳ ಸಂಖ್ಯೆ |
|---|---|---|
| ಬೆಂಗಳೂರು ದಕ್ಷಿಣ IRA | 115 | 57 |
| ಬೆಂಗಳೂರು ಪೂರ್ವ IRA | 144 | 141 |
| ಬೀದರ್ | 588 | 414 |
| ಮಂಡ್ಯ | 470 | 279 |
| ಗದಗ್ | 363 | 200 |
| ರಾಯಚೂರು | 638 | 511 |
| ಕೊಡಗು | 192 | 123 |
| **ಒಟ್ಟು** | **2,510** | **1,725** |

ಅನಧಿಕೃತ ವಾಹನಗಳ ಬಳಕೆಯು ಮಾರ್ಗಪಲ್ಲಟಗಳ ಅಪಾಯದಿಂದ ಕೂಡಿತ್ತು, ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಿದಂತೆ ಸಿಮೆಂಟ್, ರಸಗೊಬ್ಬರಗಳು ಮತ್ತು ಇತರೆ ಸರಕುಗಳನ್ನು ಸಾಗಿಸಲು ಬಳಸುವ ಟ್ರಕ್‌ಗಳಲ್ಲಿ ಆಹಾರ ಧಾನ್ಯಗಳನ್ನು ಸಾಗಿಸಲಾಗುತ್ತಿತ್ತು. ಒಪ್ಪಂದದ ಬಾಧ್ಯತೆಗಳಡಿಯಲ್ಲಿ ಅಗತ್ಯವಿರುವಂತೆ ಅನುಸರಣೆಯ ಮೇಲ್ವಿಚಾರಣೆ ಮಾಡಲು ಇಲಾಖೆಯು ವಿಫಲವಾಗಿತ್ತು. ಅನಧಿಕೃತ ವಾಹನಗಳ ಬಳಕೆಯನ್ನು ತಡೆಯಲು, FCI ನಿಂದ WSD ವರೆಗೆ ಮತ್ತು ಅಲ್ಲಿಂದ ನ್ಯಾಯಬೆಲೆ ಅಂಗಡಿಗಳಿಗೆ

ಆಹಾರ ಧಾನ್ಯಗಳ ಚಲನೆಯನ್ನು ಮೇಲ್ವಿಚಾರಣೆ ಮಾಡಲು ಮೊಬೈಲ್ ಅಪ್ಲಿಕೇಶನ್ 'ಆಹಾರ ಟ್ರ್ಯಾಕ್' ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಸರ್ಕಾರವು ತಿಳಿಸಿತು.

### 2.2.2 ಪ್ರಯಾಣಿಕರ ವಾಹನಗಳಲ್ಲಿ ಮತ್ತು ಲಘು ಸರಕು ವಾಹನಗಳಲ್ಲಿ ಆಹಾರ ಧಾನ್ಯಗಳ ಸಾಗಣೆ

ಆಹಾರ ಧಾನ್ಯಗಳನ್ನು ಸಾಗಿಸಲು ಬಳಸುವ ವಾಹನಗಳು ಇಲಾಖೆಗೆ ಸಲ್ಲಿಸಿದ ವಾಹನಗಳ ಪಟ್ಟಿಗೆ ಅನುಗುಣವಾಗಿರಬೇಕು. ಟ್ರಕ್ ಚಿಟ್‌ಗಳ ಪ್ರಕಾರ ವಾಹನ ಸಂಖ್ಯೆಗಳನ್ನು ಲೆಕ್ಕಪರಿಶೋಧನೆಯು 'ವಾಹನ್' ಪೋರ್ಟಲ್‌ನಲ್ಲಿನ ವಾಹನದ ವಿವರಗಳೊಂದಿಗೆ ತಾಳೆ ಮಾಡಿ ನೋಡಿತು ಮತ್ತು ಅವುಗಳಲ್ಲಿ ಹಲವು ಪ್ರಯಾಣಿಕರ ವಾಹನಗಳಾಗಿರುವುದನ್ನು ಗಮನಿಸಲಾಯಿತು. ಗುತ್ತಿಗೆದಾರರು ಪ್ರಯಾಣಿಕ ವಾಹನಗಳಾದ ಕಾರುಗಳು, ಆಟೋಗಳು, ತ್ರಿಚಕ್ರ ವಾಹನಗಳನ್ನು ಬಳಸಿಕೊಂಡು FCI ನಿಂದ ಸಗಟು ಮಾರಾಟ ಮಳಿಗೆಗಳಿಗೆ ಆಹಾರ ಧಾನ್ಯಗಳನ್ನು ಸಾಗಿಸಿರುವುದಾಗಿ ತಿಳಿಸಿ ಸಗಟು ಸಾಗಣೆ ಹಕ್ಕೊತ್ತಾಯಗಳನ್ನು ಸಲ್ಲಿಸಿದ್ದರು. ವಿವರಗಳನ್ನು **ಕೋಷ್ಟಕ–5**ರಲ್ಲಿ ನೀಡಲಾಗಿದೆ.

**ಕೋಷ್ಟಕ–5: ಸಾಗಣೆಗಾಗಿ ಬಳಸಿದ ವಾಹನಗಳ ವಿವರಗಳು**

| ಡಬ್ಲ್ಯೂಎಸ್‌ಡಿ ಹೆಸರು | ಟ್ರಿಪ್‌ಗಳ ಸಂಖ್ಯೆ | ವಾಹನ ಸಂಖ್ಯೆ | ವಾಹನದ ಮಾದರಿ | ಸಾಗಣೆ ಮಾಡಿದ ಪರಿಮಾಣ (ಕ್ವಿಂಟಾಲ್‌ಗಳಲ್ಲಿ) |
|---|---|---|---|---|
| ಹೆಚ್.ಎಸ್.ರಸ್ತೆ | 4 | KA01AF7748 | ತ್ರಿಚಕ್ರ ವಾಹನ (ಪ್ರಯಾಣಿಕ) (3WT) | 759.78 |
| | 2 | KA01AF7047<br>KA01AE7097 | ಮಾರುತಿ ರಿಟ್ಜ್ ಎಲ್‌ಡಿಐ ಬಿಎಸ್IV<br>ಆರ್‌ಇ ಕಾಂಪ್ಯಾಕ್ಟ್ | 139.24<br>252.36 |
| ಹುಮ್ನಾಬಾದ್ | 3 | KA32 2745<br>AP28 3555 | ಮೋಟಾರ್ ಕ್ಯಾಬ್ (ಎಲ್‌ಪಿವಿ)<br>ಮಾರುತಿ 800 ಆಮ್ನಿ | 274.91<br>492.20 |
| | 1 | TS12UC2524 | ತ್ರಿಚಕ್ರ ವಾಹನ (ಪ್ರಯಾಣಿಕ) (3WT) | 300.02 |
| ಹನುಮಂತನಗರ | 1 | KA01AB0139 | ಟಾಟಾ ಇಂಡಿಕಾ ವಿ2 | 244.20 |
| | 1 | KA02AD3830 | ತ್ರಿಚಕ್ರ ವಾಹನ ಆರ್‌ಇ 4 ಎಸ್ 205 ಎಲ್‌ಪಿಜಿ | 275.90 |
| ಬನಶಂಕರಿ | 1 | KA02AF0239 | ಟೊಯೋಟಾ ಇಟಿಯೋಸ್ (ಎಮ್) ಬಿಎಸ್ IV | 281.39 |
| | 1 | KA01AF7748 | ತ್ರಿಚಕ್ರ ವಾಹನ (ಪ್ರಯಾಣಿಕ) (3WT) | 187.56 |
| | 1 | KA51A0139 | ಟಾಟಾ ಏಸ್ ಬಿಎಸ್ II 2100 ಎಮ್‌ಎಮ್ | 247.90 |
| | 2 | KA01AB3830 | ಟಾಟಾ ಏಸ್ ಏಕ್ಸ್ ಬಿಎಸ್3 | ^277.69<br>^281.29 |
| **ಒಟ್ಟು** | | | | **4,014.44** |

^ ಈ ಮಿನಿ ಟ್ರಕ್‌ಗಳ ಸಾಗಿಸುವ ಸಾಮರ್ಥ್ಯ 7.5 ಕ್ವಿಂಟಾಲ್‌ಗಳು ಮಾತ್ರ.

ಮೇಲಿನ ಪ್ರಯಾಣಿಕರ ವಾಹನಗಳನ್ನು ಬಳಸಿಕೊಂಡು 4,014.44 ಕ್ವಿಂಟಾಲ್ ಆಹಾರ ಧಾನ್ಯಗಳನ್ನು ವಿತರಿಸಲಾಗಿದೆ ಎನ್ನುವ ಸಾಗಣೆದಾರರ ಹಕ್ಕೊತ್ತಾಯಗಳು ಅನುಮಾನಾಸ್ಪದವಾಗಿದೆ ಮತ್ತು ಅದನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಲಿಲ್ಲ. ವಾಹನಗಳು ಹೊರೆಹೊರುವ ಸಾಮರ್ಥ್ಯ

ಪರಿಗಣಿಸಿದಲ್ಲಿ ಅಷ್ಟು ದೊಡ್ಡ ಪ್ರಮಾಣಗಳ ವಿತರಣೆ ಮಾಡಿರುವ ಸಾಧ್ಯತೆ ಸ್ವಲ್ಪವೂ ಇಲ್ಲದಿರುವುದರಿಂದ ಸಾಗಣೆದಾರರು ಹಕ್ಕೊತ್ತಾಯ ಮಾಡಿದ್ದ ವೆಚ್ಚಗಳನ್ನು ತಿರಸ್ಕರಿಸಬಹುದಾಗಿದ್ದರೂ ಇಲಾಖೆಯು ಅವುಗಳನ್ನು ಅನುಮತಿಸದಿರುವಲ್ಲಿ ವಿಫಲವಾಗಿತ್ತು.

ಲೆಕ್ಕಪರಿಶೋಧನೆಯ ಅವಿಷ್ಕಾರಗಳ ಬಗ್ಗೆ ಸರ್ಕಾರದ ಉತ್ತರ ಮೌನವಾಗಿದೆ.

### 2.2.3 ಅಧಿಕೃತ ಮಾರ್ಗಗಳನ್ನು ಒದಗಿಸದಿರುವುದು ಮತ್ತು GPS ಅನ್ನು ಅನುಷ್ಠಾನಗೊಳಿಸದಿರುವುದು

ಟೆಂಡರ್ ಷರತ್ತುಗಳ ಪ್ರಕಾರ, ಆಹಾರ ಧಾನ್ಯಗಳ ಸಾಗಣೆಯ ಮಾರ್ಗ ಯೋಜನೆಯಾದ 'ಚಲನೆಯ ಯೋಜನಾ ಪಟ್ಟಿಯನ್ನು', ಗುತ್ತಿಗೆದಾರರು ಜಿಲ್ಲಾಧಿಕಾರಿಗಳು/ಹೆಚ್ಚುವರಿ ನಿರ್ದೇಶಕರು (ಅನೌಪಚಾರಿಕ ಪಡಿತರ ಪ್ರದೇಶ) ಅವರೊಂದಿಗೆ ಸಮಾಲೋಚಿಸಿ ಅಂತಿಮಗೊಳಿಸಿರಬೇಕು. ಮಾರ್ಗ ಯೋಜನೆಯಿಂದ ಅಸಮಂಜಸವಾದ ಮಾರ್ಗಪಲ್ಲಟವೇನಾದರೂ ಇದ್ದಲ್ಲಿ, ತುರ್ತು ಸಂದರ್ಭವನ್ನು ಹೊರತುಪಡಿಸಿ, ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯೊಂದಿಗೆ ಮಾತ್ರ ಮಾಡಬೇಕು. ತುರ್ತು ಸಂದರ್ಭದಲ್ಲಿ, ಏಳು ದಿನಗಳೊಳಗೆ ಪೂರ್ವ ಲಿಖಿತ ಅನುಮತಿಯನ್ನು ತೆಗೆದುಕೊಳ್ಳಲು ಸಾಧ್ಯವಾಗದಿದ್ದರೆ ಜಿಲ್ಲಾಧಿಕಾರಿ/ಹೆಚ್ಚುವರಿ ನಿರ್ದೇಶಕರಿಗೆ (IRA), ಮಾರ್ಗಪಲ್ಲಟದ ಬಗ್ಗೆ ಮುಂಚಿತವಾಗಿ ಮೌಖಿಕವಾಗಿ ತಿಳಿಸಬೇಕು. ಅಂತಿಮಗೊಳಿಸಿದ ಮಾರ್ಗದಲ್ಲಿ ಯಾವುದೇ ಅನಧಿಕೃತ ಮಾರ್ಗಪಲ್ಲಟವನ್ನು ಒಪ್ಪಂದದ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ.

ಪರೀಕ್ಷಾರ್ಥ–ತನಿಖೆ ನಡೆಸಿದ ಎಂಟು ಜಿಲ್ಲೆಗಳಲ್ಲಿ ಗುತ್ತಿಗೆದಾರರು ಜಿಲ್ಲಾಧಿಕಾರಿಗಳೊಂದಿಗೆ ಸಮಾಲೋಚಿಸಿ ಅಂತಹ ಯಾವುದೇ ಮಾರ್ಗ ಯೋಜನೆಗಳನ್ನು ಅಂತಿಮಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಧಿಕೃತ ಮಾರ್ಗಗಳ ಅನುಪಸ್ಥಿತಿಯಲ್ಲಿ, ವಾಹನಗಳ ಟ್ರ್ಯಾಕಿಂಗ್, ಪ್ರಯಾಣದ ದೂರ ಮತ್ತು ಉಲ್ಲಂಘನೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಕಂಡುಹಿಡಿಯಲಾಗಲಿಲ್ಲ.

ಇದಲ್ಲದೆ, ಒಪ್ಪಂದದ ಷರತ್ತುಗಳ ಪ್ರಕಾರ ಗುತ್ತಿಗೆದಾರರು ಸರ್ಕಾರದ ಪಟ್ಟಿಯಲ್ಲಿ ಸೇರಿಸಿರುವ ಇಲಾಖೆಯಿಂದ ಅನುಮೋದಿತ ಪೂರೈಕೆದಾರರಿಂದ ₹15,000 ವೆಚ್ಚದ ತೂಕ ಸಂವೇದಕ ಆಧಾರಿತ ಅಂತರ್ಗತವಾದ ಬಾಹ್ಯಪ್ರಭಾವಗಳಿಂದ ಸಂರಕ್ಷಿತವಾದ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ (GPS) ಸಾಧನಗಳನ್ನು ತಮ್ಮ ಸ್ವಂತ ಮತ್ತು ಗುತ್ತಿಗೆಗೆ ಪಡೆದ ವಾಹನಗಳಲ್ಲಿ ಅಳವಡಿಸುವುದು ಅವಶ್ಯಕವಾಗಿದೆ.

ಪರೀಕ್ಷಾರ್ಥ–ತನಿಖೆ ನಡೆಸಿದ ಜಿಲ್ಲೆಗಳಲ್ಲಿ ಯಾವುದೇ ಸಾಗಣೆ ಗುತ್ತಿಗೆದಾರರು ಸಗಟು ಮತ್ತು ಚಿಲ್ಲರೆ ಸಾರಿಗೆ ವಾಹನಗಳಲ್ಲಿ GPS ಸಾಧನಗಳನ್ನು ಅಳವಡಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಧಿಕೃತ ವಾಹನಗಳಿಗೆ GPS ಟ್ರ್ಯಾಕಿಂಗ್ ಸಾಧನವನ್ನು ಅಳವಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಇಲಾಖೆಯು ವಿಫಲವಾಗಿತ್ತು. ತತ್ಪರಿಣಾಮವಾಗಿ ಆಹಾರಧಾನ್ಯ ರವಾನೆಗಳನ್ನು ನೈಜ ಸಮಯದ ಆಧಾರದ ಮೇಲೆ ಪತ್ತೆಹಚ್ಚಲು/ಟ್ರ್ಯಾಕ್ ಮಾಡಲು ಸಾಧ್ಯವಾಗಲಿಲ್ಲ.

GPS ತಂತ್ರಾಂಶ, ಮಾರ್ಗ ನಕ್ಷೆಗಳು, ಡ್ಯಾಶ್‌ಬೋರ್ಡ್‌ಗಳು ಮತ್ತು ಎಚ್ಚರಿಕೆಗಳು, ಬಿಲ್ಲಿಂಗ್ ಮತ್ತು ಪಾವತಿ ಮಾಡ್ಯೂಲ್‌ನ ಅನುಷ್ಠಾನಕ್ಕಾಗಿ ಇಲಾಖೆಯು RFP ಯನ್ನು ಪ್ರಕಟಿಸಿದೆ ಎಂದು ಸರ್ಕಾರವು ತಿಳಿಸಿತು (ಏಪ್ರಿಲ್ 2023).

**ದೃಷ್ಟಾಂತ**: ಬೆಂಗಳೂರಿನ WSD ಬೊಮ್ಮನಹಳ್ಳಿ ಗೋದಾಮಿಗೆ ಸಾರ್ವಜನಿಕ ವಿತರಣೆಗಾಗಿ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಭಾರತ ಆಹಾರ ನಿಗಮದ ಗೋದಾಮಿನಿಂದ 264 ಕ್ವಿಂಟಾಲ್ ಅಕ್ಕಿಯನ್ನು ಸಾಗಿಸುತ್ತಿದ್ದ ಟ್ರಕ್‌ಅನ್ನು ರವಾನೆದಾರರು ಅನಧಿಕೃತವಾಗಿ ಮಂಡ್ಯದ ಕಾಳಸಂತೆಗೆ ಮಾರ್ಗಪಲ್ಲಟ ಮಾಡಿದ್ದರು (ಸೆಪ್ಟೆಂಬರ್ 2021) ಎಂಬುದನ್ನು ಇಲಾಖಾ ದಾಖಲೆಗಳಿಂದ (ಪೊಲೀಸರ ಪ್ರಥಮ ಮಾಹಿತಿ ವರದಿ) ಲೆಕ್ಕಪರಿಶೋಧನೆಯು ಗಮನಿಸಿತು. ಒಪ್ಪಂದದ ಬಾಧ್ಯತೆಗಳ ಅಡಿಯಲ್ಲಿ ಅಗತ್ಯವಿರುವಂತೆ ಸಾಗಣೆದಾರರು ಟ್ರಕ್‌ನಲ್ಲಿ 'GPS' ಉಪಕರಣ' ಅಳವಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವಿನ ಇಲಾಖೆಯ ವಿಫಲತೆಯು ನೈಜ ಸಮಯದ ಆಧಾರದ ಮೇಲೆ ಸಾಗಣೆಯನ್ನು ಟ್ರ್ಯಾಕಿಂಗ್ ಮಾಡದಿರುವುದರಲ್ಲಿ ಪರಿಣಮಿಸಿತು.

ಪ್ರತಿ ರವಾನೆಯ ಜಾಡು ಪತ್ತೆ ಮಾಡುವಲ್ಲಿ ಇಲಾಖೆಯ ಅಸಮರ್ಥತೆ ಹಾಗೂ ಗುತ್ತಿಗೆದಾರರು ಅಧಿಕೃತ/ ಅನುಮೋದಿತ ಕಾರ್ಯಾಚರಣೆಯ ಮಾರ್ಗಗಳನ್ನು ಅನುಸರಣೆ ಮಾಡದಿರುವುದು ಆಹಾರ ಧಾನ್ಯಗಳನ್ನು ಕಾಳಸಂತೆಗೆ ಮಾರ್ಗಪಲ್ಲಟ ಮಾಡುವ ಅಪಾಯದಿಂದ ಕೂಡಿತ್ತು.

***ಶಿಫಾರಸು** -1: ಸಾಗಣೆದಾರರ ಮೇಲಿನ ಒಪ್ಪಂದದ ಬಾಧ್ಯತೆಗಳನ್ನು ಜಿಲ್ಲಾ ಅಧಿಕಾರಿಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಿರುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಉಲ್ಲಂಘನೆ/ಮಾರ್ಗಪಲ್ಲಟಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಸಾಗಣೆದಾರರು ಅಧಿಕೃತ ವಾಹನಗಳನ್ನು ಬಳಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಪ್ರಯಾಣಿಕ ವಾಹನಗಳ ಮೇಲೆ ಮಾಡಿದ ಸಾಗಣೆ ಹಕ್ಕೊತ್ತಾಯಗಳನ್ನು ತಿರಸ್ಕರಿಸಬೇಕು.*

## 2.3 ಅಸ್ತಿತ್ವದಲ್ಲಿರುವ ಸರಬರಾಜು ವ್ಯವಸ್ಥೆಯ ನಿರ್ವಹಣೆ

ದಕ್ಷ, ಪರಿಣಾಮಕಾರಿ ಮತ್ತು ಮಿತವ್ಯಯದ PDS ಸರಬರಾಜು ವ್ಯವಸ್ಥೆಯ ಫಲಾನುಭವಿಗಳಿಗೆ ಆಹಾರಧಾನ್ಯಗಳನ್ನು ಕನಿಷ್ಠ ವೆಚ್ಚದೊಂದಿಗೆ ಸಕಾಲಿಕವಾಗಿ ತಲುಪಿಸುತ್ತದೆ ಮತ್ತು ಪೂರೈಕೆ ಸರಪಳಿಯ ಉದ್ದಕ್ಕೂ ಆಹಾರ ಧಾನ್ಯಗಳ ಗುಣಮಟ್ಟವನ್ನು ಉಳಿಸಿಕೊಳ್ಳುತ್ತದೆ.

ಕರ್ನಾಟಕದಲ್ಲಿ PDS ಸರಬರಾಜು ವ್ಯವಸ್ಥೆಯ ಜಾಲವು 63 FCI ಗೋದಾಮುಗಳು, ಸಗಟು ನಾಮನಿರ್ದೇಶಿತರು (KFCSC, TAPCMS, RAPCMS ಇತ್ಯಾದಿ) ಕಾರ್ಯಾಚರಣೆಗೊಳಿಸುವ 302 WSD ಗಳು, ಸಾಗಣೆದಾರರ ತಂಡ, 1.53 ಕೋಟಿ ಪಡಿತರ ಚೀಟಿದಾರರ ಒಟ್ಟು 5.26 ಕೋಟಿ ಫಲಾನುಭವಿಗಳ ಅಗತ್ಯಗಳನ್ನು ಪೂರೈಸುವ 20,324 ನ್ಯಾಯಬೆಲೆ ಅಂಗಡಿಗಳು (ಮಾರ್ಚ್ 2022), ಇವುಗಳನ್ನು ಒಳಗೊಂಡಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯ ಹಂಚಿಕೆಯಡಿಯಲ್ಲಿ ರಾಜ್ಯವು FCI

ಗೋದಾಮುಗಳ ಮೂಲಕ 2.17 ಲಕ್ಷ ಮೆಟ್ರಿಕ್‌ಟನ್ ಆಹಾರಧಾನ್ಯಗಳನ್ನು ಪಡೆಯುತ್ತದೆ, ಇದನ್ನು ಸಗಟು ನಾಮನಿರ್ದೇಶಿತರು ಎತ್ತುತ್ತಾರೆ.

**ನಕ್ಷೆ–5**




**ಆಧಾರ: ಇಲಾಖೆಯು ಒದಗಿಸಿದ ಮಾಹಿತಿ.**

WSD ಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಸಾಗಣೆಯ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಕೆಳಗೆ ನಿರೂಪಿಸಲಾಗಿದೆ:

**ನಕ್ಷೆ–6**




ಆಧಾರ: ಲೆಕ್ಕಪರಿಶೋಧನೆಯು ತಯಾರಿಸಿದ ರೇಖಾಚಿತ್ರ

ಹತ್ತಿರದ WSD ಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಪೂರೈಕೆಯ ನಿರ್ದಿಷ್ಟ ನೀತಿಯ ಅನುಪಸ್ಥಿತಿಯಲ್ಲಿ, ರಾಜ್ಯವು WSD ಯಿಂದ ಅಧಿಕಾರವ್ಯಾಪ್ತಿಯ ತಾಲೂಕು ಗಡಿಯಲ್ಲಿರುವ ಆಯಾ ನ್ಯಾಯಬೆಲೆ ಅಂಗಡಿಗೆ ಆಹಾರ ಧಾನ್ಯಗಳನ್ನು ಪೂರೈಸುತ್ತದೆ. ಅನೇಕ ಸಂದರ್ಭಗಳಲ್ಲಿ, ನೆರೆಯ/ಪಕ್ಕದ ತಾಲೂಕಿನ WSD ಗೆ ಹತ್ತಿರವಾಗಿದ್ದರೂ ನ್ಯಾಯಬೆಲೆ ಅಂಗಡಿಯು ದೂರದ ಆಡಳಿತವ್ಯಾಪ್ತಿಯ WSD ಯಿಂದ ಸೇವೆಯನ್ನು ಪಡೆಯುತ್ತಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅದೇ ರೀತಿ, ನ್ಯಾಯಬೆಲೆ ಅಂಗಡಿಗಳು FCI ಗೋದಾಮುಗಳಿಗೆ ಹತ್ತಿರವಾಗಿದ್ದರೂ, FCI ನಿಂದ ನೇರ ಪೂರೈಕೆಯ ಬದಲಿಗೆ ಅಧಿಕಾರವ್ಯಾಪ್ತಿಯ WSD ಯ ಮೂಲಕ ಸೇವೆಯನ್ನು ನೀಡಲಾಗುತ್ತಿದೆ. ತತ್ಪರಿಣಾಮವಾಗಿ, ಸಾಗಣೆ/ ನಿರ್ವಹಣೆ ಮತ್ತು ಶೇಖರಣಾ ವೆಚ್ಚಗಳ ಕಡೆಗೆ ಹೆಚ್ಚುವರಿ ಸಾರಿಗೆ ವೆಚ್ಚಗಳನ್ನು ಭರಿಸಲಾಗುತ್ತಿತ್ತು.

ಲೆಕ್ಕಪರಿಶೋಧನೆಯು ಈ ಕೆಳಗಿನ ಕ್ರಮಗಳ ಮೂಲಕ ಸಾಗಣೆ ವೆಚ್ಚವನ್ನು ಕಡಿಮೆ ಮಾಡಬಹುದು ಎಂದು ಅಭಿಪ್ರಾಯಪಟ್ಟಿದೆ:

- ಹತ್ತಿರದ WSD / FCI ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯಗಳ ಪೂರೈಕೆ;
- ಮಾರ್ಗದ ಅತ್ಯುತ್ತಮ ಬಳಕೆ (ಪ್ರತಿ ನ್ಯಾಯಬೆಲೆ ಅಂಗಡಿಗೆ ಹೋಗಿ–ಬರುವ ಬದಲು ಒಂದೇ ಟ್ರಿಪ್‌ನಲ್ಲಿ ಅನೇಕ ನ್ಯಾಯಬೆಲೆ ಅಂಗಡಿಗಳಿಗೆ ಹೋಗುವ ಪ್ರಕ್ರಿಯೆ).

ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ (DPFD), ವಿಶ್ವ ಆಹಾರ ಕಾರ್ಯಕ್ರಮದ ಸಮನ್ವಯದೊಂದಿಗೆ ಮಾರ್ಗದ ಅತ್ಯುತ್ತಮ ಬಳಕೆ ಕಾರ್ಯಕ್ರಮವನ್ನು ಪ್ರಾರಂಭಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023). ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಮಾಹಿತಿಯನ್ನು ಸಲ್ಲಿಸಲು ಇಲಾಖೆಯು ಭಾರತ ಸರ್ಕಾರದ ತಂಡದೊಂದಿಗೆ ಸಮನ್ವಯ ಸಾಧಿಸುತ್ತಿದೆ ಎಂದೂ ಸಹ ತಿಳಿಸಲಾಯಿತು.

***ಶಿಫಾರಸು–2: ರಾಜ್ಯ ಸರ್ಕಾರವು ಅಧಿಕಾರವ್ಯಾಪ್ತಿಯ ತಾಲ್ಲೂಕು ಗಡಿಯ ಬದಲಿಗೆ ಹತ್ತಿರದ WSD ಯಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳನ್ನು ಪೂರೈಸಲು ನಿರ್ದಿಷ್ಟ ಸೂಚನೆಯನ್ನು ನೀಡುವುದನ್ನು ಪರಿಗಣಿಸಬಹುದು.***

# ಅಧ್ಯಾಯ-III :
# ಸಗಟು ಮಳಿಗೆಗಳ ಕಾರ್ಯಾಚರಣೆ

## ಅಧ್ಯಾಯ–III : ಸಗಟು ಮಳಿಗೆಗಳ ಕಾರ್ಯಾಚರಣೆ

*WSD ಗಳು PDS ಕಾರ್ಯಾಚರಣೆಯಲ್ಲಿ ಪ್ರಮುಖ ಮೂಲಸೌಕರ್ಯ ಸೌಲಭ್ಯಗಳಾಗಿವೆ. WSD ಗಳಲ್ಲಿ ಅನುಸರಿಸುವ ಮೂಲಸೌಕರ್ಯಗಳ ಗುಣಮಟ್ಟ, ದಾಸ್ತಾನು ಮತ್ತು ನಿರ್ವಹಣೆ ಅಭ್ಯಾಸಗಳು ಫಲಾನುಭವಿಗಳಿಗೆ ವಿತರಿಸಲಾದ ಆಹಾರ ಧಾನ್ಯಗಳ ಗುಣಮಟ್ಟ ಮತ್ತು ಪ್ರಮಾಣವನ್ನು ನಿರ್ಧರಿಸುತ್ತವೆ.*

*WSD ಗಳಲ್ಲಿನ ದಾಸ್ತಾನು ಕಾರ್ಯಾಚರಣೆಗಳಿಗಾಗಿ ರಾಜ್ಯಕ್ಕೆ ಅನುಗುಣವಾಗುವಂತಹ ನಿರ್ದಿಷ್ಟ ಕಾರ್ಯಾಚರಣಾ ವಿಧಾನಗಳನ್ನು (SOP) ರಾಜ್ಯ ಸರ್ಕಾರವು ಸಿದ್ಧಪಡಿಸಿರಲಿಲ್ಲ/ಅಧಿಸೂಚಿಸಿರಲಿಲ್ಲ. WSD ಗಳಲ್ಲಿನ ಶೇಖರಣಾ ಸೌಲಭ್ಯಗಳನ್ನು ಸರಿಯಾಗಿ ಬಳಸದಿರುವುದು, ಕಳಪೆ ನಿರ್ವಹಣೆ ಮತ್ತು ಸಾಕಷ್ಟಿರದ ಸಿಬ್ಬಂದಿ ಕಾರಣದಿಂದಾಗಿ WSD ಗಳು ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರಧಾನ್ಯಗಳ ಅಸಮರ್ಪಕ ದಾಸ್ತಾನು ಸಂಗ್ರಹಣೆ ಮತ್ತು ನಿರ್ವಹಣಾ ನಷ್ಟದಲ್ಲಿ ಪರಿಣಮಿಸಿತು, ಇಲಾಖೆಯು ಈ ನಷ್ಟವನ್ನು ಲೆಕ್ಕದಲ್ಲಿ ಪರಿಗಣಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. WDRA ಸೂಚಿಸಿದಂತಹ ಸುರಕ್ಷಿತ ಆಹಾರ ಶೇಖರಣಾ ಅಭ್ಯಾಸಗಳನ್ನು WSD ಗಳು ಪಾಲಿಸುತ್ತಿರಲಿಲ್ಲ. WSD ಗಳ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಗಮನಿಸಿದಂತೆ, ವಶಪಡಿಸಿಕೊಂಡ ದಾಸ್ತಾನು ವಿತರಣೆಗೆ ಸೂಕ್ತ ಕ್ರಮ ಕೈಗೊಳ್ಳುವ ಬಗೆಗಿನ ಇಲಾಖೆಯ ವಿಫಲತೆಯು ಆಹಾರ ಧಾನ್ಯಗಳು ಕೊಳೆತು ಹೋದವು ಮತ್ತು ಮಾನವ ಬಳಕೆಗೆ ಅನುಪಯುಕ್ತವಾದವು.*

TPDS ಅನ್ನು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಜವಾಬ್ದಾರಿಯಡಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಇದಕ್ಕೆ ಭಾರತ ಆಹಾರ ನಿಗಮ (FCI) ಕೇಂದ್ರ ಸಂಸ್ಥೆಯಾಗಿದ್ದು, ಆಹಾರ ಧಾನ್ಯಗಳ ಸಂಗ್ರಹಣೆ (ಮಂಡಿಗಳು/ಖರೀದಿ ಕೇಂದ್ರಗಳಲ್ಲಿ ರೈತರು/ರಾಜ್ಯ ಸರ್ಕಾರಿ ಸಂಸ್ಥೆಗಳಿಂದ), ಸಾಗಣೆ, ಸಂಗ್ರಹಣೆ/ಹಂಚಿಕೆ ಮತ್ತು ಆಹಾರ ಧಾನ್ಯಗಳನ್ನು ಆಯಾ ಜಿಲ್ಲಾ FCI ಗೋದಾಮುಗಳಲ್ಲಿ ಲಭ್ಯವಾಗುವಂತೆ ಮಾಡುವುದನ್ನು ಒಳಗೊಂಡಿದೆ.

ರಾಜ್ಯದ ಕಾರ್ಯಾಚರಣೆಯ ಪಾತ್ರವು FCI ಆವರಣದಿಂದ ಆಹಾರ ಧಾನ್ಯಗಳನ್ನು ಎತ್ತುವುದು, WSD ಗಳಲ್ಲಿ ಸಂಗ್ರಹಿಸುವುದು, ಫಲಾನುಭವಿಗಳಿಗೆ ಅವರ ಅರ್ಹತೆಗೆ ಅನುಗುಣವಾಗಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುವುದು ಮತ್ತು ವಿತರಿಸುವುದು, ಇವುಗಳನ್ನು ಒಳಗೊಂಡಿತ್ತು. ಅರ್ಹ ಕುಟುಂಬಗಳನ್ನು ಗುರುತಿಸುವುದು, ಪಡಿತರ ಚೀಟಿಗಳನ್ನು ನೀಡುವುದು, ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ಧಾನ್ಯಗಳನ್ನು ವಿತರಿಸುವುದು, ಪರವಾನಗಿ ನೀಡುವುದು ಮತ್ತು ಮೇಲ್ವಿಚಾರಣೆ ಇಲಾಖೆಯ ಜವಾಬ್ದಾರಿಯಾಗಿತ್ತು.

### 3.1 ಸಗಟು ಮಳಿಗೆಗಳ ಕಾರ್ಯನಿರ್ವಹಣೆ

ನೇಮಿತ ಸಗಟು ಸಂಸ್ಥೆಗಳಾದ KFCSC, TAPCMS, RAPCMS ಗಳಿಂದ ನಡೆಸಲ್ಪಡುವ WSD ಗಳ ಕಾರ್ಯಾಚರಣೆಯು ಭಾರತ ಆಹಾರ ನಿಗಮದಿಂದ ಕೇಂದ್ರದ ನೀಡಿಕೆ ಬೆಲೆಯಲ್ಲಿ (CIP) ಆಹಾರ ಧಾನ್ಯಗಳ ಖರೀದಿ, ಅವುಗಳ ದಾಸ್ತಾನು ಮತ್ತು ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ಮಾಡುವುದು,

ಇವುಗಳನ್ನು ಒಳಗೊಂಡಿರುತ್ತದೆ. ರಾಜ್ಯದಲ್ಲಿ ಆಹಾರ ಧಾನ್ಯಗಳ ಪೂರೈಕೆ ಜಾಲವನ್ನು 302 WSD ಗಳು ನಿರ್ವಹಿಸುತ್ತವೆ. ನೇಮಿತ ಸಗಟು ಸಂಸ್ಥೆಗಳು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ CIP ಜೊತೆಗೆ, ದಾಸ್ತಾನು ಮತ್ತು ಆಡಳಿತಾತ್ಮಕ ವೆಚ್ಚದ ರೂಪದಲ್ಲಿ ಪ್ರತಿ ಕ್ವಿಂಟಲ್‌ಗೆ ₹35 ದಳ್ಳಾಳಿಯನ್ನು ಪಡೆಯುತ್ತವೆ.

WSD ಗಳಲ್ಲಿನ ಶೇಖರಣಾ ವಿಧಾನದ ಬಗ್ಗೆ ರಾಜ್ಯಕ್ಕೆ ಅನುಗುಣವಾಗುವಂತಹ ನಿರ್ದಿಷ್ಟ ಕಾರ್ಯಾಚರಣಾ ವಿಧಾನಗಳನ್ನು (SOP) ರಾಜ್ಯ ಸರ್ಕಾರವು ತಯಾರಿಸಿರಲಿಲ್ಲ/ಅಧಿಸೂಚಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದ್ದರಿಂದ, ಲೆಕ್ಕಪರಿಶೋಧನೆಯು WSD ಗಳ ಸಂಗ್ರಹಣೆ ಮತ್ತು ಇತರ ಅಭ್ಯಾಸಗಳನ್ನು ಮೌಲ್ಯಮಾಪನ ಮಾಡಲು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (FSSAI) ಗೋದಾಮು ಕೈಪಿಡಿಯಲ್ಲಿ ಸೂಚಿಸಲಾದ ಸಾಮಾನ್ಯ ಅಭ್ಯಾಸಗಳನ್ನು, FCI ನ ಆಹಾರ ಶೇಖರಣಾ ಕಾರ್ಯಾಚರಣೆ ನಿರ್ವಹಣಾ ಕೈಪಿಡಿ ಮತ್ತು ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಅಡಿಯಲ್ಲಿನ ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಕ ಪ್ರಾಧಿಕಾರದಿಂದ ನೀಡಲಾದ ಗೋದಾಮು ಕಾರ್ಯಾಚರಣೆ ಕೈಪಿಡಿ ಇವುಗಳನ್ನು ಅವಲಂಬಿಸಿತು.

WSD ಗಳ ನಿರ್ವಹಣೆಯಲ್ಲಿನ ಕೊರತೆಗಳನ್ನು ಕೆಳಗೆ ಚರ್ಚಿಸಲಾಗಿದೆ:

### *3.1.1 ಅಸಮರ್ಪಕ ಮತ್ತು ಅನಾರೋಗ್ಯಕರ WSD ಅಭ್ಯಾಸಗಳು*

ಆಹಾರ ಧಾನ್ಯಗಳ ಸರಿಯಾದ ಮತ್ತು ಸುರಕ್ಷಿತ ಶೇಖರಣೆಗಾಗಿ WSD ಗಳು ಮೂಲಸೌಕರ್ಯವನ್ನು ನೈರ್ಮಲ್ಯಯುತವಾಗಿ ನಿರ್ವಹಿಸುವ ಅಗತ್ಯವಿದೆ. ಪರೀಕ್ಷಾ–ತನಿಖೆ ನಡೆಸಲಾದ 18 WSD ಗಳಲ್ಲಿ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ (**ಅನುಬಂಧ–II**) ಗಮನಿಸಿದಂತಹ WSD ಗಳಿಗಾಗಿನ ಮಾರ್ಗಸೂಚಿಗಳನ್ನು ಅನುಸರಿಸದಿರುವ ಅಂಶಗಳನ್ನು **ಕೋಷ್ಟಕ–6** ರಲ್ಲಿ ನೀಡಲಾಗಿದೆ:

**ಕೋಷ್ಟಕ–6: WSD ಗಳು ಸುರಕ್ಷಿತ ಆಹಾರ ಶೇಖರಣಾ ಪದ್ಧತಿಗಳನ್ನು ಅನುಸರಿಸದಿರುವುದು**

| ಕ್ರಮ ಸಂಖ್ಯೆ | ಡಬ್ಲ್ಯುಡಿಆರ್‌ಎ/ಎಫ್‌ಎಸ್‌ಎಸ್‌ಎಐ ಪ್ರಕಾರ ಅನುಸರಣೆ ಮಾಡಬೇಕಿರುವ ಮಾನದಂಡಗಳು | ಅನುಸರಣೆ ಮಾಡದಿರುವ ಡಬ್ಲ್ಯುಎಸ್‌ಡಿಗಳ ಸಂಖ್ಯೆ |
|---|---|---|
| 1 | ಸ್ವಚ್ಛ ಆವರಣಗಳು (ಸೋರುವಿಕೆ, ಜೇಡರಬಲೆ, ಕೊಳಕು, ಧೂಳು ಮುಂತಾದವುಗಳಿಂದ ಮುಕ್ತ) | 8 |
| 2 | ಸುತ್ತಮುತ್ತಲಿನ ಕಸ, ತ್ಯಾಜ್ಯ, ಕಳೆ ಮತ್ತು ಹುಲ್ಲು ಇತ್ಯಾದಿಗಳಿಂದ ಮುಕ್ತ | 12 |
| 3 | ಪರಿಸರ ಮಾಲಿನ್ಯ ಮತ್ತು ಕೈಗಾರಿಕಾ ಚಟುವಟಿಕೆಗಳಿಂದ ದೂರವಿರುವ ಗೋದಾಮು | 1 |
| 4 | ತಪಶೀಲು ಪಟ್ಟಿಯನ್ನು ಎಫ್‌ಐಎಫ್‌ಒ ಮಾದರಿಯಲ್ಲಿ ನಿರ್ವಹಿಸಲಾಗಿದೆ | 5 |
| 5 | ಸಂಚಾರಕ್ಕೆ ಮತ್ತು ತಪಾಸಣೆಗೆ ಸೂಕ್ತವಾದ ಸ್ಥಳದೊಂದಿಗೆ ವಿನ್ಯಾಸ ಮಾಡಿರುವುದು | 7 |
| 6 | ರಾಶಿ ಹಾಕುವಿಕೆಯನ್ನು ಸೂಕ್ತವಾಗಿ ಯೋಜಿಸಲಾಗಿದೆ ಮತ್ತು ಅನುಸರಿಸಲಾಗಿದೆ | 12 |
| 7 | ಸೂಕ್ತವಾದ ವಿವರಗಳೊಂದಿಗೆ ಸ್ಟ್ಯಾಕ್ ಕಾರ್ಡ್‌ಗಳೂ (ಸ್ವೀಕೃತಿಗಳು/ಸಂಚಿಕೆಗಳು/ಗ್ರೇಡ್/ಫ್ಯೂಮಿಗೇಶನ್ ವಿವರಗಳು ಇತ್ಯಾದಿ | 16 |
| 8 | ಆಹಾರಧಾನ್ಯಗಳನ್ನು ಗೋಡೆಗಳಿಂದ ಜಾಗ ಬಿಟ್ಟು ಸಂಗ್ರಹಿಸಲಾಗಿದೆ | 4 |
| 9 | ಡಬ್ಲ್ಯುಎಸ್‌ಡಿಯ ಮುಂಭಾಗದಲ್ಲಿರುವ ಪ್ರದರ್ಶನಾ ಫಲಕದಲ್ಲಿ ದಾಸ್ತಾನಿನ ವಿವರಗಳನ್ನು ಇಂದೀಕರಿಸಲಾಗಿದೆ | 13 |
| 10 | ಪರೀಕ್ಷಾ–ತನಿಖೆಗಾಗಿ ಆಹಾರಧಾನ್ಯಗಳು ಲಭ್ಯವಿದೆ | 15 |
| 11 | ಹತ್ತಿರದ ಅಗ್ನಿಶಾಮಕ ಕೇಂದ್ರದ ಟೆಲಿಫೋನ್ ಸಂಖ್ಯೆಯನ್ನು ಪ್ರದರ್ಶಿಸಲಾಗಿದೆ | 18 |
| 12 | ಕೀಟ ನಿಯಂತ್ರಣಕ್ಕಾಗಿ ಸಮಯೋಚಿತ ರೋಗನಿರೋಧಕ ಮತ್ತು ಗುಣಪಡಿಸುವ ಪ್ರಕ್ರಿಯೆಗಳು | 16 |
| 13 | ನಿಯತಕಾಲಿಕವಾಗಿ ಸ್ವಚ್ಛಗೊಳಿಸಲು ಮತ್ತು ಗುಡಿಸಲು ಸೌಲಭ್ಯ | 14 |

ಆಧಾರ: ಜಂಟಿ ಭೌತಿಕ ಪರಿಶೀಲನೆ

WSD ಗಳ ಕಳಪೆ ನಿರ್ವಹಣೆಯು ಆಹಾರ ಧಾನ್ಯಗಳ ಮಾಲಿನ್ಯತೆ ಮತ್ತು ಹುಳ ಹಿಡಿಯುವ ಅಪಾಯವನ್ನು ಹೆಚ್ಚಿಸಿತ್ತು ಅದರಿಂದಾಗಿ ಆಹಾರ ಧಾನ್ಯದ ನಷ್ಟದಲ್ಲಿ ಮತ್ತು ಗುಣಮಟ್ಟ ಕುಸಿತಕ್ಕೆ ಕಾರಣವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಪ್ರದರ್ಶಿಕೆ–2**). ಆಹಾರ ಧಾನ್ಯದ ನಿರ್ವಹಣಾ ನಷ್ಟ ಮತ್ತು ಹಾಳಾಗುವಿಕೆಗೆ ಯಾವುದೇ ನಿಬಂಧನೆಯನ್ನು ಮಾಡಲಾಗಿಲ್ಲ ಎಂದು ಇಲಾಖೆ ತಿಳಿಸಿತು. ಆಹಾರ ಧಾನ್ಯದ ನಷ್ಟ ಮತ್ತು ಹಾಳಾಗುವಿಕೆ ನಿರ್ವಹಣೆಗೆ ಸೂಕ್ತ ಮಾನದಂಡಗಳ ಅನುಪಸ್ಥಿತಿಯಲ್ಲಿ ಆ ಕಾರಣಗಳಿಂದಾದ ನಷ್ಟವನ್ನು ಪ್ರಮಾಣೀಕರಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

**ಪ್ರದರ್ಶಿಕೆ–2: WSD ಗಳ ಅಸಮರ್ಪಕ ನಿರ್ವಹಣೆ**




*ರಾಯಚೂರಿನ KFCSC ಯಲ್ಲಿ ಬೀದಿ ಹಂದಿಗಳು (ಮುಖ್ಯ WSD)*




*KFCSC, ಮಂಡ್ಯದಲ್ಲಿ ಕೀಟಗಳಿಂದ ಸೋಂಕಿತ ಅಕ್ಕಿ ಚೀಲಗಳು*

ಗುಣಮಟ್ಟ ಮತ್ತು ಉತ್ತಮ ಗೋದಾಮು ಪದ್ಧತಿಗಳ ಆಧಾರದ ಮೇಲೆ ಸಗಟು ಡಿಪೋಗಳ ಸುಧಾರಣೆಗೆ ಪ್ರಸ್ತಾವನೆಗಳನ್ನು ಸಲ್ಲಿಸಲು KFCSC ನಿರ್ದೇಶಿಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಏಪ್ರಿಲ್ 2023).

### *3.1.2 ಮೂಲಸೌಕರ್ಯ ಮತ್ತು ಭದ್ರತಾ ಸೌಲಭ್ಯಗಳ ಕೊರತೆ*

ದಾಸ್ತಾನಿನ ಸಮಯದಲ್ಲಿ ಆಹಾರ ಧಾನ್ಯಗಳ ಗುಣಮಟ್ಟ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳಲು ಸರಿಯಾದ ಗಾಳಿ, ತಾಪಮಾನ ನಿಯಂತ್ರಣ ಮತ್ತು ಕೀಟ ನಿಯಂತ್ರಣ ಸೌಲಭ್ಯಗಳಂತಹ ಆಹಾರ ಧಾನ್ಯಗಳ ಸರಿಯಾದ ಶೇಖರಣೆಯನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಮೂಲಸೌಕರ್ಯ ಅಗತ್ಯವಾಗಿದೆ. ಕಣ್ಗಾವಲು ಕ್ಯಾಮೆರಾಗಳು, ಅಗ್ನಿಶಾಮಕ ವ್ಯವಸ್ಥೆಗಳು, ಸುರಕ್ಷಿತ ಪ್ರವೇಶ ಮತ್ತು ನಿರ್ಗಮನ ದ್ವಾರಗಳಂತಹ ಸೂಕ್ತ ಭದ್ರತಾ ಕ್ರಮಗಳು ಆಹಾರ ಧಾನ್ಯಗಳ ಸುರಕ್ಷಿತ ಸಂಗ್ರಹಣೆಗೆ ಸಹಾಯ ಮಾಡುತ್ತದೆ.

ಪರೀಕ್ಷಾರ್ಥ–ತನಿಖೆ ನಡೆಸಲಾದ 18 ಘಟಕಗಳಲ್ಲಿ, WDRA/FSSAI ಮಾನದಂಡಗಳಲ್ಲಿ ಸೂಚಿಸಲಾದ ಉತ್ತಮ ಅಭ್ಯಾಸಗಳು/ಮಾನದಂಡಗಳನ್ನು ಈ ಕೆಳಗಿನ WSD ಗಳು ಅನುಸರಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

### ಕೋಷ್ಟಕ–7: WDRA/FSSAI ಮಾನದಂಡಗಳನ್ನು ಅನುಸರಿಸದ WSD ಗಳ ಸಂಖ್ಯೆ

| ಕ್ರಮ ಸಂಖ್ಯೆ | ಡಬ್ಲ್ಯುಡಿಆರ್‌ಎ/ಎಫ್‌ಎಸ್‌ಎಸ್‌ಎಐ ಪ್ರಕಾರ ಅನುಸರಣೆ ಮಾಡಬೇಕಿರುವ ಮಾನದಂಡಗಳು | ಅನುಸರಣೆ ಮಾಡದಿರುವ ಡಬ್ಲ್ಯುಎಸ್‌ಡಿಗಳ ಸಂಖ್ಯೆ |
|---|---|---|
| 1 | ಸಾಕಷ್ಟು ನೈಸರ್ಗಿಕ ಅಥವಾ ಕೃತಕ ಬೆಳಕಿನ ಲಭ್ಯತೆ | 15 |
| 2 | ಕಟ್ಟಡಗಳ ಸುತ್ತಲೂ ಕನಿಷ್ಠ 45 ಸೆಂ.ಮೀ.ಗಟ್ಟಿಯಾದ ನೆಲಗಟ್ಟು | 13 |
| 3 | ಹಲಗೆಗಳ/ಟಾರ್ಪಾಲಿನ್‌ಗಳ ಮೇಲೆ ಆಹಾರಧಾನ್ಯಗಳ ಸಂಗ್ರಹಣೆ | 6 |
| 4 | ಕಟ್ಟಡವು ದೃಢ ನಿರ್ಮಾಣದಿಂದ ಮಾಡಲ್ಪಟ್ಟಿದೆ ಮತ್ತು ಸೋರಿಕೆ, ಧೂಳು ಇತ್ಯಾದಿಗಳಿಂದ ಮುಕ್ತವಾಗಿದೆ | 8 |
| 5 | ಸಿಸಿಟಿವಿ ಲೈವ್ ಮಾನಿಟರಿಂಗ್ ಮತ್ತು ಮೇಲ್ವಿಚಾರಣೆಗಾಗಿ ಅವಕಾಶ | 18 |
| 6 | 24 ಘಂಟೆಗಳ ಭದ್ರತೆಗಾಗಿ ಅವಕಾಶ | 13 |
| 7 | ಗಡಿ ಗೋಡೆಗಳು/ಬೇಲಿಯಿಂದ ಚೆನ್ನಾಗಿ ಗೋದಾಮಿನ ರಕ್ಷಣೆ | 8 |
| 8 | ಗೋದಾಮಿನ ಒಳಗೆ ಬರುವ ಮತ್ತು ಹೊರಗೆ ಹೋಗುವ ಸರಕುಗಳಿಗೆ ಗೇಟ್‌ಪಾಸ್ ವ್ಯವಸ್ಥೆ | 17 |
| 9 | ಅಗ್ನಿಶಾಮಕ ವ್ಯವಸ್ಥೆಯನ್ನು ಒದಗಿಸಲಾಗಿದೆ | 18 |
| 10 | ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪ್ರದೇಶವು ಮಳೆ ಮುಕ್ತವಾಗಿರುವುದು | 16 |
| 11 | ಡಬ್ಲ್ಯುಎಸ್‌ಡಿಯಲ್ಲಿ ಸ್ವಂತ ವೈಬ್ರಿಡ್ಜ್‌ನ ಸೌಲಭ್ಯ | 16 |

**ಆಧಾರ: ಜಂಟಿ ಭೌತಿಕ ಪರಿಶೀಲನೆ**

### ಪ್ರದರ್ಶಿಕೆ–3: WSD ಗಳು ಮತ್ತು PDS ಕಾರ್ಯಾಚರಣೆಗಳ ಕಳಪೆ ನಿರ್ವಹಣೆ




*KFCSC ಹನುಮಂತನಗರ, ಬೆಂಗಳೂರು ದಕ್ಷಿಣ IRA ದಲ್ಲಿ ಬಾಗಿಲುಗಳಿಲ್ಲದ ವೆಂಟಿಲೇಟರ್‌ಗಳು*




*ಗದಗದ KFCSC ಲಕ್ಷ್ಮೇಶ್ವರದಲ್ಲಿರುವ WSD ಆವರಣದಲ್ಲಿ ಶಾಲೆ ಕಾರ್ಯನಿರ್ವಹಿಸುತ್ತಿದೆ.*

ಪರೀಕ್ಷಾರ್ಥ–ತನಿಖೆ ನಡೆಸಿದ 18 WSD ಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಿದಂತೆ ತಗ್ಗು ಪ್ರದೇಶದ WSD ಗಳು, ಕಸ ಎಸಿಯುವಿಕೆ, ಇಲಿಗಳು ಮುತ್ತಿಕೊಳ್ಳುವಿಕೆ, ಕಲ್ನಾರಿನ ಮೇಲ್ಛಾವಣಿ, ನೆಲದ ಮೇಲೆ ಆಹಾರ ಧಾನ್ಯಗಳ ಸಂಗ್ರಹಣೆ ಮುಂತಾದ ಮೂಲಸೌಕರ್ಯದಲ್ಲಿನ ವಿವಿಧ ಲೋಪಗಳು ಮತ್ತು ಕಳಪೆ ಗೋದಾಮಿನ ಅಭ್ಯಾಸಗಳು, ಆಹಾರ ಧಾನ್ಯದ ಗುಣಮಟ್ಟ ಕ್ಷೀಣಿಸಲು ಕಾರಣವಾಯಿತು (**ಅನುಬಂಧ–III**).

WSD ಗಳಲ್ಲಿ (ನವೆಂಬರ್ 2022) ಕಣ್ಗಾವಲು ಕ್ಯಾಮೆರಾಗಳನ್ನು ಅಳವಡಿಸುವ ಪ್ರಸ್ತಾವನೆಯನ್ನು ಹಣಕಾಸು ಇಲಾಖೆ ಅನುಮೋದಿಸಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಏಪ್ರಿಲ್ 2023).

ಅನುಮೋದನೆಯ ಆಧಾರದ ಮೇಲೆ ಟೆಂಡರ್ ಅನ್ನು ಪ್ರಕಟಿಸಲು ಅಗತ್ಯ ಅನುಮೋದನೆಗಾಗಿ ಅಂದಾಜು ವೆಚ್ಚ ಮತ್ತು ತಾಂತ್ರಿಕ ವಿವರಣೆಯನ್ನು ಸಲ್ಲಿಸಲಾಗಿದೆ.

ಆದಾಗ್ಯೂ ಜಂಟಿ ಭೌತಿಕ ಪರೀಕ್ಷೆಗಳಿಂದ ಗಮನಿಸಿದಂತೆ WSD ಗಳು ಅನಾರೋಗ್ಯಕರ ಸ್ಥಿತಿಗಳಲ್ಲಿ ನಿರ್ವಹಿಸಲಾಗುತ್ತಿವೆ ಎಂಬ ವಾಸ್ತವಾಂಶವು ಉಳಿಯಿತು.

### *3.1.3 WSD ಗಳ ನಿರ್ವಹಣೆ – ಸಾಕಷ್ಟಿಲ್ಲದ ಮಾನವಶಕ್ತಿ*

302 WSD ಗಳಲ್ಲಿ, 211 WSD ಗಳನ್ನು, ಗೋದಾಮು ಮತ್ತು ಆಡಳಿತ ಸಿಬ್ಬಂದಿಗಳ ಗಮನಾರ್ಹ ಕೊರತೆ ಹೊಂದಿರುವ KFCSC ಯು ನಿರ್ವಹಿಸುತ್ತಿದೆ. ಎಲ್ಲಾ ಪ್ರವರ್ಗಗಳ 1,494 ಮಂಜೂರಾದ ಹುದ್ದೆಗಳಿಗೆ ಪ್ರತಿಯಾಗಿ ಕಾರ್ಯ ನಿರ್ವಹಿಸುತ್ತಿರುವವ ಹುದ್ದೆಗಳು 387 ಮಾತ್ರವಾಗಿತ್ತು. ಡಿಸೆಂಬರ್ 2022ರ ಅಂತ್ಯದಲ್ಲಿದ್ದಂತೆ ರಾಜ್ಯದ WSD ಗಳಲ್ಲಿನ ಮಾನವಶಕ್ತಿಯನ್ನು ಕೆಳಗಿನ **ಕೋಷ್ಟಕ–8** ರಲ್ಲಿ ನೀಡಲಾಗಿದೆ:

**ಕೋಷ್ಟಕ–8: WSD ಗಳಲ್ಲಿ ಮಾನವಶಕ್ತಿಯ ಕೊರತೆಯನ್ನು ತೋರಿಸುವ ತಖ್ತೆ**

| ಪದನಾಮ | ಮಂಜೂರಾದ ಸಾಮರ್ಥ್ಯ | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ ಹುದ್ದೆಗಳು | ಖಾಲಿ ಹುದ್ದೆಗಳ ಶೇಕಡಾವಾರು |
|---|---|---|---|---|
| ಜಿಲ್ಲಾ ನಿರ್ವಾಹಕರು | 31 | 13 | 18 | 58 |
| ಸಹಾಯಕ ನಿರ್ವಾಹಕರು | 33 | 17 | 16 | 48 |
| ಕಛೇರಿ ನಿರ್ವಾಹಕರು | 102 | 34 | 68 | 67 |
| ಕಚೇರಿ ನಿರ್ವಾಹಕರು (A/C) | 35 | 16 | 19 | 54 |
| ವರಿಷ್ಠ ಸ್ಟೆನೋಗ್ರಾಫರ್ | 4 | 0 | 4 | 100 |
| ಶೀಘ್ರಲಿಪಿಕಾರರು | 4 | 0 | 4 | 100 |
| ಗುಣಮಟ್ಟ ನಿರೀಕ್ಷಕರು | 30 | 6 | 24 | 80 |
| ವರಿಷ್ಠ ಸಹಾಯಕರು | 172 | 92 | 80 | 47 |
| ವರಿಷ್ಠ ಸಹಾಯಕರು (A/C) | 35 | 2 | 33 | 94 |
| ಕಿರಿಯ ಸಹಾಯಕ/ ಗುಮಾಸ್ತ ಮತ್ತು ಬೆರಳಚ್ಚುಗಾರರು /ತಾಂತ್ರಿಕ ನಿರ್ವಾಹಕರು | 605 | 132 | 473 | 78 |
| ಹಿರಿಯ ಚಾಲಕರು | 12 | 9 | 3 | 25 |
| ಚಾಲಕರು | 43 | 7 | 36 | 84 |
| ಅಟೆಂಡರ್ | 21 | 18 | 3 | 14 |
| 4ನೇ ದರ್ಜೆ | 366 | 41 | 325 | 89 |
| ಯಂತ್ರ ನಿರ್ವಾಹಕರು | 1 | 0 | 1 | 100 |
| **ಒಟ್ಟು** | **1,494** | **387** | **1,107** | **74** |

ಮೂಲ: KFCSC ಒದಗಿಸಿದ ಮಾಹಿತಿ

ಸಿಬ್ಬಂದಿಗಳಲ್ಲಿ ಶೇಕಡಾ 74ರಷ್ಟು ತೀವ್ರ ಕೊರತೆಯಿರುವುದನ್ನು ಮೇಲಿನ ಕೋಷ್ಟಕದಿಂದ ಗಮನಿಸಬಹುದು. ಪರೀಕ್ಷಾರ್ಥ–ತನಿಖೆ ನಡೆಸಿದ 8 ಜಿಲ್ಲೆಗಳಲ್ಲಿನ 7 ಜಿಲ್ಲೆಗಳಲ್ಲಿ, 19 ಗೋದಾಮು ನಿರ್ವಾಹಕರು 40 ಗೋದಾಮುಗಳನ್ನು (**ಅನುಬಂಧ–IV**) ನಿರ್ವಹಿಸುತ್ತಿದ್ದರು, ಅಂದರೆ ಪ್ರತಿಯೊಬ್ಬರೂ ಎರಡಕ್ಕಿಂತ ಹೆಚ್ಚು ಗೋದಾಮುಗಳನ್ನು ನಿರ್ವಹಿಸುತ್ತಿದ್ದರು ಮತ್ತು ಅದು WSD ಕಾರ್ಯಾಚರಣೆಗಳಿಗೆ ಅಡ್ಡಿಯಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

KFCSC ಯಲ್ಲಿ ಖಾಲಿ ಇರುವ 386 ಹುದ್ದೆಗಳನ್ನು ಅಧಿಸೂಚಿಸಿ ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಕೋರಲಾಗಿದೆ (ಜನವರಿ 2023) ಎಂದು ರಾಜ್ಯ ಸರ್ಕಾರ ತಿಳಿಸಿತು (ಏಪ್ರಿಲ್ 2023).

### *3.1.4 ವಶಪಡಿಸಿಕೊಂಡ ದಾಸ್ತಾನನ್ನು ವಿಲೇವಾರಿ ಮಾಡದಿರುವುದು*

ಅಗತ್ಯ ವಸ್ತುಗಳ ಕಾಯಿದೆ, 1955 (EC ಕಾಯಿದೆ) ಸೆಕ್ಷನ್ 6(2)ರ ಪ್ರಕಾರ, ದಾಸ್ತಾನು ವಶಪಡಿಸಿಕೊಂಡ ವರದಿಯನ್ನು ಸ್ವೀಕರಿಸಿದ ನಂತರ ಅದನ್ನು ನಿಯಂತ್ರಿತ ಬೆಲೆಗೆ ಮಾರಾಟ ಮಾಡಲು ಅಥವಾ ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲು ಜಿಲ್ಲಾಧಿಕಾರಿಗಳು ಆದೇಶಿಸುತ್ತಾರೆ. ಆಹಾರ ಧಾನ್ಯಗಳ ವಿಷಯದಲ್ಲಿ ಜಿಲ್ಲಾಧಿಕಾರಿಗಳು, ಅದರ ಸಮಾನ ವಿತರಣೆ ಮತ್ತು ನ್ಯಾಯಬೆಲೆ ಅಂಗಡಿಯಲ್ಲಿ ಲಭ್ಯತೆಗಾಗಿ, ನ್ಯಾಯಬೆಲೆ ಅಂಗಡಿಯ ಮೂಲಕ ಮಾರಾಟ ಮಾಡಲು ಆದೇಶಿಸುತ್ತಾರೆ. ಇದಲ್ಲದೆ, FSSAI ಮಾರ್ಗಸೂಚಿಗಳು ಹಾನಿಗೊಳಗಾದ ಸರಕುಗಳನ್ನು, ಗೋದಾಮಿನಲ್ಲಿ ಮಾಲಿನ್ಯ ಅಥವಾ ಸೋಂಕು ಹರಡುವುದನ್ನು ತಪ್ಪಿಸಲು ಇತರ ಉತ್ಪನ್ನಗಳೊಂದಿಗೆ ಬೆರೆಸದೆ ಗೊತ್ತುಪಡಿಸಿದ ಪ್ರದೇಶದಲ್ಲಿ ಶೇಖರಿಸಿಡಬೇಕು ಎಂದು ಸೂಚಿಸುತ್ತವೆ. ಹಿಂಪಡೆದ, ಹಾನಿಗೊಳಗಾದ ಅಥವಾ ಮರುಸಂಸ್ಕರಣೆಗಾಗಿ ಪ್ರತ್ಯೇಕಿಸಲಾದ ಸರಕುಗಳನ್ನು ಮಾಲಿನ್ಯದಿಂದ ತಪ್ಪಿಸಲು ಗುಣಮಟ್ಟದ ಇತರ ಉತ್ಪನ್ನಗಳಿಂದ ಭೌತಿಕವಾಗಿ ಪ್ರತ್ಯೇಕಿಸಬೇಕು.

ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ, ಕೆಳಗೆ ವಿವರಿಸಿದಂತೆ, ಏಳು WSD ಗಳಲ್ಲಿ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡು ಕೆಳಗಿನ ಪರಿಮಾಣದ ಆಹಾರ ಧಾನ್ಯಗಳನ್ನು ವಿಲೇವಾರಿ ಮಾಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ–9: ಪರೀಕ್ಷಾ ತನಿಖೆ ನಡೆಸಿದ WSD ಗಳಲ್ಲಿ ವಶಪಡಿಸಿಕೊಂಡ ಆಹಾರ ಧಾನ್ಯಗಳ ವಿವರ**

| ಕ್ರಮ ಸಂಖ್ಯೆ | ಜಿಲ್ಲೆ | WSD | ವಶಪಡಿಸಿಕೊಂಡ ದಿನ | ಲೆಕ್ಕಪರಿಶೋಧನೆಯ ಭೇಟಿ ದಿನಾಂಕ | ಆಹಾರ ಧಾನ್ಯಗಳ ವಿಲೇವಾರಿಯಲ್ಲಿ ವಿಳಂಬ (ತಿಂಗಳಲ್ಲಿ) | ಸರಕು (ಕ್ವಿಂಟಾಲ್‌ಗಳಲ್ಲಿ) |
|---|---|---|---|---|---|---|
| 1 | ಗದಗ | KFCSC ಲಕ್ಷ್ಮೇಶ್ವರ | 24.10.2022 | 08/12/2022 | 01 | ಅಕ್ಕಿ (10.95) |
| 2 | ಮಂಡ್ಯ | KFCSC (ನ) ಮಂಡ್ಯ | 20.01.2022 | 08/12/2022 | 10 | ಅಕ್ಕಿ (117.12) |
| | | TAPCMS ಮಳವಳ್ಳಿ | 08.11.2019 ರಿಂದ 11.07.2022 | 14/10/2022 | 13<br>03 | ಅಕ್ಕಿ (113.16) |
| 3 | ರಾಯಚೂರು | KFCSC ರಾಯಚೂರು | ದಾಖಲೆಯಿಲ್ಲ | 19/12/2022 | – | ಅಕ್ಕಿ (61.83), ಗೋದಿ (69.7) |
| | | KFCSC | 31.10.2005 (ಅಕ್ಕಿ ಮತ್ತು ಗೋದಿ) ಮತ್ತು 03.02.2021 (ಬೇಳೆ) | 21/12/2022 | 205<br>22 | ಅಕ್ಕಿ (49), ಬೇಳೆ (184), ಗೋದಿ (11) |
| 4 | ವಿಜಯಪುರ | KFCSC ಇಂಡಿ 1 | 29.06.2022 ಮತ್ತು 16.07.2022 | 1/12/2022 | 05<br>04 | ಅಕ್ಕಿ (81.6) |
| 5 | ಕೊಡಗು | APCMS ವಿರಾಜಪೇಟೆ | FIST ನಲ್ಲಿ ದಾಖಲಿಸಲಾಗಿಲ್ಲ | 21/01/2023 | – | ಅಕ್ಕಿ (30 ಚೀಲಗಳು[7]= 15) |

ಆಕರ: ಇಲಾಖೆ ಒದಗಿಸಿದ ಮಾಹಿತಿ

[7] ದಾಸ್ತಾನನ್ನು FIST ಮಾಡ್ಯೂಲ್ ಅಡಿಯಲ್ಲಿ ಲೆಕ್ಕ ಹಾಕಿಲ್ಲ (ಜಂಟಿ ಭೌತಿಕ ಪರಿಶೀಲನೆಯ ಪ್ರಕಾರ ಚೀಲದ ಲೆಕ್ಕ).

**ದೃಷ್ಟಾಂತ:** KFCSC ಮಾನ್ವಿಯ WSD ಯಲ್ಲಿ ವಶಪಡಿಸಿಕೊಂಡ (ಸೆಪ್ಟೆಂಬರ್ 2020) ತೊಗರಿಬೇಳೆಯನ್ನು (184 ಕ್ವಿಂಟಾಲ್) ವಿತರಿಸಿರಲಿಲ್ಲ ಮತ್ತು ಡಿಸೆಂಬರ್ 2022ರವರೆಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಮಾನವ ಬಳಕೆಗೆ ಅನರ್ಹವಾಗಿತ್ತು. ಈ ದಾಸ್ತಾನಿನ ನಷ್ಟವು ₹11.04 ಲಕ್ಷಗಳಷ್ಟಿತ್ತು.

**ಪ್ರದರ್ಶಿಕೆ–4 : ವಶಪಡಿಸಿಕೊಂಡ ದಾಸ್ತಾನನ್ನು ಇತರೆ ದಾಸ್ತಾನಿನೊಂದಿಗೆ ಸೇರಿಸಿರುವುದು**




ವಶಪಡಿಸಿಕೊಂಡ ಅಕ್ಕಿ ದಾಸ್ತಾನು ಬಳಕೆಗೆ ಯೋಗ್ಯವಾಗದಂತಾಯಿತು – KFCSC ಮಂಡ್ಯ




ವಶಪಡಿಸಿಕೊಂಡ ತೊಗರಿಬೇಳೆ ಹಾಳಾಗಿರುವುದು KFCSC – ಮಾನ್ವಿ, ರಾಯಚೂರು

ರಾಜ್ಯಾದ್ಯಂತ ವಶಪಡಿಸಿಕೊಂಡ ದಾಸ್ತಾನು ವರದಿಯ (FIST ಪೋರ್ಟಲ್) ಪ್ರಕಾರ (ಜನವರಿ 2023 ರವರೆಗೆ), ಒಟ್ಟು ₹.10.58 ಕೋಟಿ[8] ಮೌಲ್ಯದ 35,628.24 ಕ್ವಿಂಟಲ್ ವಿವಿಧ ಆಹಾರ ಧಾನ್ಯಗಳನ್ನು (ಅಕ್ಕಿ: 32,586.55, ಗೋಧಿ: 812.17, ಜೋಳ: 54.46, ರಾಗಿ: 1,973.16 ಮತ್ತು ತೊಗರಿಬೇಳೆ: 201.90) ವಿಲೇವಾರಿ ಮಾಡದೆ ಆಯಾ ಡಬ್ಲ್ಯುಎಸ್‌ಡಿಗಳಲ್ಲಿ ಉಳಿಸಿಕೊಳ್ಳಲಾಗಿತ್ತು.

ವಶಪಡಿಸಿಕೊಂಡ ದಾಸ್ತಾನನ್ನು ನಿಯಂತ್ರಿತ ಬೆಲೆಯಲ್ಲಿ ಅಥವಾ EC ಕಾಯಿದೆಯ ಪ್ರಕಾರ ಸಾರ್ವಜನಿಕ ಹರಾಜಿನಲ್ಲಿ ವಿಲೇವಾರಿ ಮಾಡುವ ಜಿಲ್ಲಾಧಿಕಾರಿಗಳ ಕ್ರಮವು ಸಂಬಂಧಿತ WSD ಗಳ ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ವಶಪಡಿಸಿಕೊಂಡ ದಾಸ್ತಾನು ಒಂದರಿಂದ 204 ತಿಂಗಳವರೆಗೆ ವಿಲೇವಾರಿಯಾಗದೆ ಉಳಿದಿದ್ದರಿಂದ EC ಕಾಯಿದೆಯ ನಿಬಂಧನೆಗಳನ್ನು ಜಾರಿಗೊಳಿಸಲು ಇಲಾಖೆ ವಿಫಲವಾಗಿತ್ತು. ತತ್ಪರಿಣಾಮವಾಗಿ ಅಂತಹ ಆಹಾರ ಧಾನ್ಯಗಳನ್ನು ಫಲಾನುಭವಿಗಳ ಅಗತ್ಯತೆಗೆ ಪೂರೈಸದೇ ಹಾಳಾಗಲು ಬಿಟ್ಟಂತಾಯಿತು.

WSD ಗಳಲ್ಲಿ ಸಂಗ್ರಹಿಸಲಾದ ವಿಲೇವಾರಿ ಮಾಡದ ವಶಪಡಿಸಿಕೊಂಡ ದಾಸ್ತಾನನ್ನು ಜಿಲ್ಲಾ ಅಧಿಕಾರಿಗಳ ಸಮನ್ವಯದಲ್ಲಿ KFCSC ಯಿಂದ ವಿಲೇವಾರಿ ಮಾಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

### *3.1.5 WSD ಗಳಲ್ಲಿ ಅಕ್ರಮ ಸರಕುಪತ್ರ ಲೆಕ್ಕಪತ್ರ ನಿರ್ವಹಣೆ*

ಹಂಚಿಕೆ ಆದೇಶದ ಪ್ರಕಾರ, ನ್ಯಾಯಬೆಲೆ ಅಂಗಡಿಗಳಿಗೆ ಮುಂದಿನ ಹಂಚಿಕೆ/ಪೂರೈಕೆಗಾಗಿ ಭಾರತ ಆಹಾರ ನಿಗಮವು ಆಹಾರ ಧಾನ್ಯಗಳನ್ನು WSD ಗಳಿಗೆ ಬಿಡುಗಡೆ ಮಾಡುತ್ತದೆ.

[8] 2020–21ನೇ ವರ್ಷದ ಕಸ್ಟಮ್ ಮಿಲ್ಲಿನ ಅಕ್ಕಿ ಮತ್ತು MSP ಯ ತಾತ್ಕಾಲಿಕ ದರಗಳ ಪ್ರಕಾರ

ಆಹಾರ ಧಾನ್ಯಗಳ ಒಟ್ಟು ತೂಕದಿಂದ ಚೀಲಗಳ ತೂಕವನ್ನು ಕಡಿಮೆ ಮಾಡಿ ಆಹಾರ ಧಾನ್ಯಗಳ ನಿವ್ವಳ ತೂಕವನ್ನು ಮಾತ್ರ ಪರಿಗಣಿಸಿ FCI ನಿಂದ WSD ಗಳಿಗೆ ತಲುಪಿಸಿರುವುದನ್ನು ಟ್ರಕ್ ಚಿಟ್‌ಗಳಿಂದ ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, WSD ಗಳು ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಗಳಿಗೆ ತಲುಪಿಸುವಾಗ, ಅಕ್ಕಿಗೆ ಸಂಬಂಧಿಸಿದಂತೆ ಮಾತ್ರ ಗೋಣಿ ಚೀಲಗಳ ತೂಕವನ್ನು ಲೆಕ್ಕ ಹಾಕಿದ್ದವು ಮತ್ತು ರಾಗಿ/ಗೋಧಿ/ಜೋಳದಂತಹ ಇತರ ಆಹಾರಧಾನ್ಯಗಳಿಗೆ ಸಂಬಂಧಿಸಿದಂತೆ ಗೋಣಿಚೀಲಗಳ ತೂಕವನ್ನು ಲೆಕ್ಕ ಹಾಕುವ ಕಾರ್ಯವಿಧಾನವನ್ನು ಅನುಸರಿಸಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

01.04.2021 ರಿಂದ 31.03.2022ರ ಅವಧಿಯಲ್ಲಿ KFCSC ಯ FIST ಮಾಡ್ಯೂಲನ್ನು (ರಾಜ್ಯವ್ಯಾಪ್ತಿ ಮಾಹಿತಿ) ಲೆಕ್ಕಪರಿಶೋಧನೆಯು ಪರಿಶೀಲಿಸಿತು ಮತ್ತು ಕೆಳಗೆ ವಿವರಿಸಿದಂತೆ WSD ಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಪೂರೈಕೆಯಲ್ಲಿ ಕೊರತೆಯನ್ನು ಗಮನಿಸಲಾಯಿತು:

**ಕೋಷ್ಟಕ-10: ಆಹಾರ ಧಾನ್ಯಗಳ ಕೊರತೆಯನ್ನು ತೋರಿಸುವ ತಖ್ತೆ**

| ಆಹಾರ ಧಾನ್ಯ | ಟ್ರಕ್ ಚಿಟ್ ಪ್ರಮಾಣದ ಮೊತ್ತ (ಕ್ವಿಂಟಾಲ್‌ನಲ್ಲಿ ಒಟ್ಟು ಪ್ರಮಾಣ) | ನಿವ್ವಳ ಪ್ರಮಾಣದ ಮೊತ್ತ (ಕ್ವಿಂಟಾಲ್‌ನಲ್ಲಿ) | ಚೀಲದ ತೂಕದ ಮೊತ್ತ (ಕ್ವಿಂಟಾಲ್‌ನಲ್ಲಿ) | ಸರ್ಕಾರದ MSP (ರೂ.ಗಳಲ್ಲಿ) 2020-21ರ ಪ್ರಕಾರ | ಕಡಿಮೆ ಪೂರೈಕೆಯ ಮೌಲ್ಯ (ರೂ.ಗಳಲ್ಲಿ) |
|---|---|---|---|---|---|
| ಜೋಳ | 73,501.54 | 72,702.00 | 799.54 | 2,640 | 21,10,805 |
| MSP ರಾಗಿ 2020-21 | 20,55,984.71 | 20,35,493.96 | 20,490.74 | 3,295 | 6,75,16,999 |
| ಗೋದಿ FCI ಇ-ಹರಾಜು | 27,69,300.20 | 27,43,945.10 | 25,355.09 | 1,925 | 4,88,08,558 |
| ಒಟ್ಟು ಮೊತ್ತ | 48,98,786.46 | 48,52,141.07 | 46,645.38 | | 11,84,36,362 |

ಆಧಾರ: 2021-22ರ ವರ್ಷಕ್ಕೆ FIST ದತ್ತಸಂಚಯದ ಮಾಹಿತಿ

WSD ಗಳು ಆಹಾರ ಧಾನ್ಯಗಳ ಪೂರೈಕೆಗಾಗಿ ಗೋಣಿ ಚೀಲಗಳ ತೂಕವನ್ನು ಕಡಿಮೆ ಮಾಡದ/ಪರಿಗಣಿಸದ ಪರಿಣಾಮ ನ್ಯಾಯಬೆಲೆ ಅಂಗಡಿಗಳಿಗೆ ವಿತರಿಸುವಾಗ ₹11.84 ಕೋಟಿ ಮೌಲ್ಯದ ಆಹಾರ ಧಾನ್ಯಗಳ ಕೊರತೆಯಿದ್ದಿತು. ಒಟ್ಟು ತೂಕದಿಂದ ಚೀಲಗಳ ತೂಕದ ಕಡಿತದ ಅನುಪಸ್ಥಿತಿಯು ಆಹಾರ ಧಾನ್ಯಗಳ ಸಂಪೂರ್ಣ ಸರಬರಾಜು ವ್ಯವಸ್ಥೆಯು ಪೂರ್ಣ ದಕ್ಷತೆಯೊಂದಿಗೆ ಚಾಲನೆಯಲ್ಲಿದೆ ಎಂದು ತೋರಿಸಲಾಗಿದೆ.

ಭಾರತ ಸರ್ಕಾರದ DFPD ಯು ಗೋಣಿ ಚೀಲದ ತೂಕವನ್ನು ಕಡಿಮೆ ಮಾಡಲು FCI ಗೆ ಅನುಮತಿ ನೀಡಿದ್ದರೂ, ರಾಜ್ಯದ ಸರಬರಾಜು ವ್ಯವಸ್ಥೆಯ ಕಾರ್ಯಾಚರಣೆಗಳಿಗೆ ಅದನ್ನು ವಿಸ್ತರಿಸಲಾಗಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023). ಸರ್ಕಾರವು DFPD ಯಿಂದ ಅನುಮೋದನೆಯನ್ನು ಪಡೆಯಲಿದೆ ಎಂದು ಸಹ ತಿಳಿಸಿತು.

ಫಲಾನುಭವಿಗಳಿಗೆ ಆಹಾರ ಧಾನ್ಯಗಳ ಕೊರತೆಯನ್ನು ಸರ್ಕಾರದ ಉತ್ತರವು ದೃಢಪಡಿಸುತ್ತದೆ.

### *3.1.5.1 WSD ಗಳಿಂದ ಅಸಮರ್ಪಕ ಬಿಲ್ಲುಗಳ ತಯಾರಿಕೆ*

FCI ನಿಂದ ಆಹಾರ ಧಾನ್ಯಗಳನ್ನು ಸ್ವೀಕರಿಸಿದ ನಂತರ ಆಯಾ WSD ಯ ಉಸ್ತುವಾರಿ ಗೋದಾಮು ನಿರ್ವಾಹಕರು, ಸ್ವೀಕರಿಸಿದ ಪ್ರಮಾಣಕ್ಕೆ ಸ್ವೀಕೃತಿ ರಶೀದಿಯನ್ನು ತಯಾರಿಸುತ್ತಾರೆ ಮತ್ತು ಅದನ್ನು FIST ಮಾಡ್ಯೂಲ್‌ನಲ್ಲಿ ರವಾನಿಸುರುತ್ತಾರೆ. ಗೋದಾಮು ನಿರ್ವಾಹಕರು ತಮ್ಮ ಹಂಚಿಕೆಯ ಆಧಾರದ ಮೇಲೆ ಆಯಾ ನ್ಯಾಯಬೆಲೆ ಅಂಗಡಿಗಾಗಿ ಚಿಲ್ಲರೆ ಸರಕುಪಟ್ಟಿಗಳನ್ನು/ ಬಿಲ್ಲುಗಳನ್ನು ತಯಾರಿಸುತ್ತಾರೆ ಮತ್ತು ಒಪ್ಪಂದದ ಅನುಮೋದಿತ ಪಟ್ಟಿಯ ಪ್ರಕಾರ ವಾಹನದ ನೋಂದಣಿ ಸಂಖ್ಯೆಯನ್ನು ಸೂಚಿಸಬೇಕು. WSD ಗಳಲ್ಲಿನ ಸರಿಯಾದ ಸರಕುಪಟ್ಟಿ/ಬಿಲ್ಲು ತಯಾರಿಕೆಯ ಕಾರ್ಯವಿಧಾನಗಳು ಸರಬರಾಜು ವ್ಯವಸ್ಥೆಯಲ್ಲಿ ನಿಖರವಾದ ದಾಸ್ತಾನನ್ನು ಲೆಕ್ಕಹಾಕುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆದಾಗ್ಯೂ, WSD ಗಳು ಕೆಳಗೆ ವಿವರಿಸಿದಂತೆ, ದೋಷಪೂರಿತ ಸರಕುಪಟ್ಟಿಗಳನ್ನು ತಯಾರಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

- ಆರು WSD ಗಳಲ್ಲಿ ಹಸ್ತಚಾಲಿತವಾಗಿ ಬಿಲ್‌ಗಳನ್ನು ತಯಾರಿಸಲಾಗಿತ್ತು.
- ಟ್ರಕ್ ನೋಂದಣಿ ಸಂಖ್ಯೆಗಳಿಲ್ಲದೆ ಅಥವಾ ಹಸ್ತಚಾಲಿತವಾಗಿ ನಮೂದಿಸಿ FIST ಮಾಡ್ಯೂಲ್‌ನಲ್ಲಿ (6 ಪ್ರಕರಣಗಳು) ಚಿಲ್ಲರೆ ಸರಕುಪಟ್ಟಿಗಳನ್ನು ತಯಾರಿಸಲಾಗಿತ್ತು, ಹಾಗಾಗಿ, ಅಧಿಕೃತ ವಾಹನಗಳ ಮೂಲಕ ಆಹಾರ ಧಾನ್ಯಗಳ ರವಾನೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.
- ಒಂದು ತಿಂಗಳಲ್ಲಿ ಬಹು ರವಾನೆಗಳಿಗಾಗಿ ಮಾಸಿಕವಾಗಿ ಒಂದೇ ಏಕೀಕೃತ ವೇ–ಬಿಲ್‌ಗಳನ್ನು ತಯಾರಿಸಲಾಗಿತ್ತು.

ಎಂಡ್–ಟು–ಎಂಡ್ TPDS ಅನುಷ್ಠಾನಕ್ಕಾಗಿ ಇಲಾಖೆಯು ವಿವಿಧ ತಂತ್ರಾಂಶಗಳನ್ನು ನಿರ್ವಹಿಸುತ್ತಿದ್ದರೂ, ಹಸ್ತಚಾಲಿತ ಬಿಲ್ಲಿಂಗ್/ಏಕೀಕೃತ ಬಿಲ್ಲಿಂಗ್‌ನ ಅಭ್ಯಾಸಗಳು ದಾಸ್ತಾನಿನ ತಪ್ಪು ಲೆಕ್ಕಾಚಾರ ಮತ್ತು ಮಾರ್ಗಪಲ್ಲಟದ ಅಪಾಯವನ್ನು ಹೆಚ್ಚಿಸಿದೆ.

ಸರಕುಪಟ್ಟಿ ಮತ್ತು ಬಿಲ್ಲಿಂಗ್ ಮಾಡ್ಯೂಲ್‌ನೊಂದಿಗೆ FIST 2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಇಲಾಖೆ ಉದ್ದೇಶಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

***ಶಿಫಾರಸು–3: ರಾಜ್ಯ ಸರ್ಕಾರವು WSD ಗಳಿಂದ ಗೋದಾಮಿನ ಕಾರ್ಯಾಚರಣೆಗಳಿಗೆ ವಿವರವಾದ ಕೈಪಿಡಿ/ಮಾರ್ಗಸೂಚಿಗಳನ್ನು ರೂಪಿಸಬೇಕು ಮತ್ತು ಅವುಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು. ವಶಪಡಿಸಿಕೊಂಡ ದಾಸ್ತಾನು ವಿಲೇವಾರಿ ಮಾಡದಿರುವ ಮತ್ತು ಗೋಣಿ ಚೀಲಗಳ ತೂಕವನ್ನು ಕಡಿಮೆ ಮಾಡದ ಕಾರಣ ನ್ಯಾಯಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಕೊರತೆಗಾಗಿ ಜಿಲ್ಲಾ ಅಧಿಕಾರಿಗಳ ಮೇಲೆ ಹಾಗೂ WSD ಗಳ ಅನೈರ್ಮಲ್ಯ/ಕಳಪೆ ನಿರ್ವಹಣೆಗಾಗಿ WSD ನಿರ್ವಾಹಕರ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ರಾಜ್ಯ ಸರ್ಕಾರವು ಪ್ರತಿ ಸಾಗಾಣಿಕೆಯನ್ನು ಪತ್ತೆಹಚ್ಚಲು ಮತ್ತು ಟ್ರ್ಯಾಕ್ ಮಾಡಲು ಸರಿಯಾದ ಸಾಗಾಣಿಕೆವಾರು ಬಿಲ್ಲಿಂಗ್ ಅನ್ನು ಖಚಿತಪಡಿಸಿಕೊಳ್ಳಬೇಕು.***

# ಅಧ್ಯಾಯ-IV :
# ನ್ಯಾಯಬೆಲೆ ಅಂಗಡಿಗಳ ಕಾರ್ಯಾಚರಣೆ

# ಅಧ್ಯಾಯ–IV : ನ್ಯಾಯಬೆಲೆ ಅಂಗಡಿಗಳ ಕಾರ್ಯಾಚರಣೆ

*PDS ಕಾರ್ಯಾಚರಣೆಗಳಲ್ಲಿ ನ್ಯಾಯಬೆಲೆ ಅಂಗಡಿಗಳು ಸೇವಾ ವಿತರಣಾ ಕೇಂದ್ರವಾಗಿದ್ದು ಪ್ರಮುಖ ಮೂಲಸೌಕರ್ಯ ಸೌಲಭ್ಯವಾಗಿದೆ. ನ್ಯಾಯಬೆಲೆ ಅಂಗಡಿಗಳಲ್ಲಿನ ಮೂಲಸೌಕರ್ಯಗಳ ಗುಣಮಟ್ಟ ಹಾಗೂ ಅನುಸರಿಸುವ ಸಂಗ್ರಹಣೆ ಮತ್ತು ನಿರ್ವಹಣಾ ಅಭ್ಯಾಸಗಳು ಫಲಾನುಭವಿಗಳಿಗೆ ವಿತರಿಸಲಾದ ಆಹಾರಧಾನ್ಯಗಳ ಗುಣಮಟ್ಟ ಮತ್ತು ಪ್ರಮಾಣವನ್ನು ನಿರ್ಧರಿಸುತ್ತದೆ.*

*ನ್ಯಾಯಬೆಲೆ ಅಂಗಡಿಗಳಲ್ಲಿ ಮೂಲಸೌಕರ್ಯ ಮತ್ತು ಅಭ್ಯಾಸಗಳಲ್ಲಿ ವಿವಿಧ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅವುಗಳೆಂದರೆ ಆಹಾರಧಾನ್ಯಗಳ ಜೊತೆಗೆ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಸಂಗ್ರಹಣೆ, ಅನಧಿಕೃತ/ನವೀಕರಿಸದ ತೂಕದ ಮಾಪಕಗಳ ಬಳಕೆ, ಕೆಲಸದ ಸಮಯದಲ್ಲಿ ನ್ಯಾಯಬೆಲೆ ಅಂಗಡಿಗಳು ಮುಚ್ಚಿರುವುದು ಇತ್ಯಾದಿಗಳು. ಇದು ನ್ಯಾಯಬೆಲೆ ಅಂಗಡಿಗಳ ಕಳಪೆ ಕಾರ್ಯಾಚರಣೆಯನ್ನು ಸೂಚಿಸುತ್ತಿತ್ತು. TPDS ನಿಯಂತ್ರಣ ಆದೇಶದಡಿಯಲ್ಲಿ ಅಗತ್ಯವಿರುವ ಎರಡು ತಿಂಗಳ ಕಾಯ್ದಿರಿಸಿದ ದಾಸ್ತಾನಿಗೆ ನ್ಯಾಯಬೆಲೆ ಅಂಗಡಿಗಳ ಮೂಲಸೌಕರ್ಯವು ಸ್ಥಳಾವಕಾಶ ಮಾಡಿಕೊಡಲು ಸಾಧ್ಯವಾಗಲಿಲ್ಲ.*

## 4.1 ನ್ಯಾಯಬೆಲೆ ಅಂಗಡಿಗಳ ಮೂಲಸೌಕರ್ಯ ಮತ್ತು ಶೇಖರಣಾ ಅಭ್ಯಾಸಗಳು

ಲೆಕ್ಕಪರಿಶೋಧನೆಯು 18 WSD ಗಳ ವ್ಯಾಪ್ತಿಯಲ್ಲಿನ 96 ನ್ಯಾಯಬೆಲೆ ಅಂಗಡಿಗಳ ಜಂಟಿ ಭೌತಿಕ ಪರಿಶೀಲನೆಯನ್ನು ನಡೆಸಿತು ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಮೂಲಸೌಕರ್ಯವು ಕಳಪೆಯಾಗಿರುವುದನ್ನು ಹಾಗೂ ಕೆಳಗೆ ವಿವರಿಸಿದಂತೆ ನ್ಯೂನತೆಗಳಿರುವುದನ್ನು ಗಮನಿಸಿತು.

### *4.1.1 ನ್ಯಾಯಬೆಲೆ ಅಂಗಡಿಗಳ ಸಾಕಷ್ಟಿಲ್ಲದ ಶೇಖರಣಾ ಸಾಮರ್ಥ್ಯ*

ಕರ್ನಾಟಕ PDS ಆದೇಶದ, ಕಲಂ 5(1)(ಬಿ) ಪ್ರಕಾರ ನ್ಯಾಯಬೆಲೆ ಅಂಗಡಿಗಳ ಮಾಲೀಕರು ಸೂಕ್ತವಾದ ವ್ಯಾಪಾರ ಸ್ಥಳವನ್ನು ಹೊಂದಿರಬೇಕು, ಅಗತ್ಯ ವಸ್ತುಗಳ ಎರಡು ತಿಂಗಳ ದಾಸ್ತಾನು ಸಂಗ್ರಹಿಸಲು ಸಾಕಷ್ಟು ಸ್ಥಳಾವಕಾಶವನ್ನು ಹೊಂದಿರಬೇಕು ಹಾಗೂ ಆಹಾರಧಾನ್ಯಗಳನ್ನು ಮತ್ತು ಸೀಮೆಎಣ್ಣೆಯನ್ನು ಸಂಗ್ರಹಿಸಲು ಪ್ರತ್ಯೇಕ ಸ್ಥಳವನ್ನು ಹೊಂದಿರಬೇಕು.

ಎರಡು ತಿಂಗಳ ಅಗತ್ಯ ವಸ್ತುಗಳ ದಾಸ್ತಾನು ಸಂಗ್ರಹಿಸಲು 54 ನ್ಯಾಯಬೆಲೆ ಅಂಗಡಿಗಳ ಶೇಖರಣಾ ಸಾಮರ್ಥ್ಯವು ಸಾಕಷ್ಟಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ನ್ಯಾಯಬೆಲೆ ಅಂಗಡಿಗಳ ಮಾಲೀಕರು ಒಂದು ತಿಂಗಳಲ್ಲಿ ಎರಡರಿಂದ ಮೂರು ಹಂಚಿಕೆಗಳಲ್ಲಿ WSD ಯಿಂದ ಆಹಾರಧಾನ್ಯಗಳನ್ನು ಎತ್ತುತ್ತಿದ್ದರು (**ಅನುಬಂಧ–V**).

**ಪ್ರದರ್ಶಿಕೆ–5: ನ್ಯಾಯಬೆಲೆ ಅಂಗಡಿಗಳಲ್ಲಿ ಅಸಮರ್ಪಕ ಸರಕು ನಿರ್ವಹಣೆ**




ಆಧಾರ: ಜಂಟಿ ಭೌತಿಕ ಪರಿಶೀಲನೆ

ಅಧಿಕೃತ ಪರವಾನಗಿದಾರರು ನಿಗದಿಪಡಿಸಿದಂತೆ ಎರಡು ತಿಂಗಳ ದಾಸ್ತಾನನ್ನು ಸಂಗ್ರಹಿಸಲು ಸಾಕಷ್ಟು ಶೇಖರಣಾ ಸ್ಥಳವನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನ್ಯಾಯಬೆಲೆ ಅಂಗಡಿಗಳಿಗೆ ಪರವಾನಗಿ ನೀಡುವ ಪ್ರಾಧಿಕಾರವು ವಿಫಲವಾಗಿತ್ತು. ಸೂಕ್ತವಾದ ಪ್ರವೇಶದ ಅನುಪಸ್ಥಿತಿಯಲ್ಲಿ, ಜಂಟಿ ಭೌತಿಕ ಪರಿಶೀಲನೆಯ ದಿನದಂದು ನ್ಯಾಯಬೆಲೆ ಅಂಗಡಿಗಳು ಹೊಂದಿರುವ ಪರಿಮಾಣದ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಇದಲ್ಲದೆ, ನ್ಯಾಯಬೆಲೆ ಅಂಗಡಿಗಳು ಆಹಾರಧಾನ್ಯಗಳನ್ನು ಅನೈರ್ಮಲ್ಯದ ಪರಿಸರದಲ್ಲಿ ಅಂದರೆ ಗೋಡೆಗಳು/ ಮೇಲ್ಛಾವಣಿಗಳಲ್ಲಿನ ತೇವಾಂಶ/ಸೋರಿಕೆಗಳು ಇರುವ ಕಡೆ ಸಂಗ್ರಹಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

PDS ನಿಯಂತ್ರಣ ಆದೇಶ 2016ನ್ನು ಜಾರಿ ಮಾಡುವ ಪೂರ್ವದಲ್ಲೇ ಹೆಚ್ಚಿನ ನ್ಯಾಯಬೆಲೆ ಅಂಗಡಿಗಳಿಗೆ ಕಾರ್ಯನಿರ್ವಹಿಸಲು ಅಧಿಕಾರ ನೀಡಲಾಗಿದೆ ಮತ್ತು ಬೆಂಗಳೂರು IRA ನಂತಹ ನಗರ ಪ್ರದೇಶಗಳಲ್ಲಿ ಹಲವು ವರ್ಷಗಳಿಂದ ಅಸ್ತಿತ್ವದಲ್ಲಿರುವ ನ್ಯಾಯಬೆಲೆ ಅಂಗಡಿಗಳ ವಿಸ್ತರಣೆಗೆ ಅವಕಾಶವು ಸೀಮಿತವಾಗಿತ್ತು ಎಂದು ರಾಜ್ಯ ಸರ್ಕಾರವು ತಿಳಿಸಿತು. ಎರಡು ತಿಂಗಳ ಕಾಯ್ದಿರಿಸಿದ ದಾಸ್ತಾನನ್ನು ಸಂಗ್ರಹಿಸಲು ನ್ಯಾಯಬೆಲೆ ಅಂಗಡಿಗಳು ಸ್ಥಳಾವಕಾಶವನ್ನು ಹೊಂದಿರಬೇಕು ಎಂದು ನಿಯಂತ್ರಣ ಆದೇಶವು ನಿಗದಿಪಡಿಸಿರುವುದರಿಂದ ಇಲಾಖೆಯ ಉತ್ತರವು ಸಮರ್ಥನೀಯವಲ್ಲ.

### *4.1.2 ಆಹಾರ ಧಾನ್ಯಗಳ ಜೊತೆಗೆ ಗೊಬ್ಬರ/ಸೀಮೆಎಣ್ಣೆ/ಕೀಟನಾಶಕ/ಬ್ಯಾಟರಿಗಳನ್ನು ಸಂಗ್ರಹಿಸುವುದು*

WDRA ಮಾರ್ಗಸೂಚಿಗಳು ಮತ್ತು ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ವ್ಯವಸ್ಥೆ (ನಿಯಂತ್ರಣ) ಆದೇಶ 2016ರ ಪ್ರಕಾರ, ಅಧಿಕೃತ ವಿತರಕರು ಆಹಾರಧಾನ್ಯಗಳು/ಸಕ್ಕರೆ/ಹತ್ತಿ ಮುಂತಾದ ಆಹಾರ ಪದಾರ್ಥಗಳನ್ನು ಕಲುಷಿತಗೊಳಿಸಬಹುದಾದ ರಸಗೊಬ್ಬರ, ರಾಸಾಯನಿಕಗಳು ಇತ್ಯಾದಿ ಆಹಾರೇತರ ಸರಕುಗಳ ಜೊತೆ ಹಾಗೂ ಅಪಾಯಕಾರಿ ಮತ್ತು ಅತಿ ಅಪಾಯಕಾರಿ ಸರಕುಗಳನ್ನು ಅಪಾಯಕಾರಿಯಲ್ಲದ ಸರಕುಗಳೊಂದಿಗೆ ಒಂದೇ ಗೋದಾಮಿನಲ್ಲಿ ಸಂಗ್ರಹಿಸಬಾರದು ಎಂದು ಖಚಿತ ಪಡಿಸಿಕೊಳ್ಳಬೇಕು. ಜಂಟಿ ಭೌತಿಕ ಪರಿಶೀಲನೆಯ ಫಲಿತಾಂಶಗಳನ್ನು ಕೆಳಗೆ ನೀಡಲಾಗಿದೆ:

**ಪ್ರದರ್ಶಿಕೆ–6: ಅಪಾಯಕಾರಿ ರಾಸಾಯನಿಕಗಳೊಂದಿಗೆ ಆಹಾರ ಧಾನ್ಯಗಳ ಸಂಗ್ರಹಣೆ**




ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ, ಐದು[9] ನ್ಯಾಯಬೆಲೆ ಅಂಗಡಿಗಳಲ್ಲಿ ಅಪಾಯಕಾರಿ ಸರಕುಗಳಾದ ರಸಗೊಬ್ಬರ/ಸೀಮೆಎಣ್ಣೆ/ಕೀಟನಾಶಕಗಳು/ಬ್ಯಾಟರಿಗಳು ಇತ್ಯಾದಿಗಳನ್ನು ಆಹಾರ ಧಾನ್ಯಗಳ ಜೊತೆಗೆ ಸಂಗ್ರಹಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಆಹಾರಧಾನ್ಯಗಳನ್ನು ಕಲುಷಿತಗೊಳಿಸುವ ಸಂಭವವಿದೆ. ನಿಯಂತ್ರಣ ಆದೇಶದ ಅಧಿಸೂಚನೆಯಡಿಯಲ್ಲಿ ಅಗತ್ಯವಿರುವಂತೆ ಆಯಾ ವಲಯಗಳ ಆಹಾರ ನಿರೀಕ್ಷಕರು ಮತ್ತು ಆಹಾರ ಶಿರಸ್ತೇದಾರರು ಸರಿಪಡಿಸುವ ಕ್ರಮವನ್ನು ಜರುಗಿಸಲು ವಿಫಲರಾಗಿದ್ದರು.

---

[9] ಹುಮ್ನಾಬಾದ್‌ನ ನ್ಯಾಯಬೆಲೆ ಅಂಗಡಿ–30, 32ರಲ್ಲಿ ಮತ್ತು ವಿಜಯಪುರ ನ್ಯಾಯಬೆಲೆ ಅಂಗಡಿ–132ರಲ್ಲಿ ರಸಗೊಬ್ಬರಗಳನ್ನು ಶೇಖರಿಸಲಾಗಿತ್ತು. ಮಳವಳ್ಳಿಯ ನ್ಯಾಯಬೆಲೆ ಅಂಗಡಿ-2 ಸೀಮೆಎಣ್ಣೆಯನ್ನು ಹಾಗೂ ಗದಗ್‌ನ ನ್ಯಾಯಬೆಲೆ ಅಂಗಡಿ–75ರಲ್ಲಿ ಬ್ಯಾಟರಿಗಳು/ಸೋಲಾರ್ ಪ್ಯಾನೆಲ್ ಸಾಧನಗಳನ್ನು ಶೇಖರಿಸಲಾಗಿತ್ತು.

ಸಹಕಾರ ಸಂಘಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂತಹ ನ್ಯಾಯಬೆಲೆ ಅಂಗಡಿಗಳು ರಸಗೊಬ್ಬರಗಳು, ಕೀಟನಾಶಕಗಳು ಇತ್ಯಾದಿಗಳ ವಿತರಣೆಯ ಜವಾಬ್ದಾರಿಯನ್ನೂ ಹೊಂದಿದ್ದವು ಎಂದು ರಾಜ್ಯ ಸರ್ಕಾರವು ತಿಳಿಸಿತು. ಈ ಅಭ್ಯಾಸವು ರಸಗೊಬ್ಬರಗಳು/ಕೀಟನಾಶಕಗಳಿಂದ ಆಹಾರ ಧಾನ್ಯಗಳು ಕಲುಷಿತಗೊಳ್ಳುವ ಅಪಾಯದಿಂದ ಕೂಡಿರುವುದರಿಂದ ಸರ್ಕಾರದ ಉತ್ತರವು ಸಮರ್ಥನೀಯವಲ್ಲ. ಅಂತಹ ಅಭ್ಯಾಸಗಳು ನಿಯಂತ್ರಣ ಆದೇಶದ ನಿರ್ದೇಶನಗಳಿಗೆ ವಿರುದ್ಧವಾಗಿವೆ.

### *4.1.3 ನ್ಯಾಯಬೆಲೆ ಅಂಗಡಿಗಳಲ್ಲಿ ಕಳಪೆ ಗುಣಮಟ್ಟದ ಆಹಾರ ಧಾನ್ಯಗಳು*

ಕೆಳಗೆ ವಿವರಿಸಿದಂತೆ ಪರೀಕ್ಷಾರ್ಥ–ತನಿಖೆ ನಡೆಸಿದ ನ್ಯಾಯಬೆಲೆ ಅಂಗಡಿಗಳಲ್ಲಿ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಹುಳುಗಳು/ಜೇಡರ ಬಲೆಗಳು/ಹಲ್ಲಿಗಳಿಂದ ಮುತ್ತಿಕೊಂಡಿರುವ ಕಳಪೆ ಗುಣಮಟ್ಟದ ಆಹಾರಧಾನ್ಯಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ–11: ಕಳಪೆ ಗುಣಮಟ್ಟದ ಆಹಾರ ಧಾನ್ಯಗಳು**

| ಕ್ರಮ ಸಂಖ್ಯೆ | ಜಿಲ್ಲೆ | ನ್ಯಾಯಬೆಲೆ ಅಂಗಡಿ ಸಂಖ್ಯೆ | ಆಹಾರಧಾನ್ಯ | ಕಳಪೆ ಆಹಾರಧಾನ್ಯ (ಕ್ವಿಂಟಾಲ್) | ಪ್ರತಿ ಕ್ವಿಂಟಾಲ್‌ಗೆ ದರ (*) | ಮೊತ್ತ (₹ ಗಳಲ್ಲಿ) |
|---|---|---|---|---|---|---|
| 1 | ಮಂಡ್ಯ | ನ್ಯಾಯಬೆಲೆ ಅಂಗಡಿ–2, (ಮಳವಳ್ಳಿ, TAPCMS) | ಅಕ್ಕಿ | 19.50 | 2,995.05 | 58,403.48 |
| | | | ಗೋಧಿ | 2.00 | 1,975.00 | 3,950.00 |
| 2 | ಬೀದರ್ | ನ್ಯಾಯಬೆಲೆ ಅಂಗಡಿ–68 (ಬೀದರ್ ಗ್ರಾಮಾಂತರ KFCSC) | ಜೋಳ | 107.40 | 2,738.00 | 2,94,061.20 |
| 3 | ಬೆಂಗಳೂರು ದಕ್ಷಿಣ IRA | ನ್ಯಾಯಬೆಲೆ ಅಂಗಡಿ BLC–44, (ಹನುಮಂತನಗರ KFCSC) | ಅಕ್ಕಿ | 30.00 | 2,995.05 | 89,851.50 |
| | | | ರಾಗಿ | 30.00 | 3,377.00 | 1,01,310.00 |
| 4 | ರಾಯಚೂರು | ನ್ಯಾಯಬೆಲೆ ಅಂಗಡಿ–109, (ರಾಯಚೂರು KFCSC) | ಗೋಧಿ | 5.00 | 1,975.00 | 9,875.00 |
| 5 | ರಾಯಚೂರು | ನ್ಯಾಯಬೆಲೆ ಅಂಗಡಿ–125 (ಮಾನ್ವಿ KFCSC) | ಗೋಧಿ | 11.50 | 1,975.00 | 22,712.50 |
| 6 | ಗದಗ್ | ನ್ಯಾಯಬೆಲೆ ಅಂಗಡಿ–67, (ಗದಗ TAPCMS) | ಅಕ್ಕಿ | 24.00 | 2,995.05 | 71,881.20 |
| 7 | ಗದಗ್ | ನ್ಯಾಯಬೆಲೆ ಅಂಗಡಿ–9, (ಲಕ್ಷ್ಮೇಶ್ವರ KFCSC) | ಅಕ್ಕಿ | 4.50 | 2,995.05 | 13,477.73 |
| | | | ಜೋಳ | 1.00 | 2,738.00 | 2,738.00 |
| 8 | ಗದಗ್ | ನ್ಯಾಯಬೆಲೆ ಅಂಗಡಿ–9, (ಗದಗ್ KFCSC) | ಅಕ್ಕಿ | 1.00 | 2,995.05 | 2,995.05 |
| | | | ಜೋಳ | 1.00 | 2,738.00 | 2,738.00 |
| | | | | | **ಒಟ್ಟು** | **6,73,993.65** |
| * MSP 2021–22ರ ಪ್ರಕಾರ ದರ ಮತ್ತು ಅಕ್ಕಿಯ NFSA ಕೇಂದ್ರ ಜಾರಿ ಬೆಲೆ | | | | | | |

**ಪ್ರದರ್ಶಿಕೆ –7: ಹುಳುಗಳು/ಕೀಟಗಳು/ಹಲ್ಲಿಗಳು ಮುತ್ತಿಕೊಂಡಿರುವ ಆಹಾರ ಧಾನ್ಯಗಳು**



















ನಿರ್ವಹಣಾ ಮತ್ತು ಶೇಖರಣಾ ನಷ್ಟವನ್ನು ಲೆಕ್ಕವಿಡದ ಕಾರಣ, ಕಡಿಮೆ ಪೂರೈಕೆ ಅಥವಾ ಕಳಪೆ ಗುಣಮಟ್ಟದ ಆಹಾರ ಧಾನ್ಯಗಳ ವಿತರಣೆಯ ಸಾಧ್ಯತೆಯನ್ನು ಲೆಕ್ಕಪರಿಶೋಧನೆಯಲ್ಲಿ ತಳ್ಳಿಹಾಕಲಾಗುವುದಿಲ್ಲ. ಇದಲ್ಲದೆ, ನ್ಯಾಯಬೆಲೆ ಅಂಗಡಿಗಳ ಸಮಯೋಚಿತ ತಪಾಸಣೆ ಮತ್ತು ಸರಿಪಡಿಸುವ ಕ್ರಮವನ್ನು ಜರುಗಿಸುವಲ್ಲಿ ಆಹಾರ ನಿರೀಕ್ಷಕರು/ಆಹಾರ ಶಿರಸ್ತೇದಾರರ ವಿಫಲತೆಯಿಂದ ಎಂಟು ನ್ಯಾಯಬೆಲೆ ಅಂಗಡಿಗಳಲ್ಲಿ ₹6.74 ಲಕ್ಷ ಮೌಲ್ಯದ ಆಹಾರಧಾನ್ಯಗಳು ಬಳಕೆಗೆ ಯೋಗ್ಯವಲ್ಲದಂತಾಗಿತ್ತು.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಘಟನೆಗಳು WSD ಗಳಲ್ಲಿ ವಶಪಡಿಸಿಕೊಳ್ಳಲಾದ ದಾಸ್ತಾನಾಗಿದ್ದು EC ಕಾಯ್ದೆಯ ಪ್ರಕಾರ ಕ್ರಮಕ್ಕಾಗಿ ಕಾಯಲಾಗಿದೆ ಎಂದು ಸರ್ಕಾರವು ತಿಳಿಸಿತು (ಏಪ್ರಿಲ್ 2023). ನ್ಯಾಯಬೆಲೆ ಅಂಗಡಿಗಳಲ್ಲಿ ಲೆಕ್ಕಪರಿಶೋಧನೆಗೆ ಕಳಪೆ ಗುಣಮಟ್ಟದ ಆಹಾರಧಾನ್ಯಗಳು ಕಂಡುಬಂದಿರುವುದರಿಂದ ರಾಜ್ಯ ಸರ್ಕಾರದ ಉತ್ತರವು ಸಮರ್ಥನೀಯವಲ್ಲ.

### 4.1.4 FIST ಮಾಡ್ಯೂಲ್ ಪ್ರಕಾರ ದಾಸ್ತಾನು ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ ಭೌತಿಕ ದಾಸ್ತಾನಿನ ನಡುವಿನ ವ್ಯತ್ಯಾಸಗಳು

ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ, ನ್ಯಾಯಬೆಲೆ ಅಂಗಡಿಗಳ ಲಾಗಿನ್‌ನಲ್ಲಿ FIST ದಾಸ್ತಾನಿಗೆ ಪ್ರತಿಯಾಗಿ 21 ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರಧಾನ್ಯಗಳ ಕೊರತೆಯನ್ನು ಮತ್ತು 24 ನ್ಯಾಯಬೆಲೆ ಅಂಗಡಿಗಳಲ್ಲಿ ಹೆಚ್ಚುವರಿ ಆಹಾರ ಧಾನ್ಯಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ–VI**). ಭೌತಿಕ ದಾಸ್ತಾನು ಕೊರತೆಯು ₹26.35 ಲಕ್ಷ ಮೌಲ್ಯದ 870.75 ಕ್ವಿಂಟಾಲ್ ಆಗಿದ್ದು ಹೆಚ್ಚುವರಿ ಭೌತಿಕ ದಾಸ್ತಾನು ₹16.87 ಲಕ್ಷ ಮೌಲ್ಯದ 560.60 ಕ್ವಿಂಟಾಲ್ ಆಗಿತ್ತು. (**ಕೋಷ್ಟಕ–12**).

**ಕೋಷ್ಟಕ–12: FIST ಪ್ರಕಾರದ ದಾಸ್ತಾನಿಗೆ ಪ್ರತಿಯಾಗಿ ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರಧಾನ್ಯಗಳ ಕೊರತೆ/ಹೆಚ್ಚುವರಿ**

| ಕ್ರಮ ಸಂಖ್ಯೆ | ಆಹಾರಧಾನ್ಯ | ನ್ಯಾಯಬೆಲೆ ಅಂಗಡಿಗಳ ಸಂಖ್ಯೆ | ಕೊರತೆ (ಕ್ವಿಂಟಾಲ್‌ಗಳಲ್ಲಿ) | ಪ್ರತಿ ಕ್ವಿಂಟಾಲ್‌ಗೆ ದರ (₹ ಗಳಲ್ಲಿ) | ಮೊತ್ತ (₹ ಗಳಲ್ಲಿ) |
|---|---|---|---|---|---|
| 1 | ಅಕ್ಕಿ | 18 | 794.71 | 2,995.05 | 23,80,196.18 |
| 2 | ರಾಗಿ | 2 | 72.82 | 3,377.00 | 2,45,913.14 |
| 3 | ಜೋಳ | 1 | 3.22 | 2,738.00 | 8,816.36 |
| | **ಒಟ್ಟು** | **21** | **870.75** | | **26,34,925.68** |
| **ಕ್ರಮ ಸಂಖ್ಯೆ** | **ಆಹಾರಧಾನ್ಯ** | **ನ್ಯಾಯಬೆಲೆ ಅಂಗಡಿಗಳ ಸಂಖ್ಯೆ** | **ಅಧಿಕ (ಕ್ವಿಂಟಾಲ್‌ಗಳಲ್ಲಿ)** | **ಪ್ರತಿ ಕ್ವಿಂಟಾಲ್‌ಗೆ ದರ (₹ ಗಳಲ್ಲಿ)** | **ಮೊತ್ತ (₹ ಗಳಲ್ಲಿ)** |
| 1 | ಅಕ್ಕಿ | 21 | 541.49 | 2,995.00 | 16,21,789.62 |
| 2 | ರಾಗಿ | 3 | 19.11 | 3,377.00 | 64,534.47 |
| | **ಒಟ್ಟು** | **24** | **560.60** | | **16,86,324.09** |

ಫಲಾನುಭವಿಗಳಿಗೆ ಆಹಾರ ಧಾನ್ಯಗಳ ಕಡಿಮೆ ಪೂರೈಕೆಯಾಗಿರುವುದು ಅಧಿಕ ಪ್ರಮಾಣಕ್ಕೆ ಸಂಭವನೀಯ ಕಾರಣವಾಗಿರಬಹುದು. ದಾಸ್ತಾನು ಕೊರತೆಯು ಆಹಾರಧಾನ್ಯಗಳ ಮಾರ್ಗಪಲ್ಲಟವನ್ನು ಸೂಚಿಸುತ್ತದೆ. ಇದಲ್ಲದೆ, ನ್ಯಾಯಬೆಲೆ ಅಂಗಡಿಗಳಲ್ಲಿನ ಕೊರತೆ/ಹೆಚ್ಚುವರಿ ದಾಸ್ತಾನು ಆಹಾರ ನಿರೀಕ್ಷಕರು/ಆಹಾರ ಶಿರಸ್ತೇದಾರರಿಂದ ಪರಿಣಾಮಕಾರಿಯಲ್ಲದ ತಪಾಸಣೆಗಳನ್ನು ಸೂಚಿಸುತ್ತದೆ.

**ದೃಷ್ಟಾಂತ ಪ್ರಕರಣ**

**ನ್ಯಾಯಬೆಲೆ ಅಂಗಡಿಯ ಜಂಟಿ ಭೌತಿಕ ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದ ಗಂಭೀರ ಅಕ್ರಮಗಳು:**

ನ್ಯಾಯಬೆಲೆ ಅಂಗಡಿ ಸಂಖ್ಯೆ (218-3-IRA) BLS–29, ಸುಜಾತಾ ಸ್ಟೋರ್ಸ್‌ನ (ಹನುಮಂತನಗರ WSP) ಜಂಟಿ ಭೌತಿಕ ಪರಿಶೀಲನೆಯನ್ನು 03.09.2022ರಂದು ಸಂಬಂಧಿತ ಆಹಾರ ನಿರೀಕ್ಷಕರೊಂದಿಗೆ ನಡೆಸಲಾಯಿತು. WSP ಹನುಮಂತನಗರದ ದಿನಾಂಕ 02.09.2022ರ ಮಾರಾಟದ ಸರಕುಪಟ್ಟಿ ಪ್ರಕಾರ ಸೆಪ್ಟೆಂಬರ್ 2022ರಲ್ಲಿ ಫಲಾನುಭವಿಗಳಿಗೆ ವಿತರಿಸಲು ನ್ಯಾಯಬೆಲೆ ಅಂಗಡಿಗೆ 75 ಕ್ವಿಂಟಾಲ್ ಅಕ್ಕಿ ಮತ್ತು 75 ಕ್ವಿಂಟಾಲ್ ರಾಗಿಯನ್ನು ನೀಡಿರುವುದನ್ನು ಗಮನಿಸಲಾಯಿತು. ಜೊತೆಗೆ ನ್ಯಾಯಬೆಲೆ ಅಂಗಡಿಯು

ಹಿಂದಿನ ತಿಂಗಳ ಮುಕ್ತಾಯ ಶಿಲ್ಕಾಗಿ 4.30 ಕ್ವಿಂಟಾಲ್ ಅಕ್ಕಿ ಮತ್ತು 1.12 ಕ್ವಿಂಟಾಲ್ ರಾಗಿ, ಹೀಗೆ ಒಟ್ಟು 155.42 ಕ್ವಿಂಟಾಲ್ ಆಹಾರ ಧಾನ್ಯಗಳನ್ನು ಹೊಂದಿತ್ತು.

ಲೆಕ್ಕಪರಿಶೋಧನೆಯು 3 ಸೆಪ್ಟೆಂಬರ್ 2022 ರಲ್ಲಿದ್ದಂತೆ ನ್ಯಾಯಬೆಲೆ ಅಂಗಡಿಯಲ್ಲಿ ಲಭ್ಯವಿರುವ ದಾಸ್ತಾನನ್ನು ಭೌತಿಕವಾಗಿ ಪರಿಶೀಲಿಸಿತು ಮತ್ತು 29.42 ಕ್ವಿಂಟಾಲ್ (ಅಕ್ಕಿ–12.8 ಕ್ವಿಂಟಾಲ್ ಮತ್ತು ರಾಗಿ–16.62 ಕ್ವಿಂಟಾಲ್) ಕೊರತೆಯೊಂದಿಗೆ 155.42 ಕ್ವಿಂಟಾಲ್‌ಗಳಿಗೆ ಪ್ರತಿಯಾಗಿ 126 ಕ್ವಿಂಟಾಲ್‌ಗಳ ಆಹಾರ ಧಾನ್ಯಗಳ ದಾಸ್ತಾನು ಮಾತ್ರ ಕಂಡುಬಂದಿತು. ವಿವರಗಳು **ಕೋಷ್ಟಕ–13**ರಲ್ಲಿವೆ:

**ಕೋಷ್ಟಕ–13: ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿ ಮತ್ತು ರಾಗಿಯ ಕೊರತೆ**

| ಆಹಾರ ಧಾನ್ಯಗಳು | ಪ್ರಾರಂಭಿಕ ಶಿಲ್ಕು | | WSP ಯಿಂದ ಸ್ವೀಕರಿಸಿದ್ದು (02–09–2022) | | ಒಟ್ಟು | | ಜಂಟಿ ಭೌತಿಕ ಪರಿಶೀಲನೆಯಲ್ಲಿ ಭೌತಿಕ ದಾಸ್ತಾನು | | ವ್ಯತ್ಯಾಸ ಕ್ವಿಂಟಾಲ್‌ಗಳಲ್ಲಿ |
|---|---|---|---|---|---|---|---|---|---|
| | ಪ್ರಮಾಣ (ಕ್ವಿಂಟಾಲ್) | ಚೀಲಗಳ ಸಂಖ್ಯೆ | ಪ್ರಮಾಣ (ಕ್ವಿಂಟಾಲ್) | ಚೀಲಗಳ ಸಂಖ್ಯೆ | ಪ್ರಮಾಣ (ಕ್ವಿಂಟಾಲ್) | ಚೀಲಗಳ ಸಂಖ್ಯೆ | ಪ್ರಮಾಣ (ಕ್ವಿಂಟಾಲ್) | ಚೀಲಗಳ ಸಂಖ್ಯೆ | |
| ಅಕ್ಕಿ | 4.30 | 8 | 75 | 148 | 79.30 | 156 | 66.50 | 133 | 12.80 |
| ರಾಗಿ | 1.12 | 2 | 75 | 149 | 76.12 | 151 | 59.50 | 119 | 16.62 |
| **ಒಟ್ಟು** | **5.42** | **10** | **150** | **297** | **155.42** | **307** | **126.00** | **252** | **29.42** |

ಟಿಪ್ಪಣಿ: ಪ್ರತಿ ಚೀಲವೂ 50 ಕೆಜಿ ಆಹಾರಧಾನ್ಯವನ್ನು ತೂಗುತ್ತದೆ.

03 ಸೆಪ್ಟೆಂಬರ್ 2022ರಂದು ದಾಸ್ತಾನು ಪರಿಶೀಲನಾ ವರದಿಗೆ ಮೇಲುರುಜು ಮಾಡಲು ನ್ಯಾಯಬೆಲೆ ಅಂಗಡಿಗಳ ಪರವಾನಗಿದಾರರು ಲಭ್ಯವಿಲ್ಲದ ಕಾರಣ, 05 ಸೆಪ್ಟೆಂಬರ್ 2022ರಂದು ಪರವಾನಗಿದಾರರ ಉಪಸ್ಥಿತಿಯಲ್ಲಿ ಇಲಾಖೆಯ ಆಹಾರ ನಿರೀಕ್ಷಕರ ಜೊತೆಗೆ ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರಿಶೀಲನೆಯನ್ನು ನಡೆಸಿತು. 03 ಸೆಪ್ಟೆಂಬರ್ 2022ರಂದು ಗಮನಿಸಲಾದ ಕೊರತೆಗಳನ್ನು ಭರ್ತಿ ಮಾಡಿರುವುದನ್ನು/ಬದಲಾಯಿಸಿರುವುದನ್ನು ಮತ್ತು ಮಾರಾಟದ ಸರಕುಪಟ್ಟಿ ಪ್ರಕಾರ 155.42 ಕ್ವಿಂಟಾಲ್‌ಗಳ ಮುಕ್ತಾಯದ ಶಿಲ್ಕನ್ನು ಸರಿಪಡಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಇದು ನ್ಯಾಯಬೆಲೆ ಅಂಗಡಿಗಳ ಪರವಾನಿಗೆದಾರರು ಸ್ವೀಕರಿಸಿದ ದಾಸ್ತಾನನ್ನು ಮಾರ್ಗ ಪಲ್ಲಟ ಮಾಡಿ ಕಳಪೆ ಮಟ್ಟದ ಆಹಾರ ದಾನ್ಯಗಳಿಂದ ದಾಸ್ತಾನನ್ನು ಬದಲಾಯಿಸುತಿದ್ದರೆಂಬುದನ್ನು ಸೂಚಿಸುತ್ತದೆ ಮತ್ತು ಆಹಾರ ದಾನ್ಯಗಳ ಸೋರಿಕೆಯಾಗಿರುವುದನ್ನು ತಳ್ಳಿಹಾಕಲಾಗುವುದಿಲ್ಲ. ತಪಾಸಣೆಯ ಸಮಯದಲ್ಲಿ ಈ ಲೋಪದೋಷಗಳನ್ನು ಸಂಬಂಧಿತ ಆಹಾರ ನಿರೀಕ್ಷಕರು/ಆಹಾರ ಶಿರಸ್ತೇದಾರರು ಗಮನಿಸಿರಲಿಲ್ಲವಾಗಿ ಇಲಾಖೆಯು ಸರಿಪಡಿಸುವ ಕ್ರಮಗಳನ್ನು ಜಾರಿಗೊಳಿಸಲು ವಿಫಲವಾಗಿತ್ತು.

| 03–09–2022ರ ಸಾಕ್ಷಿ | 05–09–2022ರ ಸಾಕ್ಷಿ |
|---|---|













***ಶಿಫಾರಸು–4: ಇಲಾಖೆಯು ಆಗಾಗ್ಗೆ ತಪಾಸಣೆ ಕೈಗೊಳ್ಳಬೇಕು ಮತ್ತು FIST ಮಾಡ್ಯೂಲ್‌ಗಳಲ್ಲಿ ಸೂಚಿಸಲಾದ ದಾಸ್ತಾನಿಗೆ ಪ್ರತಿಯಾಗಿ ಆಹಾರ ಧಾನ್ಯಗಳ ಕೊರತೆ/ಹೆಚ್ಚಳವನ್ನು ಗಂಭೀರವಾಗಿ ಪರಿಗಣಿಸಿ ಪರವಾನಗಿ ನೀಡುವಾಗ ನಿಗದಿಪಡಿಸಿದ ಷರತ್ತುಗಳ ಪ್ರಕಾರ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಪರವಾನಗಿಯನ್ನು ರದ್ದುಗೊಳಿಸಬೇಕು.***

### *4.1.5 ಇತರೆ ಲೆಕ್ಕಪರಿಶೋಧನಾ ಅಂಶಗಳು*

● ***ತಿಂಗಳು ಪೂರ್ತಿ ಆಹಾರ ಧಾನ್ಯಗಳನ್ನು ವಿತರಿಸದಿರುವುದು*** : ನ್ಯಾಯಬೆಲೆ ಅಂಗಡಿಗಳಲ್ಲಿ ಒಂದು ಬಾರಿ ಬಯೋಮೆಟ್ರಿಕ್ ದೃಢೀಕರಣವನ್ನು ಬಳಸಿಕೊಂಡು ಒಂದು ತಿಂಗಳ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತದೆ. TPDS 2015ರ ಆದೇಶವನ್ನು ಉಲ್ಲಂಘಿಸಿ ಫಲಾನುಭವಿಗಳು ಎಲ್ಲಾ ಆಹಾರಧಾನ್ಯಗಳ ಹಂಚಿಕೆಯನ್ನು ಒಂದೇ ಬಾರಿಗೆ ಸಂಗ್ರಹಿಸಲು ಒತ್ತಾಯಿಸಲಾಗುತ್ತಿದೆ.

● ***ಶೂನ್ಯ ಶಿಲ್ಕು ಮತ್ತು ಋಣಾತ್ಮಕ ದಾಸ್ತಾನು ಶಿಲ್ಕು ಹೊಂದಿರುವ ಸರಕುಗಳಿಗೆ ಆಹಾರ ಧಾನ್ಯಗಳ ವಿತರಣೆಗಳು*** : ದಾಸ್ತಾನು ಶಿಲ್ಕು ಶೂನ್ಯಕ್ಕೆ ಇಳಿದರೂ ಸಹ ವ್ಯವಸ್ಥೆಯು ಆಹಾರ ಧಾನ್ಯಗಳ ಮತ್ತಷ್ಟು ವಿತರಣೆಯನ್ನು ಅನುಮತಿಸುವುದು ಆಹಾರ ಧಾನ್ಯಗಳ ತಪ್ಪಾದ ಲೆಕ್ಕವಿಡುವಲ್ಲಿ ಪರಿಣಮಿಸಿತು.

- ***ಫಲಾನುಭವಿಗಳಿಗೆ SMS ಸೂಚನೆ ನೀಡದಿರುವುದು*** : ಆಹಾರ ಧಾನ್ಯಗಳ ಹಂಚಿಕೆ, ಅರ್ಹತೆ ಮತ್ತು ವಿತರಣೆಯ ದೃಢೀಕರಣಕ್ಕಾಗಿ ಫಲಾನುಭವಿಗಳಿಗೆ SMS ಕಳುಹಿಸಿರಲಿಲ್ಲ.

- ***ನ್ಯಾಯಬೆಲೆ ಅಂಗಡಿಗಳ ಬಹು ಲಾಗಿನ್‌ಗಳು*** : ಸಮಸ್ಯೆಗಳನ್ನು ಹೆಚ್ಚಿಸುವ ಬಹು ಸಾಧನಗಳಲ್ಲಿ ಏಕಕಾಲದಲ್ಲಿ ಬಳಕೆದಾರ ಖಾತೆಯ ಲಾಗಿನ್‌ಅನ್ನು ಸಿಸ್ಟಮ್ ಸ್ವೀಕರಿಸುತ್ತಿತ್ತು.

ಅಸ್ತಿತ್ವದಲ್ಲಿರುವ ದಶಕದಷ್ಟು ಹಳೆಯ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯು ಹೆಚ್ಚುವರಿ ಉನ್ನತೀಕರಣವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವಾಗಿ ತಂತ್ರಜ್ಞಾನ ಅಪ್ಲಿಕೇಶನ್‌ಅನ್ನು ಉನ್ನತೀಕರಿಸುವ ಆಯವ್ಯಯ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ (ನವೆಂಬರ್ 2022) ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಏಪ್ರಿಲ್ 2023). ಇಲಾಖೆಯು ಸೆಂಟರ್ ಫಾರ್ ಇ-ಗವರ್ನೆನ್ಸ್ ನೊಂದಿಗೆ ಸಮಾಲೋಚಿಸಿ ಹೊಸ ಮಾಹಿತಿ ತಂತ್ರಜ್ಞಾನ ಅಪ್ಲಿಕೇಶನ್‌ಗಾಗಿ SRSಅನ್ನು ಸಿದ್ಧಪಡಿಸುತ್ತಿದೆ ಮತ್ತು ಅದು ಮೇಲಿನ ಸಮಸ್ಯೆಗಳನ್ನು ಬಗೆಹರಿಸುತ್ತದೆ.

- ***ಅನಧಿಕೃತ ಸ್ಥಳಗಳಲ್ಲಿ ಆಹಾರಧಾನ್ಯಗಳ ಸಂಗ್ರಹಣೆ*** : ಕರ್ನಾಟಕ TPDS ನಿಯಂತ್ರಣ ಆದೇಶ 2016ರ ಕಲಂ 4(3) (ನಮೂನೆ-ಬಿ) ಪ್ರಕಾರ ನ್ಯಾಯಬೆಲೆ ಅಂಗಡಿ ಮಾಲೀಕರು ಆಹಾರಧಾನ್ಯಗಳನ್ನು ಇಲಾಖೆಯು ನಿಗದಿಪಡಿಸಿದ ಅಧಿಕೃತವಾದ ಸ್ಥಳದಲ್ಲಿ ಮತ್ತು ವಿಳಾಸದಲ್ಲಿ ಮಾತ್ರ ಸಂಗ್ರಹಿಸಬೇಕು. ಮಂಡ್ಯ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಈ ನ್ಯಾಯಬೆಲೆ ಅಂಗಡಿಗಳು ವಿತರಣೆ ಮತ್ತು ಸಂಗ್ರಹಣೆಗಾಗಿ ಉಪ-ಕೇಂದ್ರಗಳನ್ನು ನಿರ್ವಹಿಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಉಪ-ಕೇಂದ್ರಗಳನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಸಂಪರ್ಕ ಮಾಡಲಾಗಿರಲಿಲ್ಲ ಅಥವಾ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಹೊಂದಿರಲಿಲ್ಲ (**ಅನುಬಂಧ-VII**).

ತಪ್ಪಿತಸ್ಥ ನ್ಯಾಯಬೆಲೆ ಅಂಗಡಿಗಳ ವಿರುದ್ಧ PDS ನಿಯಂತ್ರಣ ಆದೇಶದಡಿಯಲ್ಲಿ ಕ್ರಮ ಜರುಗಿಸಲಾಗುವುದು ಎಂದು ಸರ್ಕಾರವು ತಿಳಿಸಿತು.

- ***ತೂಕದ ಯಂತ್ರಗಳನ್ನು ಸರಿಪಡಿಸುವುದು ಮತ್ತು ಪ್ರಮಾಣೀಕರಿಸುವುದು*** : ಕರ್ನಾಟಕ ಕಾನೂನು ಮಾಪನಶಾಸ್ತ್ರ (ಜಾರಿ) ನಿಯಮ 2011ರ ನಿಯಮ 4(8)(ಸಿ) ಪ್ರಕಾರ, ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿನ ತೂಕದ ಯಂತ್ರವನ್ನು ಪ್ರತಿ ವರ್ಷ ಕಾನೂನು ಮಾಪನಶಾಸ್ತ್ರ ಇಲಾಖೆಯ ನಿರೀಕ್ಷಕರು ಪರಿಶೀಲಿಸಬೇಕು ಮತ್ತು ಉತ್ತಮವಾಗಿ ಸರಿಹೊಂದಿಸಬೇಕು. 24 ನ್ಯಾಯಬೆಲೆ ಅಂಗಡಿಗಳಲ್ಲಿ ಎಲೆಕ್ಟ್ರಾನಿಕ್ ತೂಕದ ಮಾಪಕಗಳು ಕಾನೂನು ಮಾಪನಶಾಸ್ತ್ರದ ಮುದ್ರೆಯನ್ನು ಹೊಂದಿಲ್ಲದಿರುವುದನ್ನು ಮತ್ತು 29 ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರಮಾಣಪತ್ರಗಳು ನವೀಕರಣವಾಗಿಲ್ಲದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಅವುಗಳ ಅನುಪಸ್ಥಿತಿಯಲ್ಲಿ ಫಲಾನುಭವಿಗಳಿಗೆ ವಿತರಿಸಲಾದ ಸರಕುಗಳ ಸರಿಯಾದ ತೂಕವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿರಲಿಲ್ಲ.

ರಾಜ್ಯಾದ್ಯಂತ ನ್ಯಾಯಬೆಲೆ ಅಂಗಡಿಗಳಲ್ಲಿರುವ ತೂಕದ ಯಂತ್ರಗಳನ್ನು ಪರಿಶೀಲಿಸಿ ಸರಿಹೊಂದಿಸಲು ಕಾನೂನು ಮಾಪನ ಶಾಸ್ತ್ರ ಇಲಾಖೆಗೆ ಸೂಚಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

● ***ಆಹಾರಧಾನ್ಯಗಳ ವಿಳಂಬಿತ ವಿತರಣೆ*** : ಭಾರತ ಸರ್ಕಾರದ TPDS ನಿಯಂತ್ರಣ ಆದೇಶ, 2015, ಕಲಂ 8(3)ರ ಪ್ರಕಾರ ರಾಜ್ಯ ಸರ್ಕಾರವು ಹಂಚಿಕೆ ತಿಂಗಳಿಗೆ ಮುಂಚಿನ ತಿಂಗಳ ಅಂತ್ಯದೊಳಗೆ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಗಳಿಗೆ ತಲುಪಿಸುವಂತೆ ಖಚಿತಪಡಿಸಬೇಕು ಮತ್ತು ವಿಳಂಬವಾದರೂ ಹಂಚಿಕೆ ತಿಂಗಳ ಮೊದಲ ವಾರದೊಳಗೆ ವಿತರಣೆ ಮಾಡಬೇಕು. ಪರೀಕ್ಷಾರ್ಥ–ತನಿಖೆ ನಡೆಸಿದ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಸಂಬಂಧಿತ WSD ಗಳಿಂದ ಆಹಾರ ಧಾನ್ಯಗಳನ್ನು ಎತ್ತುವಿಕೆಯು ಹಂಚಿಕೆಯ ತಿಂಗಳಿನ ಎರಡನೇ ವಾರದ ಕೊನೆಯಲ್ಲಿಯೂ ಮುಂದುವರೆದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಲ್ಲದೆ, ಆಹಾರ ಧಾನ್ಯಗಳನ್ನು ಫಲಾನುಭವಿಗಳಿಗೆ ಹಂಚಿಕೆ ತಿಂಗಳ 10ನೆಯ ತಾರೀಖಿನಿಂದ ಮಾತ್ರ ವಿತರಿಸಲಾಗುತ್ತಿತ್ತು ಮತ್ತು ಇದರಿಂದ ಸೇವೆಯಲ್ಲಿ ವಿಳಂಬವಾಗುತ್ತಿತ್ತು.

ಈ ನಿಟ್ಟಿನಲ್ಲಿ WSD ಗಳಿಗೆ ಮತ್ತು PDS ಸಾಗಣೆದಾರರಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

● ***ಕಾರ್ಯ ನಿರ್ವಹಣೆಯ ಸಮಯದಲ್ಲಿ ಮುಚ್ಚಿದ್ದ ನ್ಯಾಯಬೆಲೆ ಅಂಗಡಿಗಳು :*** ನ್ಯಾಯಬೆಲೆ ಅಂಗಡಿಗಳು ಬೆಳಗ್ಗೆ 8.00ರಿಂದ ಮಧ್ಯಾಹ್ನ 12.00 ಘಂಟೆಯವರೆಗೆ ಮತ್ತು ಸಾಯಂಕಾಲ 4.00ರಿಂದ 8.00 ಘಂಟೆಯವರೆಗೆ (ಮಂಗಳವಾರ ಹೊರತುಪಡಿಸಿ) ತೆರೆದಿರಬೇಕು. ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ 13 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಣೆಯ ಅವಧಿಯಲ್ಲಿ ಮುಚ್ಚಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರಿಂದ ನಿಗದಿತ ಅವಧಿಯಲ್ಲಿ ಸಾರ್ವಜನಿಕ ವಿತರಣೆಯನ್ನು ನಿರಾಕರಿಸಿದಂತಾಯಿತು.

● ***ನ್ಯಾಯಬೆಲೆ ಅಂಗಡಿಗಳ ಜಿಯೋ ನಿರ್ದೇಶಾಂಕಗಳ ತಪ್ಪಾದ ಇಂದೀಕರಣ :*** ನ್ಯಾಯಬೆಲೆ ಅಂಗಡಿಗಳ ಮತ್ತು WSD ಗಳ ಜಿಯೋ ನಿರ್ದೇಶಾಂಕಗಳ (ಆಹಾರ ಪೋರ್ಟಲ್) ನಿಖರತೆಯ ಪರೀಕ್ಷಾರ್ಥ–ತನಿಖೆಯು 96 ರಲ್ಲಿ 14 ನ್ಯಾಯಬೆಲೆ ಅಂಗಡಿಗಳನ್ನು ತಪ್ಪಾಗಿ ಜಿಯೋ–ಟ್ಯಾಗ್ ಮಾಡಲಾಗಿತ್ತು **(ಅನುಬಂಧ–VIIIಎ)**. 21 ನ್ಯಾಯಬೆಲೆ ಅಂಗಡಿಗಳನ್ನು 12.9952 ಅಕ್ಷಾಂಶ/77.6572 ರೇಖಾಂಶಕ್ಕೆ ಜಿಯೋಟ್ಯಾಗ್ ಮಾಡಲಾಯಿತು ಮತ್ತು 2 ನ್ಯಾಯಬೆಲೆ ಅಂಗಡಿಗಳನ್ನು 13.0075 ಅಕ್ಷಾಂಶ/77.6983 ರೇಖಾಂಶಕ್ಕೆ ಜಿಯೋಟ್ಯಾಗ್ ಮಾಡಿರುವುದನ್ನು **(ಅನುಬಂಧ–VIIIಬಿ)** ಗಮನಿಸಲಾಯಿತು.

● ***ಸರ್ವರ್ ಸಮಸ್ಯೆಗಳಿಂದಾಗಿ ಆಹಾರ ಧಾನ್ಯಗಳ ವಿತರಣೆಯಲ್ಲಿ ವಿಳಂಬ :*** 96ರಲ್ಲಿ 14 ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಡೌನ್ ಸಮಸ್ಯೆಗಳಿಂದ ಆಹಾರ ಧಾನ್ಯಗಳ ವಿತರಣೆಗೆ ಅಡ್ಡಿಯಾಗಿರುವುದನ್ನು ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಸಿಸ್ಟಮ್ ದಾಸ್ತಾನಿನೊಂದಿಗೆ ಭೌತಿಕ ದಾಸ್ತಾನನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ.

● FSSAI ಮಾರ್ಗಸೂಚಿಗಳು, 2017ರ ಕಲಂ 2.2 (ಇ)ರ ನಿಬಂಧನೆಗಳಿಗೆ ಪ್ರತಿಯಾಗಿ ನಾಲ್ಕು ನ್ಯಾಯಬೆಲೆ ಅಂಗಡಿಗಳಲ್ಲಿ ಕಲ್ನಾರಿನ ಛಾವಣಿ ಇರುವುದನ್ನು ಗಮನಿಸಲಾಯಿತು, ಇದರಿಂದ ಆಹಾರಧಾನ್ಯಗಳು ಕಲುಷಿತಗೊಳ್ಳುವ ಸಂಭಾವ್ಯತೆಯಿದ್ದಿತು.

- ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ, ಪರೀಕ್ಷಾರ್ಥ–ತನಿಖೆ ನಡೆಸಿದ 96 ನ್ಯಾಯಬೆಲೆ ಅಂಗಡಿಗಳಲ್ಲಿ (TPDS ನಿಯಂತ್ರಣ ಆದೇಶದ ಕಲಂ7(7) ಮತ್ತು 10(4)) ಕಡ್ಡಾಯವಾದ ಮಾಹಿತಿಯನ್ನು ಪ್ರದರ್ಶಿಸಿರಲಿಲ್ಲ.

**ಕೋಷ್ಟಕ–14: ಕಡ್ಡಾಯವಾದ ಮಾಹಿತಿಯನ್ನು ಪ್ರದರ್ಶಿಸದಿರುವ ನ್ಯಾಯಬೆಲೆ ಅಂಗಡಿಗಳ ವಿವರಗಳು**

| ಕ್ರಮ ಸಂಖ್ಯೆ | ಪ್ರದರ್ಶಿಸದಿರುವ ಮಾಹಿತಿಯ ವಿವರ | ಮಾಹಿತಿಯನ್ನು ಪ್ರದರ್ಶಿಸದಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ |
|---|---|---|
| 1 | (ಎ)/(ಬಿ) ನೀಡುವ ಪ್ರಮಾಣ (ಹಕ್ಕು) | 76 |
| 2 | (ಡಿ) ಬಾಗಿಲು ತೆಗೆಯುವ ಮತ್ತು ಮುಚ್ಚುವ ಸಮಯ | 46 |
| 3 | (ಇ) ತಿಂಗಳಿನಲ್ಲಿ ಸ್ವೀಕರಿಸಿದ ಆಹಾರಧಾನ್ಯ ದಾಸ್ತಾನು | 73 |
| 4 | (ಎಫ್) ಪ್ರಾರಂಭಿಕ ಮತ್ತು ಮುಕ್ತಾಯದ ದಾಸ್ತಾನು | 83 |
| 5 | ಆಹಾರಧಾನ್ಯಗಳ ಮಾದರಿಗಳು | 58 |

ಆಧಾರ: ಜಂಟಿ ಭೌತಿಕ ಪರಿಶೀಲನೆ

ಇಲಾಖೆಯು ನ್ಯಾಯಬೆಲೆ ಅಂಗಡಿಗಳಲ್ಲಿ ಹೊಸ ಮಾಹಿತಿ ಫಲಕಗಳನ್ನು ಸ್ಥಾಪಿಸುವ ಪ್ರಕ್ರಿಯೆ ಪ್ರಾರಂಭಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

***ಶಿಫಾರಸು–5:** ರಾಜ್ಯ ಸರ್ಕಾರವು ನಿಯಂತ್ರಣ ಆದೇಶದಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಮತ್ತು ಸದೃಢವಾದ ದಾಸ್ತಾನಿನ ಲೆಕ್ಕವಿಡುವುದಕ್ಕೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಬಲಪಡಿಸಬೇಕು. ಅಲ್ಲದೆ, ಕರ್ನಾಟಕ ಕಾನೂನು ಮಾಪನಶಾಸ್ತ್ರ (ಜಾರಿ) ನಿಯಮಗಳು 2011 ರಡಿಯಲ್ಲಿ ಅಗತ್ಯವಿರುವಂತೆ ತೂಕದ ಮಾಪಕಗಳನ್ನು ಸರಿಪಡಿಸಲಾಗಿದೆ ಎಂಬುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು.*

# ಅಧ್ಯಾಯ-V :
# ಆಂತರಿಕ ನಿಯಂತ್ರಣ

## ಅಧ್ಯಾಯ–V : ಆಂತರಿಕ ನಿಯಂತ್ರಣ ವ್ಯವಸ್ಥೆಗಳು

*WSD ಯ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ದಾಸ್ತಾನನ್ನು ತೂಕ ಮಾಡುವ ಅಭ್ಯಾಸ ಅನುಪಸ್ಥಿತಿಯಿದ್ದಿತು. ನಿಗದಿತ ಕಾರ್ಯನಿಯಮ ಪ್ರಕಾರ ಆಹಾರ ನಿರೀಕ್ಷಕರು, ಆಹಾರ ಶಿರಸ್ತೇದಾರ್ ಮತ್ತು ಉಪನಿರ್ದೇಶಕರು ಅಗತ್ಯವಾದ ಕಡ್ಡಾಯ ತಪಾಸಣೆಗಳನ್ನು ಮಾಡಿರಲಿಲ್ಲ. WSD ಯ ಭೌತಿಕ ದಾಸ್ತಾನಿನ ಸಮನ್ವಯವನ್ನು ಕೈಗೊಂಡಿರಲಿಲ್ಲ ಮತ್ತು ಈ WSD ಗಳು ಸೂಕ್ತವಾದ ಗುಣಮಟ್ಟ ನಿಯಂತ್ರಣಗಳ ಕೊರತೆಯೊಂದಿಗೆ ಮಾನ್ಯತೆಯಿರದ ಪರವಾನಗಿಗಳೊಂದಿಗೆ ಕಾರ್ಯ ನಿರ್ವಹಿಸುವುದನ್ನು ಮುಂದುವರೆಸಿದ್ದವು.*

*ನ್ಯಾಯಬೆಲೆ ಅಂಗಡಿಗಳ ಮಟ್ಟದಲ್ಲಿ ತಪಾಸಣೆಯಲ್ಲಿ ಕೊರತೆಯನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಂಡಿರಲಿಲ್ಲ. ಅನೇಕ ಜಿಲ್ಲೆಗಳಲ್ಲಿ ಜಾಗೃತಿ ಸಮಿತಿಗಳನ್ನು ರಚಿಸಿರಲಿಲ್ಲ ಮತ್ತು ನಿಗದಿತ ಸಭೆಗಳನ್ನು ನಡೆಸಿರಲಿಲ್ಲ.*

ಆಂತರಿಕ ನಿಯಂತ್ರಣವು ಒಂದು ಸಂಸ್ಥೆಯ ಆಡಳಿತ ಮಂಡಳಿಯಿಂದ ಕಾರ್ಯಗತಗೊಳಿಸಲಾದ ಒಂದು ಪ್ರಕ್ರಿಯೆಯಾಗಿದ್ದು ಅನ್ವಯವಾಗುವ ಕಾನೂನುಗಳು, ನಿಯಮಗಳು, ಒಪ್ಪಂದಗಳು, ನೀತಿಗಳು ಮತ್ತು ನಿರ್ವಹಣೆಯ ಕಾರ್ಯವಿಧಾನಗಳು ವಿಶ್ವಾಸಾರ್ಹ, ನಿಖರ ಮತ್ತು ಸಮಯೋಚಿತವಾಗಿದೆ ಎಂದು ಸಮಂಜಸವಾದ ಭರವಸೆ ನೀಡುವಂತೆ ರೂಪಿಸಲಾಗಿರುತ್ತದೆ.

**ನಕ್ಷೆ–7: TPDS ನಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ**

**TPDS (ಕರ್ನಾಟಕ) ನಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ತೋರಿಸುವ ನಕ್ಷೆ**




ಆಧಾರ: ಲೆಕ್ಕಪರಿಶೋಧನಾ ವಿಶ್ಲೇಷಣೆಯ ಚಿತ್ರಾತ್ಮಕ ನಿರೂಪಣೆ

ದಾಖಲೆಗಳ ಪರಿಶೀಲನೆಯಲ್ಲಿ TPDS ಅನುಷ್ಠಾನಕ್ಕೆ ಸಂಬಂಧಿಸಿದ ಈ ಕೆಳಗಿನ ಅವಲೋಕನಗಳನ್ನು ಮಾಡಲಾಗಿದೆ:

## 5.1 ಸರಬರಾಜು ವ್ಯವಸ್ಥೆಯ ಮೇಲ್ವಿಚಾರಣೆಯಲ್ಲಿ ಪರಿಣಾಮಕಾರಿಯಲ್ಲದ ಮಾಹಿತಿ ತಂತ್ರಜ್ಞಾನದ ಬೆಂಬಲ (FIST ಮಾಡ್ಯೂಲ್)

TPDS ನಿಯಂತ್ರಣ ಆದೇಶ 2015ರ ಷರತ್ತು 11(15) ಮತ್ತು ಎಂಡ್ ಟು ಎಂಡ್ ಮಾರ್ಗಸೂಚಿಗಳು, 2013, ಘಟಕ–I ರ ಪ್ರಕಾರ ಜಿಲ್ಲಾ ಮಟ್ಟದ ಅಧಿಕಾರಿಗಳು TPDS ಕಾರ್ಯಾಚರಣೆಗಳ ಮೇಲ್ವಿಚಾರಣೆಯನ್ನು ಮಾಡಬೇಕಾಗಿತ್ತು. 10 ವರದಿ ಮಾಡ್ಯೂಲ್‌ಗಳಲ್ಲಿ ಆರು ಮಾಡ್ಯೂಲ್‌ಗಳು ಆಯಾ DD/DM/WSD ಗಳ ಲಾಗಿನ್‌ಗಳೊಂದಿಗೆ ಸ್ವಯಂಚಾಲಿತವಾಗಿರಲಿಲ್ಲ, ಎರಡು ಮಾಡ್ಯೂಲ್‌ಗಳು ಭಾಗಶಃ ಸ್ವಯಂಚಾಲಿತವಾಗಿದ್ದವು ಮತ್ತು ಒಂದು ವರದಿ ಸ್ವಯಂಚಾಲಿತವಾಗಿತ್ತು ಮತ್ತು ಇನ್ನೊಂದು ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಸ್ವಯಂಚಾಲಿತವಾಗಿರಲಿಲ್ಲ ಎಂಬುದನ್ನು FIST ಮಾಡ್ಯೂಲ್‌ನ ಪರಿಶೀಲನೆಯಲ್ಲಿ ಗಮನಿಸಲಾಯಿತು.

ಸರಬರಾಜು ವ್ಯವಸ್ಥೆಯ ಆದ್ಯಂತ ಕ್ರಮಾನುಗತ ಮೇಲ್ವಿಚಾರಣೆ ಮತ್ತು ತಪಾಸಣೆ ನಿಯಂತ್ರಣಗಳಿಗೆ FIST ಮಾಡ್ಯೂಲ್ ಯಾವುದೇ ಪ್ರವೇಶವನ್ನು ಒದಗಿಸಿರಲಿಲ್ಲ. ಇದಲ್ಲದೆ, ಡ್ರಾಪ್–ಡೌನ್ ಬಾಕ್ಸ್ ಆಯ್ಕೆಗಳ ಬದಲಿಗೆ ಗುತ್ತಿಗೆದಾರರು ಸಲ್ಲಿಸಿದ ವಾಹನಗಳ ಪಟ್ಟಿಯನ್ನು ಹೊರತುಪಡಿಸಿ ಅನಧಿಕೃತ ವಾಹನಗಳನ್ನು ಸಾಗಿಸಲು 'FIST' ಅನುವು ಮಾಡಿಕೊಡುತ್ತದೆ, ಇದರಲ್ಲಿ, ಮೇಲೆ ಚರ್ಚಿಸಿದಂತೆ, ಗುತ್ತಿಗೆದಾರರು ಅನಧಿಕೃತ ವಾಹನಗಳ ಬಳಕೆಯನ್ನು ಮಾಡಿದ್ದರು. ನೈಜ ಸಮಯದ ದತ್ತಾಂಶದ ಅನುಪಸ್ಥಿತಿಯು ಶೇಖರಣಾ/ವಿತರಣಾ ಕೇಂದ್ರಗಳಲ್ಲಿ (WSD ಹಾಗೂ ನ್ಯಾಯಬೆಲೆ ಅಂಗಡಿ) ಆಹಾರಧಾನ್ಯಗಳನ್ನು ಪತ್ತೆ/ಟ್ರ್ಯಾಕಿಂಗ್ ಮಾಡದಿರುವುದಕ್ಕೆ ಕಾರಣವಾಗಿ ಅದರ ಪರಿಣಾಮವಾಗಿ, ಹಿಂದಿನ ಕಂಡಿಕೆಗಳಲ್ಲಿ ತಿಳಿಸಿರುವಂತೆ, ಆಹಾರಧಾನ್ಯಗಳನ್ನು ಅವುಗಳ ಸಾಗಣೆಯ ಸಮಯದಲ್ಲಿ ಮಾರ್ಗಪಲ್ಲಟ ಮಾಡಲಾಗಿತ್ತು.

FIST ಮಾಡ್ಯೂಲನ್ನು ಸರಳವಾದ ಪಡಿತರ ಚೀಟಿ ನಿರ್ವಹಣಾ ವ್ಯವಸ್ಥೆಯಾಗಿ ಆನುವಂಶಿಕವಾಗಿ ಪಡೆದುಕೊಳ್ಳಲಾಗಿದೆ ಆದರೆ ಪುನರಾವರ್ತಿತ ವರ್ಧನೆಗಳಿಂದಾಗಿ, ಮಾಡ್ಯೂಲ್ ನಿಧಾನಗತಿಯ ಕಾರ್ಯಕ್ಷಮತೆಯ ಉದ್ಯಮ ಮಟ್ಟದ ಅಪ್ಲಿಕೇಶನ್ ಆಗಿ ಮಾರ್ಪಟ್ಟಿದೆ ಹಾಗೂ ಇಂದೀಕರಣವು ಪ್ರಕ್ರಿಯೆಯಲ್ಲಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

## 5.2 WSD ಗಳನ್ನು FIST ಮಾಡ್ಯೂಲ್‌ಗೆ ಮ್ಯಾಪ್ ಮಾಡದಿರುವುದು

ಮೇಲ್ವಿಚಾರಣಾ ಉದ್ದೇಶಗಳಿಗಾಗಿ ಅಧಿಕೃತ WSD ಗಳನ್ನು FIST ಮಾಡ್ಯೂಲ್ ಅಡಿಯಲ್ಲಿ ಮ್ಯಾಪ್ ಮಾಡಬೇಕಾಗಿತ್ತು. FIST ಮಾಡ್ಯೂಲ್‌ನಲ್ಲಿ ಮ್ಯಾಪ್ ಮಾಡದ ಕೆಳಗಿನ ಅನಧಿಕೃತ KFCSC WSD ಗಳನ್ನು ಸಂಗ್ರಹಣಾ ಮತ್ತು ವಿತರಣಾ ಉದ್ದೇಶಗಳಿಗಾಗಿ ಕಾರ್ಯಾಚರಣೆ ಮಾಡಲಾಗುತ್ತಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ–15: ಮ್ಯಾಪ್ ಮಾಡದ WSD ಗಳ ಕಾರ್ಯಾಚರಣೆ**

| ಕ್ರಮ ಸಂಖ್ಯೆ | ಜಿಲ್ಲೆ/ವಲಯ | ಕಾರ್ಯಾಚರಣೆ ನಡೆಸುತ್ತಿರುವ KFCSC WSD ಗಳ ಒಟ್ಟು ಸಂಖ್ಯೆ[10] | ಆಹಾರ/ FIST ಪ್ರಕಾರ ಅಸ್ತಿತ್ವದಲ್ಲಿರುವ KFCSC WSD ಗಳ ಒಟ್ಟು ಸಂಖ್ಯೆ | ಅನಧಿಕೃತ WSD ಗಳು |
|---|---|---|---|---|
| 1 | ಬೀದರ್ | 13 | 6 | 7 |
| 2 | ಗದಗ್ | 18 | 8 | 10 |
| 3 | ರಾಯಚೂರು | 29 | 5 | 24 |
| 4 | ವಿಜಯಪುರ | 29 | 10 | 19 |
| | **ಒಟ್ಟು** | **89** | **29** | **60** |

FIST ಮಾಡ್ಯೂಲ್‌ಗೆ ಬಹು ಶೇಖರಣಾ ಉಪ ಸಂಗ್ರಹ ಸ್ಥಳಗಳು ಮ್ಯಾಪಿಂಗ್ ಮಾಡದಿರುವುದು ಮಾರ್ಗಪಲ್ಲಟ, ಕಳ್ಳತನ ಅಥವಾ ನಷ್ಟ ಮುಂತಾದವುಗಳ ಅಪಾಯದಿಂದ ಕೂಡಿತ್ತು. ಇದಲ್ಲದೆ, ಅನಧಿಕೃತ WSD ಗಳನ್ನು ಪೋರ್ಟಲ್‌ಗೆ ಮ್ಯಾಪ್ ಮಾಡದ ಕಾರಣ ಆಹಾರ ಪರಿವೀಕ್ಷಕರು/ಆಹಾರ ಶಿರಸ್ತೇದಾರರು ಅವುಗಳನ್ನು ಪರಿಶೀಲಿಸಲಾಗಲಿಲ್ಲ.

ಸರ್ಕಾರವು ಈ ವಿಷಯದ ಮೇಲೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## 5.3 ಸಂಗ್ರಹಣಾ ಮತ್ತು ನಿರ್ವಹಣಾ ನಷ್ಟಗಳನ್ನು ಲೆಕ್ಕವಿಡದಿರುವುದು

ಗೋಣಿ ಚೀಲಗಳಿಗೆ ಕೊಕ್ಕೆಗಳು ಮತ್ತು ಪೋಕರ್‌ಗಳ ಬಳಕೆ, ತೇವಾಂಶದ ವ್ಯತ್ಯಾಸ, ಸೋರಿಕೆ, ಹರಿದ ಆಹಾರ ಚೀಲಗಳು, ಕೀಟಗಳ ಮುತ್ತಿಕೊಳ್ಳುವಿಕೆ ಇತ್ಯಾದಿಗಳನ್ನು ಒಳಗೊಂಡಂತೆ ವಿವಿಧ ರೀತಿಯ ನಿರ್ವಹಣಾ ನಷ್ಟಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಪ್ರದರ್ಶಿಕೆ–8: ನಿರ್ವಹಣಾ ಕಾರ್ಯಾಚರಣೆಯಲ್ಲಿ ಆಹಾರಧಾನ್ಯಗಳ ಸೋರಿಕೆ**




*ರಾಗಿ ಚೆಲ್ಲಿರುವುದು–RAPCMS, ಮಂಡ್ಯ*




*ರಾಗಿ ಚೆಲ್ಲಿರುವುದು –KFCSC, ಬನಶಂಕರಿ*

[10] PDS ನೊಂದಿಗೆ ಸಂಬಂಧವಿರುವ KFCSC WSD ಗಳನ್ನು ಪರಿಗಣಿಸಲಾಗಿದೆ.

ಶೇಕಡಾ 0.5ರಷ್ಟು ಪ್ರಮಾಣವನ್ನು ಶೇಖರಣಾ ನಷ್ಟವಾಗಿ ಪರಿಗಣಿಸಿ ಭಾರತ ಆಹಾರ ನಿಗಮ ಅಳವಡಿಸಿಕೊಂಡಂತೆ ಶೇಖರಣೆ ಮತ್ತು ಸಾಗಣೆ ನಷ್ಟಗಳನ್ನು ಲೆಕ್ಕವಿಡಲು ಸಮಂಜಸವಾದ ಮಿತಿಗಳೊಂದಿಗೆ ಆಹಾರಧಾನ್ಯ ನಿರ್ವಹಣಾ ನಷ್ಟಗಳಿಗೆ ಇಲಾಖೆಯು ಯಾವುದೇ ಮಾನದಂಡಗಳನ್ನು ನಿಗದಿಪಡಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಭಾರತ ಆಹಾರ ನಿಗಮದ ಕಾರ್ಯಾಚರಣೆಗಳಲ್ಲಿ ಗಮನಿಸಿದಂತೆ, ರಾಜ್ಯವು ಶೇಖರಣಾ ನಷ್ಟದ ಲೆಕ್ಕವಿಡುವಿಕೆಯನ್ನು ಪರಿಗಣಿಸಲಾಗದ ಕಾರಣದಿಂದ ಎಲ್ಲಾ ಕಾರ್ಯಾಚರಣೆಗಳನ್ನು ಪೂರ್ಣ ದಕ್ಷತೆಯೊಂದಿಗೆ ದಾಖಲಿಸಲಾಗಿದೆ. ನಷ್ಟಗಳನ್ನು ಲೆಕ್ಕವಿಡುವಿಕೆಯ ಅನುಪಸ್ಥಿತಿಯಲ್ಲಿ, ಆಹಾರ ವಿತರಣಾ ಪ್ರಕ್ರಿಯೆಯಲ್ಲಿ ಸಂಗ್ರಹಣೆ/ಸಾರಿಗೆ ನಷ್ಟ ಮತ್ತು ಅದರ ಲೆಕ್ಕವಿಡುವಿಕೆಯನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಇದಲ್ಲದೆ, ಪರೀಕ್ಷಾರ್ಥ–ತನಿಖೆ ನಡೆಸಿದ 96ರಲ್ಲಿ 55 ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರಧಾನ್ಯಗಳ ಸಂಗ್ರಹಣೆಗೆ ನೆಲದ ಮೇಲೆ ಟಾರ್ಪಾಲಿನ್ ಶೀಟ್‌ಗಳನ್ನು ಬಳಸಿರಲಿಲ್ಲ. ಇತರೆ ನ್ಯಾಯಬೆಲೆ ಅಂಗಡಿಗಳಲ್ಲಿ ಟಾರ್ಪಾಲಿನ್ ಶೀಟ್‌ಗಳನ್ನು ಬಳಸಲಾಗಿದ್ದರೂ, ಅಸಮರ್ಪಕ ನಿರ್ವಹಣೆಯಿಂದ ಮಿಶ್ರಣವಾದ ಆಹಾರ ಧಾನ್ಯಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಲಿಲ್ಲ.

ಭಾರತ ಸರ್ಕಾರದ DFPD ಯು ಭಾರತ ಆಹಾರ ನಿಗಮಕ್ಕೆ ಸಂಗ್ರಹಣೆ ಮತ್ತು ಸಾಗಾಣಿಕೆಯಿಂದಾಗುವ ನಷ್ಟಕ್ಕೆ ಅನುಮೋದನೆ ನೀಡಿತ್ತು. ಆದರೆ, ಅದನ್ನು ರಾಜ್ಯದೊಳಗಿನ ಸಂಗ್ರಹಣೆ ಮತ್ತು ಸಾರಿಗೆಗಾಗಿ ರಾಜ್ಯಗಳು/ಕೇಂದ್ರಶಾಸಿತ ಪ್ರದೇಶಗಳಿಗೆ ವಿಸ್ತರಿಸಲಾಗಿಲ್ಲ ಮತ್ತು ಅಂತಹ ನಷ್ಟಗಳನ್ನು ಲೆಕ್ಕವಿಡಲು ಅವಶ್ಯಕ ಅನುಮೋದನೆಗಳನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

WSD ಗಳಲ್ಲಿ ತೂಕದ ಸೇತುವೆಗಳು ಲಭ್ಯವಿರಲಿಲ್ಲ ಅಥವಾ ದಾಸ್ತಾನು ಒಳಬರುವ/ಹೊರಹೋಗುವ ಚಲಾನ್‌ಗಳು (ತೂಕದ ಚೀಟಿಗಳು) ಲಭ್ಯವಿರದಿದ್ದರಿಂದ WSD ಗಳಿಂದ ಸ್ವೀಕರಿಸಲ್ಪಟ್ಟ ಮತ್ತು ವಿತರಿಸಲಾದ ಸರಕುಗಳ ಪ್ರಮಾಣಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಈ ತೂಕ ನಿಯಂತ್ರಣಗಳ ಅನುಪಸ್ಥಿತಿಯಲ್ಲಿ, ಸರಕುಗಳ ಸಂಪೂರ್ಣ ಸರಬರಾಜು ವ್ಯವಸ್ಥೆಯನ್ನು ಕೀಟಗಳ ಆಕ್ರಮಣಗಳು ಮತ್ತು ಇತರ ನಿರ್ವಹಣಾ ನಷ್ಟಗಳ ಹೊರತಾಗಿಯೂ ಯಾವುದೇ ತೂಕದ ನಷ್ಟವಿಲ್ಲದೇ ಸಂಪೂರ್ಣ ದಕ್ಷತೆಯೊಂದಿಗೆ ಚಾಲನೆಯಲ್ಲಿತ್ತು ಎಂಬುದಾಗಿ ತೋರಿಸಲಾಗಿತ್ತು. ಇದು ಸಂಶಯಾಸ್ಪದವಾಗಿದ್ದು ದುರ್ಬಲ ದಾಸ್ತಾನು ಲೆಕ್ಕಪತ್ರ ನಿರ್ವಹಣೆಯನ್ನು ಸೂಚಿಸುತಿತ್ತು.

KFCSC ಯ ಸಗಟು ಡಿಪೋಗಳಲ್ಲಿ ತೂಕದ ಸೇತುವೆಗಳ ಅಳವಡಿಕೆಗೆ ಆಯವ್ಯಯ ಅನುಮೋದನೆಯನ್ನು ಹಣಕಾಸು ಇಲಾಖೆಯಿಂದ ನಿರೀಕ್ಷಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

## 5.4 WSD ಸ್ಥಳದಲ್ಲಿ ಅಧಿಕ ಹೊರೆ ಹೊತ್ತ ವಾಹನಗಳು

ಮೋಟಾರು ವಾಹನ ಕಾಯಿದೆ 1988ರ ಸೆಕ್ಷನ್ 114ರ ಪ್ರಕಾರ, ವಾಹನಗಳು ಅಧಿಕ ಹೊರೆ ಹೊತ್ತಿರುವುದು ಕಂಡುಬಂದರೆ, ವಾಹನಗಳನ್ನು ಮುಂದೆ ಸಾಗಲು ಅನುಮತಿಸುವ ಮೊದಲು ವಾಹನದ ಚಾಲಕ/ಮಾಲೀಕರಿಗೆ ದಂಡ ಮತ್ತು ಸುಸ್ತಿ ದಂಡ ವಿಧಿಸುವುದರ ಜೊತೆಗೆ ಅಧಿಕ ಹೊರೆಯನ್ನು ತೆಗೆಸಬೇಕಾಗುತ್ತದೆ. ಸಗಟು ಸಾಗಣೆದಾರರು ಕೆಳಗೆ ವಿವರಿಸಿದಂತೆ ನಿಗದಿತ ಹೊರೆ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಸಾಗಿಸುತ್ತಿದ್ದರು ಎಂಬುದು KFCSC ಯ FIST ಮಾಡ್ಯೂಲ್ ಪರಿಶೀಲನೆಯಿಂದ ತಿಳಿದುಬಂದಿತು.

ಸಾರಿಗೆ ವಾಹನಗಳಿಗೆ ಪರಿಷ್ಕೃತ ಸುರಕ್ಷಿತ ಆಕ್ಸಲ್ ಲೋಡ್ ಮಿತಿಗಳು (MORTH) ಪ್ರಕಾರ ಹತ್ತು–ಚಕ್ರದ ಟ್ರಕ್‌ಗೆ ಗರಿಷ್ಠ ಆಕ್ಸಲ್ ತೂಕ (ಮೂರು ಆಕ್ಸಲ್ ರಿಜಿಡ್ ಟ್ರಕ್, ಮುಂಭಾಗದ ಆಕ್ಸಲ್‌ನಲ್ಲಿ ಎರಡು ಟೈರ್‌ಗಳು, ಹಿಂಭಾಗದ ಟಂಡೆಮ್‌ನಲ್ಲಿ ಎಂಟು ಟೈರ್‌ಗಳು (ಎರಡು) ಆಕ್ಸಲ್) ಅನುಮತಿಸುವ ಗರಿಷ್ಠ ಒಟ್ಟು ವಾಹನ ತೂಕ 28.5 ಟನ್‌ಗಳು. ಆದ್ದರಿಂದ ಅನುಮತಿಸುವ ಸಾಮರ್ಥ್ಯವು 19.5–20.5 ಟನ್‌ಗಳು ಆಗಿರುತ್ತದೆ (ವಾಹನ ನಿರ್ಮಾಣದ ಪ್ರಕಾರವನ್ನು ಆಧರಿಸಿ ಸುಮಾರು 8–10 ಟನ್‌ಗಳಷ್ಟು ವಾಹನದ ತೂಕ).

ಮಾರ್ಚ್ 2022ರಲ್ಲಿ 21 ಮೆಟ್ರಿಕ್ ಟನ್‌ಗಿಂತ ಅಧಿಕ ಹೊರೆ ಹೊತ್ತ ವಾಹನ ಸಂಚರಣೆಗಳ ಸಂಖ್ಯೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–16: ಅಧಿಕ ಹೊರೆ ಹೊತ್ತ ವಾಹನ ಸಂಚರಣೆಗಳ ವಿವರ**

| ಜಿಲ್ಲೆ | ಒಟ್ಟು ಸಂಚರಣೆಗಳು | ಅಧಿಕ ಹೊರೆ ಹೊತ್ತ ವಾಹನ ಸಂಚರಣೆಗಳ ಸಂಖ್ಯೆ |
|---|---:|---:|
| ಬೀದರ್ | 105 | 99 |
| ಮಂಡ್ಯ | 170 | 154 |
| ರಾಯಚೂರು | 82 | 76 |
| ಕೊಡಗು | 51 | 34 |
| **ಒಟ್ಟು** | **408** | **363** |

ಮೇಲಿನಿಂದ ಗಮನಿಸಬಹುದಾದಂತೆ ಸಾಗಣೆದಾರರು ಮಾಡಿದ ಶೇಕಡಾ 89ರಷ್ಟು ಸಂಚರಣೆಗಳು ಅಧಿಕ ಹೊರೆ ಆಗಿದ್ದವು. ಹೊರೆ ಮಾಡಿದ ಆಹಾರಧಾನ್ಯಗಳ ಪ್ರಮಾಣವನ್ನು ಮೇಲ್ವಿಚಾರಣೆ ಮಾಡಲು ಇಲಾಖೆಯು ವಿಫಲವಾಗಿತ್ತು ಮತ್ತು ಅವುಗಳ ಸಾಮರ್ಥ್ಯವನ್ನು ಮೀರಿ ವಿತರಣೆ ಮಾಡಿದ್ದು ಸಾಗಣೆದಾರರಿಗೆ ಉಳಿತಾಯ ಮತ್ತು ರಸ್ತೆಗಳು ಹಾನಿಯಾಗುವಲ್ಲಿ ಪರಿಣಮಿಸಿತ್ತು.

ಬಿಡುಗಡೆ ಆದೇಶಗಳು, ಟ್ರಕ್ ಚಿಟ್, ಸಾಗಿಸಲಾದ ಪ್ರಮಾಣ, FCI ನಲ್ಲಿ ಹೊರಹೋಗುವ ಪ್ರಕ್ರಿಯೆ, WSD ಯಲ್ಲಿ ಒಳಬರುವ–ಹೊರಹೋಗುವ ಪ್ರಕ್ರಿಯೆ, ನ್ಯಾಯಬೆಲೆ ಅಂಗಡಿಗಳಲ್ಲಿ ಆಂತರಿಕ ಪ್ರಕ್ರಿಯೆ ಮುಂತಾದವುಗಳ ಮೇಲ್ವಿಚಾರಣೆಗಾಗಿ ಮೊಬೈಲ್ ಅಪ್ಲಿಕೇಶನ್ 'ಆಹಾರ ಟ್ರ್ಯಾಕ್' ಅಭಿವೃದ್ಧಿ ಹಂತದಲ್ಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು (ಏಪ್ರಿಲ್ 2023). ಅಲ್ಲದೆ, KFCSC ಸಗಟು ಗೋದಾಮುಗಳಲ್ಲಿ ತೂಕದ

ಯಂತ್ರಗಳ ಅಳವಡಿಕೆಗಾಗಿ ಇಲಾಖೆಯು ಏಪ್ರಿಲ್–2022 ಮತ್ತು ಮೇ–2022ರಲ್ಲಿ ಹಣಕಾಸು ಇಲಾಖೆಗೆ ಆಯವ್ಯಯ ಪ್ರಸ್ತಾವನೆಯನ್ನು ಸಲ್ಲಿಸಿದೆ ಎಂದೂ ತಿಳಿಸಲಾಯಿತು. ತೂಕದ ಯಂತ್ರಗಳನ್ನು ಅಳವಡಿಸಲು ಇಲಾಖೆಯು ಆಯವ್ಯಯ ಅನುಮೋದನೆಗಾಗಿ ಕಾಯುತ್ತಿದೆ ಎಂದು ಹೇಳಿತು.

## 5.5 ಸಗಟು ಸಾಗಾಣಿಕೆಯಲ್ಲಿ ಆಹಾರಧಾನ್ಯಗಳ ವಿಳಂಬಿತ ವಿತರಣೆ

ಆಯ್ಕೆಯಾದ ಎಂಟು ಜಿಲ್ಲೆಗಳ ಪೈಕಿ ಆರು ಜಿಲ್ಲೆಗಳಲ್ಲಿ ಆಹಾರ ಧಾನ್ಯಗಳನ್ನು ತಲುಪಿಸಲು ತೆಗೆದುಕೊಂಡ ಸಾಗಣೆ ಸಮಯವನ್ನು ಪರಿಶೀಲಿಸಲು FIST ಮಾಡ್ಯೂಲನ್ನು ಲೆಕ್ಕಪರಿಶೋಧನೆಯು ಪರೀಕ್ಷಾರ್ಥ–ತನಿಖೆ ನಡೆಸಿತು. ಫಲಿತಾಂಶಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–17: ವಿಳಂಬಿತ ವಿತರಣೆಯ ಮೇಲಿನ ಮಾಹಿತಿ**

| ಜಿಲ್ಲೆ | ಮಾದರಿ ಸಂಚರಣೆಗಳ ಸಂಖ್ಯೆ | ಭಾರತ ಆಹಾರ ಸಂಸ್ಥೆಯಿಂದ WSD ಗಳಿಗೆ ಆಹಾರಧಾನ್ಯವನ್ನು ಸರಬರಾಜು ಮಾಡಲು 4 ಅಥವಾ ಹೆಚ್ಚಿನ ದಿನಗಳನ್ನು ತೆಗೆದುಕೊಂಡ ಟ್ರಕ್ ಸಂಚರಣೆಗಳ ಸಂಖ್ಯೆ |
|---|---|---|
| ಬೀದರ್ | 588 | 23 |
| ಮಂಡ್ಯ | 470 | 37 |
| ವಿಜಯಪುರ | 749 | 21 |
| ಗದಗ | 363 | 30 |
| ರಾಯಚೂರು | 638 | 74 |
| ಕೊಡಗು | 192 | 92 |
| **ಒಟ್ಟು** | **3,000** | **257** |

ಭಾರತ ಆಹಾರ ನಿಗಮಗಳಿಂದ ಆಹಾರಧಾನ್ಯಗಳನ್ನು ಸಾಗಿಸಲು 4 ದಿನಗಳಿಗಿಂತ ಹೆಚ್ಚಿನ ವಿಳಂಬವನ್ನು ತಪ್ಪಿಸಬಹುದಾಗಿತ್ತು.

GPS ಆಧಾರಿತ ವಾಹನ ಟ್ರ್ಯಾಕಿಂಗ್ ವ್ಯವಸ್ಥೆಯ ಅಳವಡಿಕೆಗಾಗಿ ಇಲಾಖೆಯು RFP ಪ್ರಕಟಿಸಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

## 5.6 ಇತರೆ ಲೆಕ್ಕಪರಿಶೋಧನಾ ಅಂಶಗಳು

- WSD ಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆಯ ಸಂದರ್ಭದಲ್ಲಿ ದಾಸ್ತಾನನ್ನು ತೂಕ ಮಾಡುವ ಅಭ್ಯಾಸವು ಅಸ್ತಿತ್ವದಲ್ಲಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (KFCSC ರಾಯಚೂರು ಮತ್ತು KFCSC–ಮಾನ್ವಿ). ಅಂತಹ ತೂಕದ ರಸೀದಿಗಳ ಅನುಪಸ್ಥಿತಿಯಲ್ಲಿ, ವಿತರಿಸಿದ ಆಹಾರ ಧಾನ್ಯಗಳ ಪ್ರಮಾಣವನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ, ಇದು ದಾಸ್ತಾನುಗಳ ಹೊಂದಾಣಿಕೆಯ ಮೇಲೆ ಪರಿಣಾಮ ಬೀರುತ್ತದೆ. ಕೇವಲ ಎರಡು WSD ಗಳು (KFCSC–ಬನಶಂಕರಿ, RAPCMS–ಮಂಡ್ಯ) ಮಾತ್ರ ತೂಕದ ಯಂತ್ರದ ಸೌಲಭ್ಯವನ್ನು ಹೊಂದಿದ್ದವು.

- KFCSC–ರಾಯಚೂರು ಮತ್ತು KFCSC–ಮಾನ್ವಿಯ ಗೋದಾಮಿನ ನಿರ್ವಾಹಕರ ಕಛೇರಿಗಳು WSD ಗಳಿಂದ ದೂರದಲ್ಲಿದ್ದವು, ಇದು ಮೇಲ್ವಿಚಾರಣಾ ಅಂಶಗಳ ಮೇಲೆ ಪರಿಣಾಮ ಬೀರುತ್ತದೆ.
- FSSAI ಶಿಫಾರಸುಗಳ ಪ್ರಕಾರ, ಮಳೆನೀರು ಮಾಲಿನ್ಯದಿಂದ ಧಾನ್ಯಗಳನ್ನು ರಕ್ಷಿಸಲು ಎಲ್ಲಾ ಸರಕು ಎತ್ತುವ ಮತ್ತು ಇಳಿಸುವ ಸ್ಥಳಗಳಲ್ಲಿ ಶೆಡ್‌ಗಳಿರಬೇಕು. ಆದಾಗ್ಯೂ, ಪರೀಕ್ಷಾರ್ಥ–ತನಿಖೆ ನಡೆಸಿದ 18 WSD ಗಳಲ್ಲಿ ಎರಡರಲ್ಲಿ[11] ಮಾತ್ರ ಅಗತ್ಯವಿರುವಂತೆ ಟ್ರಕ್‌ಗಳಿಗೆ ಶೆಡ್ಡುಗಳನ್ನು ಒದಗಿಸಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉಳಿದ WSD ಗಳಲ್ಲಿ, ಟ್ರಕ್‌ಗಳಿಂದ ಆಹಾರ ಧಾನ್ಯಗಳನ್ನು ಸರಕು ಎತ್ತುವ ಮತ್ತು ಇಳಿಸುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತೆರೆದ ಪ್ರದೇಶದಲ್ಲಿ ನಡೆಸಲಾಗುತಿತ್ತು.

ಇಲಾಖೆಯನ್ನು ಬಲಪಡಿಸುವ ಆಯವ್ಯಯ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಯು ಅನುಮೋದಿಸಿರುವುದರಿಂದ ಮೇಲಿನ ಲೋಪದೋಷಗಳನ್ನು ಪರಿಹರಿಸಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು.

***ಶಿಫಾರಸು–6: ವಾಹನಗಳ ಸಾಮರ್ಥ್ಯವನ್ನು ಮೀರಿ ಅಧಿಕ ಹೊರೆ ಹೊತ್ತ ಸಾಗಣೆದಾರರಿಗೆ ದಂಡ ವಿಧಿಸುವುದನ್ನು, ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಮತ್ತು ಲೋಪದೋಷಗಳಿಗೆ ಸಂಬಂಧಪಟ್ಟ ಸಿಬ್ಬಂದಿಯ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿನ ಸಂಗ್ರಹಣಾ ಮತ್ತು ನಿರ್ವಹಣಾ ನಷ್ಟಗಳನ್ನು ಲೆಕ್ಕ ಹಾಕಬೇಕು ಮತ್ತು ಫಲಾನುಭವಿಗಳಿಗೆ ನೀಡುವ ಆಹಾರಧಾನ್ಯಗಳ ಕೊರತೆಗೆ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಬೇಕು.***

## 5.7 WSD ಗಳ ತಪಾಸಣೆಯಲ್ಲಿ ಕೊರತೆ

ಇಲಾಖೆ ಅಧಿಕಾರಿಗಳಿಗೆ WSD ಗಳ ತಪಾಸಣೆಗಾಗಿ ಸರ್ಕಾರವು, ಕೆಳಗೆ ಸೂಚಿಸಿರುವಂತೆ, ನಿರ್ದಿಷ್ಟ ಕಾರ್ಯನಿಯಮವನ್ನು ನಿಗದಿಪಡಿಸಿತ್ತು.

**ಕೋಷ್ಟಕ–18: WSD ಗಳ ಸಂಬಂಧವಾಗಿ ಕೈಗೊಳ್ಳಬೇಕಾದ ತಪಾಸಣೆಗಳು**

| ಪ್ರಾಧಿಕಾರ | ತಪಾಸಣೆಯ ವಿಧ | ನಡೆಸಬೇಕಿದ್ದ ತಪಾಸಣೆಗಳ ಸಂಖ್ಯೆ |
|---|---|---|
| ಉಪ ನಿರ್ದೇಶಕರು (ಡಿಡಿ) | WSD ಯ ಸಾಮಾನ್ಯ ತಪಾಸಣೆ | ಪ್ರತಿ ತಿಂಗಳಿಗೆ 5ರಿಂದ 8 |
| | WSD ಯ ವಿವರವಾದ ತಪಾಸಣೆ | ಪ್ರತಿ ತಿಂಗಳಿಗೆ 1ರಿಂದ 2 |
| ಆಹಾರ ಶಿರಸ್ತೇದಾರರು ಮತ್ತು ಆಹಾರ ನಿರೀಕ್ಷಕರು | WSD ಯ ಸಾಮಾನ್ಯ ತಪಾಸಣೆ | ಪ್ರತಿ ತಿಂಗಳು ಅವರ ಅಧಿಕಾರ ವ್ಯಾಪ್ತಿಯ ಎಲ್ಲ ಸಗಟು ಗೋದಾಮುಗಳಲ್ಲಿ |
| | WSD ಯ ವಿವರವಾದ ತಪಾಸಣೆ | ತಿಂಗಳಿಗೆ ಒಂದು ಬಾರಿ |

ಆದಾಗ್ಯೂ, ಜಿಲ್ಲಾ ಪ್ರಾಧಿಕಾರಗಳು 2017–18ರಿಂದ 2021–22ರ ಅವಧಿಯಲ್ಲಿ. ಕೋಷ್ಟಕ–20ರಲ್ಲಿ ವಿವರಿಸಿದಂತೆ WSD ಗಳ ಒಟ್ಟಾರೆ ತಪಾಸಣೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

[11]KFCSC–ಶಾಂತಿನಗರ ಮತ್ತು APCMS–ವೀರಾಜಪೇಟೆ.

**ಕೋಷ್ಟಕ–19: ಪ್ರಾಧಿಕಾರಗಳು ನಡೆಸಿದ ತಪಾಸಣೆಯಲ್ಲಿನ ಕೊರತೆಗಳು (ಶೇಕಡಾವಾರು)**

| ಕ್ರಮ ಸಂಖ್ಯೆ | ಜಿಲ್ಲೆ | ಉಪ ನಿರ್ದೇಶಕರು | | ಆಹಾರ ಶಿರಸ್ತೇದಾರ್ | | ಆಹಾರ ನಿರೀಕ್ಷಕರು | |
|---|---|---|---|---|---|---|---|
| | | ಸಾಮಾನ್ಯ ತಪಾಸಣೆ | ವಿವರವಾದ ತಪಾಸಣೆ | ಸಾಮಾನ್ಯ ತಪಾಸಣೆ | ವಿವರವಾದ ತಪಾಸಣೆ | ಸಾಮಾನ್ಯ ತಪಾಸಣೆ | ವಿವರವಾದ ತಪಾಸಣೆ |
| 1 | ಬೆಂಗಳೂರು ದಕ್ಷಿಣ ಐಆರ್‌ಎ | 43 | 73 | ಲಭ್ಯವಿಲ್ಲ | ಲಭ್ಯವಿಲ್ಲ | 0 | 97 |
| 2 | ಬೆಂಗಳೂರು ಪೂರ್ವ ಐಆರ್‌ಎ | 35 | 70 | ಲಭ್ಯವಿಲ್ಲ | ಲಭ್ಯವಿಲ್ಲ | 44 | 64 |
| 3 | ಮಂಡ್ಯ | 10 | 77 | 51 | 100 | 19 | 100 |
| 4 | ಬೀದರ್ | 16 | 2 | 100 | 97 | 100 | 87 |
| 5 | ವಿಜಯಪುರ | 49 | 100 | 77 | 100 | 70 | 100 |
| 6 | ಗದಗ | 83 | 45 | 99 | 100 | 100 | 100 |
| 7 | ರಾಯಚೂರು | 31 | 20 | 52 | 100 | 52 | 100 |
| 8 | ಕೊಡಗು | 48 | 100 | 100 | 100 | 96 | 100 |
| ಒಟ್ಟಾರೆ ಕೊರತೆ (ಶೇಕಡಾವಾರು) | | **39** | **61** | **80** | **100** | **60** | **94** |

ಆಧಾರ: ಜಿಲ್ಲೆಗಳ ಉಪನಿರ್ದೇಶಕರುಗಳ ದಾಖಲೆಗಳು

ಟಿಪ್ಪಣಿ: ಆಹಾರ ಶಿರಸ್ತೇದಾರರನ್ನು ಬೆಂಗಳೂರು ದಕ್ಷಿಣ IRA ಮತ್ತು ಬೆಂಗಳೂರು ಪೂರ್ವ IRA ಗಳಲ್ಲಿ ನಿಯೋಜಿಸಿರಲಿಲ್ಲ.

ತಪಾಸಣೆಯಲ್ಲಿನ ಕೊರತೆಯಿಂದಾಗಿ, **ಅಧ್ಯಾಯ–4ರಲ್ಲಿ** ಚರ್ಚಿಸಿದಂತೆ, ಅನೈರ್ಮಲ್ಯದ WSD ಅಭ್ಯಾಸಗಳು, ಕಲ್ನಾರಿನ ಮೇಲ್ಛಾವಣಿಯ ಪರಿಸ್ಥಿತಿಗಳಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿರುವುದು, ಮುಂತಾದ ಲೋಪಗಳಿದ್ದವು. ಇದಲ್ಲದೆ ಜಂಟಿ ಭೌತಿಕ ಪರಿಶೀಲನೆಯಲ್ಲಿ ಗಮನಿಸಿದಂತೆ ಉಪನಿರ್ದೇಶಕರಾಗಲೀ ಅಥವಾ ಆಹಾರ ಶಿರಸ್ತೇದಾರರಾಗಲೀ ಐದು WSD ಗಳಲ್ಲಿ ಯಾವುದೇ ತಪಾಸಣೆಗಳನ್ನು ಮಾಡಿರಲಿಲ್ಲ.

ಆಹಾರ–2.0 ಮತ್ತು FIST–2.0 ರಲ್ಲಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಜಾರಿಗೊಳಿಸಲು ಇಲಾಖೆಯು ಯೋಜಿಸುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

## 5.8 ಭೌತಿಕ ದಾಸ್ತಾನಿನ ಸಮನ್ವಯತೆ ಮತ್ತು ವಿವರವಾದ ಪ್ರಮಾಣಿತ ಕಾರ್ಯಾಚರಣಾ ವಿಧಾನದ (SOP) ಕೊರತೆ

ಭೌತಿಕ ದಾಸ್ತಾನು ಪ್ರಕಾರ ಮತ್ತು WSD ದಾಖಲೆಗಳ ಪ್ರಕಾರ ಆಹಾರಧಾನ್ಯಗಳ ಸಮನ್ವಯವನ್ನು ನಡೆಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಸಮನ್ವಯದ ಅನುಪಸ್ಥಿತಿಯಲ್ಲಿ, ಹಂಚಿಕೆಯ ಪ್ರಕಾರ ಸಂಪೂರ್ಣ ಸಂಗ್ರಹಣೆ ಮತ್ತು ಆಹಾರಧಾನ್ಯಗಳ ವಿತರಣೆಯನ್ನು ವ್ಯವಸ್ಥೆಯು ವರದಿ ಮಾಡುತ್ತಿದ್ದು, ಯಾವುದೇ ನಿಯಂತ್ರಣಗಳು ಅಸ್ತಿತ್ವದಲ್ಲಿಲ್ಲದ ಕಾರಣ ಕುಯುಕ್ತಿಗಳ ಸಂಭಾವ್ಯತೆಯಿದ್ದಿತು. KFCSC ಯ ಪ್ರಮಾಣಿತ ಕಾರ್ಯಾಚರಣಾ ವಿಧಾನ ಅಸ್ತಿತ್ವದಲ್ಲಿದ್ದರೂ ಸಹ ಸಂಗ್ರಹಣೆ ಮತ್ತು ಉಗ್ರಾಣ ಕಾರ್ಯಾಚರಣೆಗಳಿಗಾಗಿ ವಿಶೇಷ ಕೈಪಿಡಿ/ನಿಗದಿತ ಕಾರ್ಯಾಚರಣಾ ವಿಧಾನ/ವಿನ್ಯಾಸಗೊಳಿಸಿದ ಕಾರ್ಯವಿಧಾನಗಳ ಲಭ್ಯತೆಯಿಲ್ಲದಿದ್ದುದು WSD ಕಾರ್ಯಾಚರಣೆಯ ಮೇಲೆ ಪರಿಣಾಮ ಬೀರಿತ್ತು. ಇದರ ಅನುಪಸ್ಥಿತಿಯಲ್ಲಿ, ಪ್ರಮಾಣಿತ ಕಾರ್ಯಾಚರಣೆಗಳ ಕೊರತೆಯಿಂದಾಗಿ ಶೇಖರಣಾ ಚಟುವಟಿಕೆಗಳಲ್ಲಿನ ಲೋಪಗಳು, ನಷ್ಟಗಳ ಲೆಕ್ಕವಿಡುವುದು ಮತ್ತು ಗುಣಮಟ್ಟ ನಿಯಂತ್ರಣಗಳನ್ನು ನಿರ್ವಹಿಸಲಾಗಲಿಲ್ಲ.

ಸಗಟು ಗೋದಾಮುಗಳ ಅಭ್ಯಾಸಗಳ ಸುಧಾರಣೆಗೆ ಪ್ರಸ್ತಾವನೆಗಳನ್ನು ಸಲ್ಲಿಸಲು KFCSC ಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

## 5.9 ಭಾರತ ಸರ್ಕಾರದ TPDS ನಿಯಂತ್ರಣ ಆದೇಶದ ಅನುಸರಣೆ ಮಾಡದಿರುವುದು

ರಾಜ್ಯಗಳಿಂದ ಆಹಾರ ಧಾನ್ಯಗಳ ವಿತರಣೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ 2015ರ TPDS ನಿಯಂತ್ರಣ ಆದೇಶದ ಷರತ್ತು 8(3)ರ ಪ್ರಕಾರ, ಹಂಚಿಕೆ ತಿಂಗಳ ಹಿಂದಿನ ತಿಂಗಳ ಅಂತ್ಯದೊಳಗೆ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯಗಳ ವಿತರಣೆಯನ್ನು ರಾಜ್ಯವು ಖಚಿತಪಡಿಸಿಕೊಳ್ಳಬೇಕು ಮತ್ತು ಯಾವುದೇ ಸಂದರ್ಭದಲ್ಲಿ ಹಂಚಿಕೆ ತಿಂಗಳ ಮೊದಲ ವಾರದ ನಂತರ ಮಾಡಬಾರದು. ಆದಾಗ್ಯೂ, KFCSC ಯ ನಿಗದಿತ ಕಾರ್ಯಾಚರಣೆ ವಿಧಾನವು ಚಿಲ್ಲರೆ ವ್ಯಾಪಾರಿಗಳು ಸಗಟು ಕೇಂದ್ರದಿಂದ ಪ್ರತಿ ತಿಂಗಳ 15ನೇ ತಾರೀಖಿನ ಮೊದಲು ಹಂಚಲಾದ ಆಹಾರ ಧಾನ್ಯಗಳನ್ನು ಎತ್ತಬೇಕು ಮತ್ತು ಪ್ರತಿ ತಿಂಗಳ 25ನೇ ತಾರೀಖಿನ ಮೊದಲು ಪಡಿತರ ಚೀಟಿದಾರರಿಗೆ ವಿತರಿಸಲು ಕಡ್ಡಾಯಗೊಳಿಸುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, KFCSC ಯ ಪ್ರಮಾಣಿತ ಗುಣಮಟ್ಟದ ಕಾರ್ಯಾಚರಣಾ ವಿಧಾನದಲ್ಲಿ ಹೇಳಲಾದ ಆಹಾರಧಾನ್ಯಗಳ ವಿತರಣೆಯ ಸಮಯಾವಧಿಯು TPDS ನಿಯಂತ್ರಣ ಆದೇಶಕ್ಕೆ ಅನುಗುಣವಾಗಿರಲಿಲ್ಲ.

## 5.10 ಅನುಮತಿಯಿಲ್ಲದೆ/ಮಾನ್ಯತೆ ಮುಗಿದ ಪರವಾನಗಿಯೊಂದಿಗೆ WSD ಗಳ ಕಾರ್ಯಾಚರಣೆ

ಎರಡು WSD ಗಳಿಗೆ (KFCSC ರಾಯಚೂರು ಮತ್ತು ಮಾನ್ವಿ) ಸಂಬಂಧಿಸಿದಂತೆ PDS ನಿಯಂತ್ರಣ ಆದೇಶದಡಿಯಲ್ಲಿ ಅಗತ್ಯವಿರುವ ಇಲಾಖಾ ಪರವಾನಗಿಯು ದಾಖಲೆಯಲ್ಲಿರಲಿಲ್ಲ ಮತ್ತು ಎರಡು WSD ಗಳ ಪರವಾನಗಿಗಳನ್ನು ನವೀಕರಿಸಿರಲಿಲ್ಲ (KFCSC ಮಡಿಕೇರಿ ಮತ್ತು APCMS ವಿರಾಜಪೇಟೆ) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು, ಈ WSD ಗಳು ಸಕ್ಷಮ ಪ್ರಾಧಿಕಾರದಿಂದ ಸೂಕ್ತವಾದ ಅಧಿಕಾರವಿಲ್ಲದೇ ಕಾರ್ಯನಿರ್ವಹಿಸುತ್ತಿರುವುದನ್ನು ಮತ್ತು ಮೇಲ್ವಿಚಾರಣಾ ನಿಯಂತ್ರಣಗಳ ಕೊರತೆಯನ್ನು ಸೂಚಿಸುತ್ತದೆ.

ಆಹಾರ–2.0 ಮತ್ತು FIST–2.0ರಲ್ಲಿ ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಜಾರಿಗೊಳಿಸಲು ಇಲಾಖೆಯು ಯೋಜಿಸುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

## 5.11 WSD ಗಳಲ್ಲಿ ಗುಣಮಟ್ಟ ನಿಯಂತ್ರಣಗಳು

FSSAI ಮಾರ್ಗಸೂಚಿಗಳ ಪ್ರಕಾರ, ಮಾನ್ಯತೆ ಪಡೆದ, ಅನುಮೋದಿತ ಮತ್ತು ಚಾಲ್ತಿಯಲ್ಲಿರುವ ಪ್ರಮಾಣಪತ್ರವನ್ನು ಹೊಂದಿರುವ ತರಬೇತಿ ಪಡೆದ ಮತ್ತು ಅನುಭವಿ ಫ್ಯೂಮಿಗೇಟರ್‌ನಿಂದ ಫ್ಯೂಮಿಗೇಶನ್ ಸೇರಿದಂತೆ ಸೋಂಕು ನಿಯಂತ್ರಣವನ್ನು ಕೈಗೊಳ್ಳಬೇಕು. ಕನಿಷ್ಠ ಆರು ತಿಂಗಳಿಗೊಮ್ಮೆ ಎಲ್ಲಾ ಗುಣಮಟ್ಟದ ನಿಯತಾಂಕಗಳು, ಉಳಿಕೆಗಳು, ಮಾಲಿನ್ಯಕಾರಕಗಳು, ಟಾಕ್ಸಿನ್‌ಗಳು ಇತ್ಯಾದಿಗಳಿಗಾಗಿ ದಾಸ್ತಾನು ಸ್ಥಳಗಳಿಂದ ಮಾದರಿಗಳನ್ನು ಪರೀಕ್ಷಿಸಬೇಕು.

ಯಾವುದೇ ಸಮರ್ಥ ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿರಲಿಲ್ಲವಾದ್ದರಿಂದ ಇಲಾಖೆಯಲ್ಲಿ ಆಹಾರ ಧಾನ್ಯಗಳ ಗುಣಮಟ್ಟ ನಿಯಂತ್ರಣ ಕಾರ್ಯವಿಧಾನದ ಸಂಪೂರ್ಣ ಅನುಪಸ್ಥಿತಿಯಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಆಹಾರಧಾನ್ಯಗಳ ಗುಣಮಟ್ಟವನ್ನು ಪರೀಕ್ಷಿಸಲು ತೂಕದ ವ್ಯತ್ಯಾಸಗಳು, ಕೀಟಗಳ ಶೇಕಡಾವಾರು, ತೇವಾಂಶದ ಶೇಕಡಾವಾರು, ತಾಪಮಾನ ಇತ್ಯಾದಿ ಗುಣಮಟ್ಟದ ನಿಯತಾಂಕಗಳನ್ನು ದೃಢೀಕರಿಸಲು ಮತ್ತು ನಿಯತಕಾಲಿಕವಾಗಿ ನಿಗದಿತ ನಿಯಂತ್ರಣ ಕ್ರಮವನ್ನು ಕೈಗೊಳ್ಳಲು ಯಾವುದೇ ಪರೀಕ್ಷಾ ಸೌಲಭ್ಯಗಳು ಅಥವಾ ಪ್ರಯೋಗಶಾಲಾ ಉಪಕರಣಗಳು ಲಭ್ಯವಿರಲಿಲ್ಲ.

KFCSC ಗುಣಮಟ್ಟದ ಮತ್ತು ಉತ್ತಮ ವೇರ್‌ಹೌಸಿಂಗ್ ಅಭ್ಯಾಸಗಳ ಆಧಾರದ ಮೇಲೆ WSD ಗಳ ಅಭ್ಯಾಸಗಳನ್ನು ಸುಧಾರಿಸಲು ಪ್ರಸ್ತಾವನೆಯನ್ನು ಸಿದ್ಧಪಡಿಸುತ್ತದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2023).

***ಶಿಫಾರಸು–7: ರಾಜ್ಯ ಸರ್ಕಾರವು ಎಲ್ಲಾ ಹಂತಗಳಲ್ಲಿ ಆಹಾರ ಧಾನ್ಯಗಳ ಲೆಕ್ಕವಿಡಲು ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು ರೂಪಿಸಬೇಕು ಮತ್ತು ಪರಿಣಾಮಕಾರಿ ಸರಬರಾಜು ವ್ಯವಸ್ಥೆಯ ನಿರ್ವಹಣೆಗಾಗಿ PDS ಚಟುವಟಿಕೆಗಳ ಮಾಸಿಕ ಕ್ಯಾಲೆಂಡರ್‌ಗೆ ಬದ್ಧವಾಗಿರಬೇಕು ಹಾಗೂ ಲೋಪಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಅಲ್ಲದೆ, WSD ಗಳು ಅಧಿಕೃತ/ಮಾನ್ಯ ಪರವಾನಗಿಗಳೊಂದಿಗೆ ಕಾರ್ಯ ನಿರ್ವಹಿಸುತ್ತವೆ ಮತ್ತು FSSAI ಮಾರ್ಗಸೂಚಿಗಳ ಪ್ರಕಾರ ಆಹಾರ ಧಾನ್ಯಗಳ ಗುಣಮಟ್ಟದ ನಿಯಂತ್ರಣಗಳನ್ನು ನಿರ್ವಹಿಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.***

## 5.12 ನ್ಯಾಯಬೆಲೆ ಅಂಗಡಿಗಳಲ್ಲಿ ಆಂತರಿಕ ನಿಯಂತ್ರಣಗಳು – ನ್ಯಾಯಬೆಲೆ ಅಂಗಡಿಗಳ ತಪಾಸಣೆಯಲ್ಲಿ ಕೊರತೆ

TPDS ನಿಯಂತ್ರಣ ಆದೇಶ 2015ರ ಷರತ್ತು 11(1) ಪ್ರಕಾರ ರಾಜ್ಯ ಸರ್ಕಾರವು ನಿಗದಿಪಡಿಸಿದ ಪ್ರಾಧಿಕಾರದಿಂದ ಮೂರು ತಿಂಗಳಿಗೊಮ್ಮೆ ನ್ಯಾಯಬೆಲೆ ಅಂಗಡಿಗಳ ನಿಯಮಿತ ತಪಾಸಣೆಯನ್ನು ಖಚಿತಪಡಿಸಿಕೊಳ್ಳಬೇಕು. ತಪಾಸಣೆಯ ವೇಳಾಪಟ್ಟಿ, ಚೆಕ್ ಪಾಯಿಂಟ್‌ಗಳ ಪಟ್ಟಿ ಮತ್ತು ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಜವಾಬ್ದಾರರಾಗಿರುವ ಅಧಿಕಾರಿಗಳನ್ನು ನಿಗದಿಪಡಿಸಿರುವ ಆದೇಶಗಳನ್ನು ರಾಜ್ಯ ಸರ್ಕಾರವು ಹೊರಡಿಸಬೇಕು. ಅದರಂತೆ, ರಾಜ್ಯ ಸರ್ಕಾರವು, ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ, ಇಲಾಖಾ ಅಧಿಕಾರಿಗಳಿಂದ ತಪಾಸಣೆಗಾಗಿ ನಿರ್ದಿಷ್ಟ ಕಾರ್ಯನಿಯಮವನ್ನು ನಿಗದಿಪಡಿಸಿತ್ತು.

**ಕೋಷ್ಟಕ–20: ಅಧಿಕಾರಿಗಳು ಕೈಗೊಳ್ಳಬೇಕಾದ ತಪಾಸಣೆಯಲ್ಲಿನ ವಿಧಗಳು**

| ಜಿಲ್ಲಾ ಅಧಿಕಾರಿಗಳು | ತಪಾಸಣೆಯ ವಿಧ | ತಪಾಸಣೆಯ ಸಂಖ್ಯೆ |
|---|---|---|
| ಉಪ ನಿರ್ದೇಶಕರು | ಸಾಮಾನ್ಯ ತಪಾಸಣೆ | ಪ್ರತಿ ತಿಂಗಳು 35ರಿಂದ 50 ನ್ಯಾಯಬೆಲೆ ಅಂಗಡಿಗಳು |
| | ವಿವರವಾದ ತಪಾಸಣೆ | ಪ್ರತಿ ತಿಂಗಳು 5 ನ್ಯಾಯಬೆಲೆ ಅಂಗಡಿಗಳು |
| | FCI ಗೋದಾಮಿನ ತಪಾಸಣೆ | ವಾರಕ್ಕೆ ಒಂದು ಸಾರಿ |
| ಆಹಾರ ಶಿರಸ್ತೇದಾರರು ಮತ್ತು ಆಹಾರ ನಿರೀಕ್ಷಕರು | ಸಾಮಾನ್ಯ ತಪಾಸಣೆ | ಪ್ರತಿ ತಿಂಗಳು 30–40 ನ್ಯಾಯಬೆಲೆ ಅಂಗಡಿಗಳು |
| | ವಿವರವಾದ ತಪಾಸಣೆ | ಪ್ರತಿ ತಿಂಗಳು 5 ನ್ಯಾಯಬೆಲೆ ಅಂಗಡಿಗಳು |
| | ತೀವ್ರ ತಪಾಸಣೆ | ಪ್ರತಿ ತಿಂಗಳು 1 ನ್ಯಾಯಬೆಲೆ ಅಂಗಡಿ |

ಆದರೆ, 2017–18 ರಿಂದ 2021–22ರ ಅವಧಿಯಲ್ಲಿ ಜಿಲ್ಲಾ ಅಧಿಕಾರಿಗಳು ನಡೆಸಿದ ನ್ಯಾಯಬೆಲೆ ಅಂಗಡಿಗಳ ಒಟ್ಟಾರೆ ತಪಾಸಣೆಗಳು, ಕೋಷ್ಟಕ–22ರಲ್ಲಿ ವಿವರಿಸಿದಂತೆ, ನಿಗದಿಪಡಿಸಲಾದ ಸಂಖ್ಯೆಗಳಿಗೆ ಅನುಗುಣವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

